ಶುಕ್ರವಾರ, ಆಗಸ್ಟ್ 18, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 229 | ಪುಟ 16
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಜವಾರಿ ನಾಡಿನತ್ತ ಸವಾರಿ–ನಟ ಸಂಯುಕ್ತ ಹೊರನಾಡು ಸಂದರ್ಶನ



ಆಳ–ಅಗಲ
ತೆರಿಗೆ ಕಟ್ಟಿದರೂ ಹೆದ್ದಾರಿ ಬಳಕೆಗೆ ಶುಲ್ಕ

ಸೂಕ್ಷ್ಮ ವಲಯದಲ್ಲಿ ಕಟ್ಟಡ: ನಟ ಗಣೇಶ್‌ಗೆ ನೋಟಿಸ್ 8

ಚಂದ್ರನಂಗಳದತ್ತ ಲ್ಯಾಂಡರ್ ಪಯಣ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,151	19,365	₹60,220 (ಬೆಂಗಳೂರು)	₹71,600 (ಬೆಂಗಳೂರು)	83.09

ಕಾಗೋಡು ತಿಮ್ಮಪ್ಪಗೆ ಅರಸು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ಹಾಗೂ ಹಿರಿಯ ರಾಜಕಾರಣಿ ಕಾಗೋಡು ತಿಮ್ಮಪ್ಪ ಅವರಿಗೆ 2023–24 ನೇ ಸಾಲಿನ ದೇವರಾಜ ಅರಸು ಪ್ರಶಸ್ತಿ ಘೋಷಿಸಲಾಗಿದೆ.



ಇದೇ 20 ರಂದು ವಿಧಾನ ಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ನಡೆಯುವ ದೇವರಾಜ ಅರಸು ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ. ಪ್ರಶಸ್ತಿಯು ₹5 ಲಕ್ಷ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಸಾಗರ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಕಾಗೋಡು ತಿಮ್ಮಪ್ಪ ಅವರು ಆರೋಗ್ಯ, ಕಂದಾಯ, ಸಮಾಜ ಕಲ್ಯಾಣ ಮತ್ತು ಇತರ ಖಾತೆಗಳ ಸಚಿವರಾಗಿ ಹಾಗೂ ವಿಧಾನಸಭಾ ಸಭಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹಲವು ಜಿಲ್ಲೆಗಳ 45 ಸ್ಥಳಗಳಲ್ಲಿ ಲೋಕಾಯುಕ್ತ ಪೊಲೀಸ್ ಶೋಧ

ಕೋಟಿ ಕುಳಗಳು ಬಲೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಹೆಚ್ಚುವರಿ ಜಿಲ್ಲಾಧಿಕಾರಿ ನಂಜುಂಡೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನಿರ್ದೇಶಕರಾಗಿ ನಿವೃತ್ತರಾಗಿರುವ ಭುವನಹಳ್ಳಿ ನಾಗರಾಜ್ ಸೇರಿದಂತೆ 14 ಅಧಿಕಾರಿಗಳ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದಡಿ ಎಫ್‌ಐಆರ್ ದಾಖಲಿಸಿರುವ ಲೋಕಾಯುಕ್ತ ಪೊಲೀಸರು, ರಾಜ್ಯದ ಹಲವು ಜಿಲ್ಲೆಗಳ 45 ಸ್ಥಳಗಳಲ್ಲಿ ಗುರುವಾರ ಏಕಕಾಲಕ್ಕೆ ಶೋಧ ನಡೆಸಿದ್ದಾರೆ.

ದೇವನಹಳ್ಳಿಯ ತಹಶೀಲ್ದಾರ್ ಶಿವರಾಜು, ಲಂಚ ಪ್ರಕರಣದಲ್ಲಿ ಬಂಧಿತರಾಗಿ ನ್ಯಾಯಾಂಗ ಬಂಧನದಲ್ಲಿರುವ ಬಿಬಿಎಂಪಿ ಮಹದೇವಪುರ ವಲಯದ ಕಂದಾಯ ನಿರೀಕ್ಷಕ ಎಸ್. ನಟರಾಜ್, ಚಿಕ್ಕಜಾಲ ಗ್ರಾಮ ಪಂಚಾಯಿತಿ ಸದಸ್ಯ ಲಕ್ಷ್ಮೀಪತಿ, ಬೀದರ್ ಜಿಲ್ಲೆ ಚಿಟಗುಪ್ಪ ಪೊಲೀಸ್ ಠಾಣೆ ಕಾನ್‌ಸ್ಟೆಬಲ್ ವಿಜಯ್ ಕುಮಾರ್ ಮತ್ತು ಧಾರವಾಡ ಟೌನ್ ಪೊಲೀಸ್ ಠಾಣೆ ಕಾನ್‌ಸ್ಟೆಬಲ್ ಶಿವಾನಂದ ಮಾನಕರ್ ದಾಳಿಗೊಳಗಾದವರಲ್ಲಿ ಸೇರಿದ್ದಾರೆ.

ಬೆಂಗಳೂರು ನಗರ, ತುಮಕೂರು, ಮೈಸೂರು, ಕೊಡಗು, ದಾವಣಗೆರೆ, ಚಿತ್ರದುರ್ಗ, ಧಾರವಾಡ, ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಲೋಕಾಯುಕ್ತ ಪೊಲೀಸರು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಒಟ್ಟು 13 ಎಫ್‌ಐಆರ್ ದಾಖಲಿಸಿದ್ದಾರೆ. ಆರೋಪಿಗಳ ಮನೆಗಳು, ಅವರ ನಿಕಟವರ್ತಿಗಳ ಮನೆಗಳು, ಖಾಸಗಿ ಕಂಪನಿಗಳು, ಉದ್ದಿಮೆಗಳ ಕಚೇರಿಗಳು ಸೇರಿದಂತೆ 45 ಸ್ಥಳಗಳ ಮೇಲೆ ಗುರುವಾರ ನಸುಕಿನ ಜಾವ ಏಕಕಾಲಕ್ಕೆ ದಾಳಿ ಮಾಡಿದ ತನಿಖಾ ತಂಡಗಳು, ಇಡೀ ದಿನ ಶೋಧ ನಡೆಸಿವೆ. ಕೆಲವೆಡೆ ತಡರಾತ್ರಿಯಲ್ಲೂ ಶೋಧ ಮುಂದುವರಿದಿತ್ತು.

‘ಎಲ್ಲ ಆರೋಪಿಗಳೂ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವುದಕ್ಕೆ



ಕೊಡಗಿನ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ (ಕುಳಿತವರು) ಅವರ ನಿವಾಸದಲ್ಲಿ ಸಿಕ್ಕಿದ ನಗದು, ಚಿನ್ನಾಭರಣ

ಯಾರ ಬಳಿ ಎಷ್ಟು ಆಸ್ತಿ?

ನಂಜುಂಡೇಗೌಡ (ಹೆಚ್ಚುವರಿ ಜಿಲ್ಲಾಧಿಕಾರಿ, ಕೊಡಗು)	
ಪತ್ತೆಯಾಗಿರುವ ಆಸ್ತಿ	₹3.53 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	243.20%
ಶಿವರಾಜು (ಗ್ರೇಡ್–2 ತಹಶೀಲ್ದಾರ್)	
ಪತ್ತೆಯಾಗಿರುವ ಆಸ್ತಿ	₹4.15 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	315%
ಲಕ್ಷ್ಮೀಪತಿ (ಚಿಕ್ಕಜಾಲ ಗ್ರಾ.ಪಂ. ಸದಸ್ಯ)	
ಪತ್ತೆಯಾಗಿರುವ ಆಸ್ತಿ	₹3.95 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	270%
ಎಸ್. ಭಾರತಿ (ಇಇ, ಕೆರೆ ನಿರ್ವಹಣೆ, ಬಿಬಿಎಂಪಿ)	
ಕೆ. ಮಹೇಶ್ (ಎಇ, ಸಣ್ಣ ನೀರಾವರಿ ಇಲಾಖೆ, ಹೊಳಲ್ಕೆರೆ)	
ಪತ್ತೆಯಾಗಿರುವ ಆಸ್ತಿ	₹1.08 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	211%
ವಿಜಯಕುಮಾರ್ (ಕಾನ್‌ಸ್ಟೆಬಲ್, ಚಿಟಗುಪ್ಪ ಪೊಲೀಸ್ ಠಾಣೆ)	
ಪತ್ತೆಯಾಗಿರುವ ಆಸ್ತಿ	₹1.80 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	136%

ಶೋಧದ ವೇಳೆ ಸಾಕ್ಷ್ಯಗಳು ಲಭಿಸಿವೆ. ಸ್ಥಿರಾಸ್ತಿಗಳ ಒಡೆತನಕ್ಕೆ ಸಂಬಂಧಿಸಿದ ದಾಖಲೆಗಳು, ಬ್ಯಾಂಕ್ ಪಾಸ್ ಪುಸ್ತಕಗಳು, ಚಿನ್ನಾಭರಣ, ಬೆಳ್ಳಿ, ನಗದು ವಶಕ್ಕೆ ಪಡೆಯಲಾಗಿದೆ’ ಎಂದು ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ದಾಖಲೆಗಳು ವಶಕ್ಕೆ: ಶಿವರಾಜು ಅವರನ್ನು ದೇವನಹಳ್ಳಿಯಿಂದ ವರ್ಗಾವಣೆಗೊಳಿಸಿ ಇತ್ತೀಚೆಗೆ ಆದೇಶ ಹೊರಡಿಸಲಾಗಿತ್ತು. ವರ್ಗಾವಣೆ ಪ್ರಶ್ನಿಸಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿ, ಅದೇ ಸ್ಥಾನದಲ್ಲಿ ಮುಂದುವರಿದಿದ್ದರು.

5ನೇ ಪುಟ ನೋಡಿ

ನಾಪತ್ತೆಯಾದ ಭುವನಹಳ್ಳಿ ನಾಗರಾಜ್

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಜಿ ನಿರ್ದೇಶಕ ಭುವನಹಳ್ಳಿ ನಾಗರಾಜ್ ಲೋಕಾಯುಕ್ತ ಪೊಲೀಸರು ದಾಳಿ ಮಾಡಿರುವ ಮಾಹಿತಿ ಗೊತ್ತಾಗುತ್ತಿದ್ದಂತೆಯೇ ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ.

ನಿವೃತ್ತಿ ಬಳಿಕ ಅವರನ್ನು ತುಮಕೂರು ಜಿಲ್ಲಾ ಪಂಚಾಯಿತಿಯ ಕುಂದುಕೊರತೆ ನಿವಾರಣಾ ಘಟಕದ ಮುಖ್ಯಸ್ಥರನ್ನಾಗಿ ನೇಮಿಸಲಾಗಿತ್ತು. ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಮನೆ, ಶಿರಾದಲ್ಲಿರುವ ಮನೆ ಸೇರಿದಂತೆ ಅವರಿಗೆ ಸಂಬಂಧಿಸಿದ ಹಲವು ಕಡೆಗಳಲ್ಲಿ ಶೋಧ ನಡೆಸಲಾಗಿದೆ. ಅವರು ಭಾರಿ ಪ್ರಮಾಣದ ಆಸ್ತಿಗಳನ್ನು ಹೊಂದಿರುವುದು ಪತ್ತೆಯಾಗಿದೆ. ನಾಗರಾಜ್, ತನಿಖಾಧಿಕಾರಿ ಎದುರು ಹಾಜರಾಗದೇ ತಲೆಮರೆಸಿಕೊಂಡಿದ್ದಾರೆ ಎಂದು ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ದೂರಿನ ಬೆನ್ನತ್ತಿ ದಾಳಿ: ಚಿಕ್ಕಜಾಲ ಗ್ರಾಮ ಪಂಚಾಯಿತಿ ಸದಸ್ಯ ಲಕ್ಷ್ಮೀಪತಿ ಸರ್ಕಾರದ ಯೋಜನೆಗಳ ಅನುದಾನ ದುರ್ಬಳಕೆ ಮಾಡಿಕೊಂಡಿರುವ ಕುರಿತು ದೂರು ಬಂದಿತ್ತು. ಆ ಬಗ್ಗೆ ತನಿಖೆ ನಡೆಸಿದಾಗ ಆರೋಪಿಯು ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಮಾಹಿತಿ ಲಭಿಸಿತ್ತು. ಅದರ ಆಧಾರದಲ್ಲಿ ಎಫ್‌ಐಆರ್ ದಾಖಲಿಸಿ, ದಾಳಿ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಬಿಲ್ಕಿಸ್ ಪ್ರಕರಣ: 11ಮಂದಿಗೆ ಕ್ಷಮೆ ಏಕೆ –‘ಸುಪ್ರೀಂ’ ಪ್ರಶ್ನೆ

ಗುಜರಾತ್ ಸರ್ಕಾರಕ್ಕೆ ಚಾಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳಿಗಷ್ಟೇ ಕ್ಷಮೆ ಏಕೆ? ರಾಜ್ಯದಲ್ಲಿರುವ ಉಳಿದ ಅಪರಾಧಿಗಳಿಗೂ ಈ ಮಾನದಂಡ ಪಾಲಿಸಬೇಕಲ್ಲವೇ?’ ಎಂದು ಸುಪ್ರೀಂ ಕೋರ್ಟ್ ಗುರುವಾರ ಗುಜರಾತ್ ಸರ್ಕಾರಕ್ಕೆ ಚಾಟಿ ಬೀಸಿದೆ.



ಬಿಲ್ಕಿಸ್ ಬಾನು

ಬಿಲ್ಕಿಸ್ ಬಾನು ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಅಪಾಯಕಾರಿ ಸನ್ನಿವೇಶಕ್ಕೆ ಅವಕಾಶ ಮಾಡಿಕೊಡುವಂತಹ ಹಾಗೂ ಮನಸ್ಸಿಗೆ ತೋಚಿದ ನಿರ್ಧಾರ ಕೈಗೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಈ ಪ್ರಕರಣದ 11 ಅಪರಾಧಿಗಳನ್ನು ಶಿಕ್ಷೆಯ ಅವಧಿ ಪೂರ್ಣಗೊಳ್ಳುವ ಮೊದಲೇ ಬಿಡುಗಡೆ ಮಾಡಿರುವ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನಾ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ವಿಭಾಗೀಯ ಪೀಠವು ನಡೆಸಿತು.

‘ಅವಧಿ ಪೂರ್ಣಗೊಳ್ಳುವ ಮೊದಲೇ ಅಪರಾಧಿಗಳನ್ನು ಬಿಡುಗಡೆಗೊಳಿಸುವ ಕ್ಷಮಾಪಣೆ ನೀತಿಯನ್ನು ಆಯ್ದ ಅಪರಾಧಿಗಳಿಗಷ್ಟೇ ಅನ್ವಯಿಸುವುದು ಸರಿಯಲ್ಲ. ಸಮಾಜದೊಂದಿಗೆ ಮತ್ತೆ ಬೆರೆಯಲು ಉಳಿದ ಅಪರಾಧಿಗಳಿಗೂ ಈ ಮಾನದಂಡ ಪಾಲಿಸಬೇಕಿದೆ’ ಎಂದು ಅಭಿಪ್ರಾಯಪಟ್ಟಿತು.

ಗುಜರಾತ್ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು, ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಳ್ಳಲು ಮುಂದಾದರು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪೀಠವು, ‘ಉಳಿದವರಿಗೂ ಸರ್ಕಾರದ ಈ ನೀತಿ ಅನ್ವಯಿಸಲು ಏಕೆ ಸಾಧ್ಯವಾಗುವುದಿಲ್ಲ’ ಎಂದು ಪ್ರಶ್ನಿಸಿತು.

‘2002ರ ಗುಜರಾತ್ ದಂಗೆ ವೇಳೆ ಬಿಲ್ಕಿಸ್ ಬಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ. ಜೊತೆಗೆ, ಆಕೆಯ ಕುಟುಂಬದ ಹತ್ಯೆಯಾಗಿದೆ. ಈ ಪ್ರಕರಣದ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಮರಣದಂಡನೆ ನಂತರದ ಎರಡನೇ ಅತಿದೊಡ್ಡ ಶಿಕ್ಷೆ ಇದಾಗಿದೆ. ಇಂತಹ ಸಂದರ್ಭದಲ್ಲಿಯೂ ಅವರನ್ನು ಅವಧಿ-ಪೂರ್ಣಗೊಳ್ಳುವ ಮೊದಲೇ ಬಿಡುಗಡೆ ಮಾಡಲು ಹೇಗೆ ಸಾಧ್ಯ? ಎಂದು ಕೇಳಿತು.

9ನೇ ಪುಟ ನೋಡಿ

ಬಿಜೆಪಿ ಅವಧಿಯ ಟೆಂಡರ್, ಕಾಮಗಾರಿ

ಶೇ 40 ಲಂಚ: ತನಿಖೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಕಾಮಗಾರಿಗಳ ಟೆಂಡರ್, ಪ್ಯಾಕೇಜ್ ಪದ್ಧತಿ, ಪುನರ್ ಅಂದಾಜು, ಬಾಕಿ ಮೊತ್ತ ಬಿಡುಗಡೆ ಮತ್ತಿತರ ವಿಷಯಗಳಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಮಾಡಿದ್ದ ಆರೋಪದ ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.



ಈ ಸಮಿತಿಯು ಸ್ಥಳ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ, ವಿವರವಾದ ತನಿಖೆ ನಡೆಸಿ, ಲೋಪದೋಷಗಳ ಮಾಹಿತಿ ಹಾಗೂ ಅದಕ್ಕೆ ಕಾರಣರಾದ ಆರೋಪಿಗಳನ್ನು ಪತ್ತೆ ಮಾಡಿ ಸಂಪೂರ್ಣ ವರದಿಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ 30 ದಿನಗಳ ಒಳಗೆ ಸಲ್ಲಿಸಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

9ನೇ ಪುಟ ನೋಡಿ

ಎನ್‌ಸಿಆರ್ ದಾಖಲು

ಬೆಂಗಳೂರು: ‘ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿಳಂಬ ನೀತಿ ಅನುಸರಿಸುತ್ತಿದ್ದಾರೆ’ ಎಂದು ಆರೋಪಿಸಿ ರಾಜ್ಯಪಾಲರಿಗೆ ದೂರು ನೀಡಿರುವ ಬೆನ್ನಲ್ಲೇ ಬಿಬಿಎಂಪಿಯ 57 ಗುತ್ತಿಗೆದಾರರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎನ್‌ಸಿಆರ್ ದಾಖಲಾಗಿದೆ. 8

5 ವರ್ಷಗಳ ಹಳೆಯ ಬಿಲ್‌ಗಳಿಗೆ ಮುಕ್ತಿ

ಬೆಂಗಳೂರು: ಗುತ್ತಿಗೆದಾರರಿಗೆ ಬಿಲ್ ಪಾವತಿಯಲ್ಲಿ ಜ್ಯೇಷ್ಠತೆ ಉಲ್ಲಂಘನೆಗೆ ಕಡಿವಾಣ ಹಾಕಲು ಹೊಸ ಕ್ರಮ ಪರಿಚಯಿಸಿರುವ ಲೋಕೋಪಯೋಗಿ ಇಲಾಖೆ, ಐದು ವರ್ಷಗಳಿಗೂ ಹೆಚ್ಚು ಕಾಲದಿಂದ ಬಾಕಿ ಉಳಿದಿದ್ದ ಬಿಲ್‌ಗಳಿಗೆ ಮುಕ್ತಿ ನೀಡಿದೆ. 8

ಕೆ.ಆರ್.ಪುರದಲ್ಲಿ ರಾಮರಾಜ್ ಶೋರೂಂ ಆರಂಭ

ಬೆಂಗಳೂರು: ಹತ್ತಿಬಟ್ಟೆಯ ಮಾರಾಟ ಸಂಸ್ಥೆಯಾದ 'ರಾಮರಾಜ್'ನ ನೂತನ ಶೋರೂಂ ಕೆ.ಆರ್. ಪುರದಲ್ಲಿ ಗುರುವಾರ ಆರಂಭಗೊಂಡಿತು.


ದೇಶದ ವಿಶ್ವಾಸಾರ್ಹ ಮತ್ತು ಆಕರ್ಷಕ ಬ್ರಾಂಡ್‌ನ ಪಟ್ಟಿಯಲ್ಲಿ ರಾಮರಾಜ್‌ನ ಧೋತಿ, ಅಂಗಿ,ಬನಿಯನ್‌ಗಳು ಅಗ್ರಪಂಕ್ತಿ ಪಡೆದಿವೆ. ದಕ್ಷಿಣ ರಾಜ್ಯಗಳ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಉಳಿಸಲು ರಾಮರಾಜ್ ಕೊಡುಗೆ ನೀಡುತ್ತಿದೆ. ಬ್ಯಾಕ್ಟೀರಿಯಾ ಮತ್ತು ವೈರಲ್ ಸೋಂಕುಗಳಿಂದ ರಕ್ಷಿಸಲು ಬ್ಯಾಕ್ಟೀರಿಯಾ ವಿರೋಧಿ ಧೋತಿಗಳನ್ನು ತಯಾರಿಸಲಾಗಿದೆ ಎಂದು ರಾಮರಾಜ್ ಸಂಸ್ಥೆ ತಿಳಿಸಿದೆ. ಮಹಿಳೆಯರಿಗಾಗಿ ಹತ್ತಿ ಮತ್ತು ರೇಷ್ಮೆ ಸೀರೆಗಳ ವಿಶೇಷ ವಿಭಾಗಗಳನ್ನು ರಾಮರಾಜ್ ಪರಿಚಯಿಸಿದೆ. ಯುವಜನರಿಗೆ ಬೇಕಾದ ಬಟ್ಟೆಗಳೂ ಇಲ್ಲಿವೆ ಎಂದು ತಿಳಿಸಿದ್ದಾರೆ.

ಸ್ಪರ್ಧೆ ಖಚಿತ; ಆಯನೂರು ಮಂಜುನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ಪದವೀಧರ ಕ್ಷೇತ್ರದ ಚುನಾವಣೆಗೆ ಮತ್ತೆ ಸ್ಪರ್ಧಿಸುವುದು ಖಚಿತ. ಕಾಂಗ್ರೆಸ್ ಪಕ್ಷ ಆಹ್ವಾನ ನೀಡಿದರೆ ಸ್ವೀಕರಿಸುವೆ ಎಂದು ಜೆಡಿಎಸ್ ಮುಖಂಡ ಆಯನೂರು ಮಂಜುನಾಥ್ ಹೇಳಿದರು.

ಆಯನೂರು ಮಂಜುನಾಥ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬಾರದು ಎಂದು ಶಿವಮೊಗ್ಗದ ಕಾಂಗ್ರೆಸ್ ಮುಖಂಡ ಎಚ್.ಸಿ.ಯೋಗೀಶ್



ಮಂಜುನಾಥ್

(ವಿಧಾನಸಭಾ ಚುನಾವಣೆಗೆ ಶಿವಮೊಗ್ಗ ಕ್ಷೇತ್ರದಿಂದ ಸ್ಪರ್ಧಿಸಿ ಸೋತವರು) ಬರೆದ ಪತ್ರಕ್ಕೆ ಅವರು ಪ್ರತಿಕ್ರಿಯೆ ನೀಡಿದರು.

'ನೈರುತ್ಯ ಪದವೀಧರ ಕ್ಷೇತ್ರದಿಂದ ಕಳೆದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಪಡೆದಿದ್ದ ನಾನು ಈ ಬಾರಿಯೂ ಕಣಕ್ಕೆ ಇಳಿಯಲು ಈಗಾಗಲೇ ಸಿದ್ಧತೆ ನಡೆಸಿದ್ದೇನೆ. ಆದರೆ, ಟಿಕೆಟ್ ಬಯಸಿ ಕಾಂಗ್ರೆಸ್‌ನ ಮುಖಂಡರನ್ನು ಭೇಟಿ ಮಾಡಿಲ್ಲ. ಯೋಗೇಶ್ ಅವರ ಪತ್ರ ಆಶ್ಚರ್ಯ ತಂದಿದೆ' ಎಂದರು.

ವಿಧಾನ ಪರಿಷತ್‌ನ ಬಿಜೆಪಿ ಸದಸ್ಯರಾಗಿದ್ದ ಆಯನೂರು ಮಂಜುನಾಥ್ 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಸಿಗದ ಕಾರಣ ಜೆಡಿಎಸ್ ಸೇರಿದ್ದರು. ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಸೋತಿದ್ದರು.

ಶುಕ್ರವಾರದ ಉಷ್ಣಾಂಶ 31° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ. ಅಲ್ಲಲ್ಲಿ ತುಂತುರು ಮಳೆ ಸಾಧ್ಯತೆ.

ಮುನ್ಸೂಚನೆ	ಶನಿವಾರ	ಭಾನುವಾರ	ಸೋಮವಾರ
	29° 20°	29° 20°	29° 20°

ಜಿ–20 ಡಿಜಿಟಲ್ ಅಲಯನ್ಸ್ ಶೃಂಗಸಭೆ

‘2026ಕ್ಕೆ ಜಿಡಿಪಿಗೆ ಶೇ 20 ಕೊಡುಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿಜಿಟಲ್ ಆರ್ಥಿಕತೆ ವೇಗವಾಗಿ ಪ್ರಗತಿ ಸಾಧಿಸುತ್ತಿದ್ದು, 2026ರ ವೇಳೆಗೆ ದೇಶದ ಒಟ್ಟು ಆಂತರಿಕ ಉತ್ಪಾದನೆಗೆ (ಜಿಡಿಪಿ) ಶೇ 20ಕ್ಕೂ ಹೆಚ್ಚು ಕೊಡುಗೆ ನೀಡಲಿದೆ’ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದರು.

ನಗರದಲ್ಲಿ ಗುರುವಾರ ಆರಂಭವಾದ ಮೂರು ದಿನಗಳ ‘ಜಿ20– ಡಿಜಿಟಲ್ ಇನ್ನೋವೇಷನ್ ಅಲಯನ್ಸ್’(ಡಿಐಎ) ಶೃಂಗಸಭೆಗೆ ಚಾಲನೆ ನೀಡಿ ಮಾತನಾಡಿದ ಅವರು, ‘ಡಿಜಿಟಲ್ ತಂತ್ರಜ್ಞಾನ ಕ್ರಾಂತಿಗಾಗಿ ಭಾರತ ವಿಶ್ವಕ್ಕೆ ಮಾದರಿಯಾಗಿದೆ. ಒಟ್ಟು ಜಿಡಿಪಿಗೆ 2014ರಲ್ಲಿ ಶೇ 4.5ರಷ್ಟು ಕೊಡುಗೆ ನೀಡುತ್ತಿದ್ದ ಡಿಜಿಟಲ್ ಆರ್ಥಿಕತೆ ಈಗ ಶೇ 11ರಷ್ಟಾಗಿದೆ’ ಎಂದು ವಿವರಿಸಿದರು.



ಬೆಂಗಳೂರಿನಲ್ಲಿ ಗುರುವಾರ ಆರಂಭವಾದ ಡಿಐಎ ಶೃಂಗಸಭೆಯಲ್ಲಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಮಾತನಾಡಿದರು. – ಪ್ರಜಾವಾಣಿ ಚಿತ್ರ

‘ನಾಗರಿಕರ ಬದುಕಿನಲ್ಲಿ ಪರಿವರ್ತನೆ ತರುವ ನಿಟ್ಟಿನಲ್ಲಿ ಡಿಜಿಟಲ್ ತಂತ್ರಜ್ಞಾನ ಅಳವಡಿಸಿಕೊಳ್ಳುವಲ್ಲಿ ಭಾರತ ಮುಂಚೂಣಿಯಲ್ಲಿದ್ದು, ಕಪ್ಪು ಹಣದ ವಿರುದ್ಧವೂ ಹೋರಾಟ ನಡೆಸಲು ಸಾಧ್ಯವಾಗಿದೆ. ಡಿಜಿಟಲೀಕರಣ ವ್ಯವಸ್ಥೆಯಿಂದ ಆಡಳಿತದಲ್ಲೂ ಸುಧಾರಣೆಗಳಾಗಿವೆ. ಈಗ ಪ್ರತಿಯೊಬ್ಬರು ಡಿಜಿಟಲ್ ಉತ್ಪನ್ನಗಳನ್ನು ಬಳಸುತ್ತಿದ್ದಾರೆ’ ಎಂದರು.

‘ಡಿಜಿಟಲ್ ತಂತ್ರಜ್ಞಾನ ವರ್ಗಾವಣೆಗೆ ಸಂಬಂಧಿಸಿದಂತೆ ಎಂಟು ದೇಶಗಳ ಜತೆ ಭಾರತ ಒಪ್ಪಂದ ಮಾಡಿಕೊಂಡಿದೆ’ ಎಂದು ತಿಳಿಸಿದರು.

ಕೇಂದ್ರ ವಿದ್ಯುನ್ಮಾನ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಅಲ್ಕೇಶ್ ಕುಮಾರ್ ಶರ್ಮಾ ಮಾತನಾಡಿ, ‘ಒಂದು ಲಕ್ಷಕ್ಕೂ ಹೆಚ್ಚು ನವೋದ್ಯಮಗಳು ಭಾರತದಲ್ಲಿವೆ. ಸುಮಾರು 107 ಯೂನಿಕಾರ್ನ್‌ಗಳು ಇದರಲ್ಲಿವೆ. ಡಿಜಿಟಲ್ ಕ್ರಾಂತಿಯ ಪ್ರಯೋಜನ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ದೊರೆಯುವಂತಾಗಬೇಕು ಎನ್ನುವುದು ಸರ್ಕಾರದ ಕಾಳಜಿಯಾಗಿದ್ದು, ಅದರಲ್ಲಿ ತಕ್ಕಮಟ್ಟಿನ ಯಶಸ್ಸು ಸಾಧಿಸಲಾಗಿದೆ’ ಎಂದು ತಿಳಿಸಿದರು.

29 ದೇಶಗಳ ಪ್ರತಿನಿಧಿಗಳು ಮತ್ತು ಹಲವು ನವೋದ್ಯಮಗಳ ಮುಖ್ಯಸ್ಥರು ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದಾರೆ.

ಬೆಂಗಳೂರಿನಲ್ಲಿ ತಾಪಮಾನ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಾತಾವರಣದಲ್ಲಿ ಈ ತಿಂಗಳು ಉಷ್ಣಾಂಶ ಹೆಚ್ಚಳವಾಗುತ್ತಿದ್ದು, ಗರಿಷ್ಠ ತಾಪಮಾನ ಬಹುತೇಕ ದಿನ 30 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ.

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಗುರುವಾರ ಮಧ್ಯಾಹ್ನ 1 ಗಂಟೆಗೆ ಅನ್ವಯಿಸಿದಂತೆ ಕಳೆದ 24 ಗಂಟೆ ಅವಧಿಯಲ್ಲಿ ಗರಿಷ್ಠ ತಾಪಮಾನ 31.8 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಈವರೆಗೆ ಆಗಸ್ಟ್ ತಿಂಗಳಲ್ಲಿ ವರದಿಯಾದ ಐದನೇ ಗರಿಷ್ಠ ತಾಪಮಾನ ಇದಾಗಿದೆ. ಮಳೆ ಕೊರತೆಯಿಂದಾಗಿ ತಾಪಮಾನ ಏರುತ್ತಿದೆ ಎಂದು ಇಲಾಖೆ ವಿಶ್ಲೇಷಿಸಿದೆ.

ನಗರದಲ್ಲಿ 1899ರ ಆಗಸ್ಟ್ ತಿಂಗಳಲ್ಲಿ ಗರಿಷ್ಠ ತಾಪಮಾನ 33.3 ಡಿಗ್ರಿ ಸೆಲ್ಸಿಯಸ್ ವರದಿಯಾಗಿತ್ತು. ಇದು ಆಗಸ್ಟ್ ತಿಂಗಳಲ್ಲಿ ಈವರೆಗೆ ವರದಿಯಾದ ಗರಿಷ್ಠ ತಾಪಮಾನ. ಬೆಂಗಳೂರು ಜತೆಗೆ ಇಡೀ ರಾಜ್ಯದ ತಾಪಮಾನ ಏರುಗತಿ ಪಡೆದಿದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಆಗಸ್ಟ್ ಮೊದಲ ವಾರ ಗರಿಷ್ಠ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿತ್ತು. ಆ.10ರ ಬಳಿಕ 31ರ ಗಡಿ ದಾಟಿದೆ. ಮುಂದಿನ ಐದು ದಿನಗಳು ಗರಿಷ್ಠ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ಹೇಳಿದೆ.

ನಗರದಲ್ಲಿ ಇಂದು

ನಾಗರ ಪಂಚಮಿ, ಗಂಗಮ್ಮ ದೇವಿ ಜಾತ್ರೆ, ಕರಗದ ವಾರ್ಷಿಕೋತ್ಸವ: ಗಂಗಮ್ಮ ದೇವಿಗೆ ಅಭಿಷೇಕ ಬೆಳಿಗ್ಗೆ 7ಕ್ಕೆ, ಸುಮಂಗಲಿ ಪೂಜೆ, ಸಹಸ್ರ ಕುಂಕುಮಾರ್ಚನೆ, ಗಂಗಮ್ಮ ದೇವಿಗೆ ಅಲಂಕಾರ ಬೆಳಿಗ್ಗೆ 9ಕ್ಕೆ, ಮಹಾಮಂಗಳಾರತಿ, ಅನ್ನದಾನ ಸಂಜೆ 7ಕ್ಕೆ, ಆಯೋಜನೆ ಮತ್ತು ಸ್ಥಳ: ಪಾತಾಳ ಪಂಚನಾಗೇಂದ್ರಸ್ವಾಮಿ ಮತ್ತು ದೇವಸ್ಥಾನ, ಮಹಾಲಕ್ಷ್ಮಿಪುರ

3ಡಿ ಅಂಚೆ ಕಚೇರಿ ಕಟ್ಟಡದ ಉದ್ಘಾಟನೆ: ಅಶ್ವಿನಿ ವೈಷ್ಣವ್, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಮೇಘದೂತ್ ಸಭಾಂಗಣ, ಜಿಪಿಒ, ಬೆಳಿಗ್ಗೆ 8.30

ವಾಗ್ದೇವಿ ಕಲಾ ಉತ್ಸವ: ಉದ್ಘಾಟನೆ: ಶತಾವಧಾನಿ ಆರ್. ಗಣೇಶ್, ಕೆ. ಹರೀಶ್, ವಾಗ್ದೇವಿ ಪ್ರಶಸ್ತಿ ಪ್ರದಾನ: ಬಿ.ಎನ್. ಸುರೇಶ್, ಪ್ರಶಸ್ತಿ ಪುರಸ್ಕೃತರು: ಚಳ್ಳಕೆರೆ ಎಂ.ಎಸ್. ರಾಮಸ್ವಾಮಿ, ಎಂ.ಎಸ್. ಶ್ರೀನಿವಾಸನ್, ಆಯೋಜನೆ ಮತ್ತು ಸ್ಥಳ: ವಾಗ್ದೇವಿ ವಿಲಾಸ ಶಾಲೆ, ಮಾರತ್ತಹಳ್ಳಿ, ಬೆಳಿಗ್ಗೆ 9.30

ದೊಡ್ಡಣ್ಣ ಶೆಟ್ಟಿ ಅವರ ವಾರ್ಷಿಕ ಆರಾಧನಾ ಮಹೋತ್ಸವ: ಅತಿಥಿ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಉಪಸ್ಥಿತಿ: ರಾಜೇಂದ್ರ ಕುಮಾರ್ ಕಠಾರಿಯಾ, ಬಸವರಾಜೇಂದ್ರ ಎಚ್., ಯತಿರಾಜ್ ಸಂಪತ್ ಕುಮಾರ್, ಆಯೋಜನೆ: ಲಕ್ಷ್ಮೀನರಸಿಂಹಸ್ವಾಮಿ ಧರ್ಮಸಂಸ್ಥೆ, ಸ್ಥಳ: ಜನೋಪಕಾರಿ ದೊಡ್ಡಣ್ಣ ಶೆಟ್ಟಿ ಬಯಲು ರಂಗ ಮಂದಿರ, ಕೋಟೆ, ಬೆಳಿಗ್ಗೆ 10

ಟಿ.ಆರ್. ವರದರಾಜನ್ ಅವರ ‘ಅಪ್ಸರೆ’



ಭಾವನ ಐಯ್ಯಂಗಾರ್

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಭಾವನ ಐಯ್ಯಂಗಾರ್, ಉಪಸ್ಥಿತಿ: ಗಾಯತ್ರಿ ಪರಮೇಶ್ವರಂ, ಸ್ಥಳ: ವಿವೇಕ್ ಸಭಾಂಗಣ, ಜಯನಗರ, ಸಂಜೆ 6

ಪುಸ್ತಕ ಬಿಡುಗಡೆ: ಚಿಂತಾಮಣಿ ಕೊಡ್ಲೆಕೆರೆ, ಅಧ್ಯಕ್ಷತೆ: ಕೆ.ಜಿ. ಸಂಪತ್ ಕುಮಾರ್, ಪುಸ್ತಕ ಪರಿಚಯ: ಕೆ.ಆರ್. ಕುಮುದವಲ್ಲಿ, ಆಯೋಜನೆ: ರೇಕಿ ಪಬ್ಲಿಕೇಷನ್ಸ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ‘ವಿಜ್ಞಾನ ಪ್ರದರ್ಶನ’: ಆಯೋಜನೆ ಮತ್ತು ಸ್ಥಳ: ಜವಹರಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಳಿಗ್ಗೆ 10.30ರಿಂದ

‘ಶೇಕ್ಸ್‌ಪಿಯರ್‌ನ ಶ್ರೀಮತಿ’ ಏಕವ್ಯಕ್ತಿ ಪ್ರದರ್ಶನ: ಲಕ್ಷ್ಮೀ ಚಂದ್ರಶೇಖರ್, ನಿರ್ದೇಶನ: ವಿಶ್ವರಾಜ ಪಾಟೀಲ್, ಆಯೋಜನೆ: ಕ್ರಿಯಾಟಿವ್ ಥಿಯೇಟರ್,



ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಕೆ.ಎನ್. ಪ್ರತಿಭಾ ನಾಗ್, ಉಪಸ್ಥಿತಿ: ಉದಯ್ ಕೃಷ್ಣ ಉಪಾಧ್ಯಾಯ ಟಿ.ಎನ್., ಸುನಂದಾ ದೇವಿ ಬಿ.ಎಸ್., ಸಂಧ್ಯಾ ಶರ್ಮ ವೈ.ಕೆ., ಆಯೋಜನೆ: ಲೀಲಾ ನಾಟ್ಯ ಕಲಾವೃಂದ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ ರಸ್ತೆ, ಸಂಜೆ 5.30

ಕೆ.ಎನ್. ಪ್ರತಿಭಾ ನಾಗ್

ಸ್ಥಳ: ಡಿ.ಜೆ.ಬಿ. ಸಭಾಂಗಣ, ಮೌಂಟ್ ಕಾರ್ಮೆಲ್ ಕಾಲೇಜು, ಬೆಳಿಗ್ಗೆ 11

ಸ್ವಾತಂತ್ರ್ಯೋತ್ಸವ ಪುಸ್ತಕ ಹಬ್ಬ: ಉದ್ಘಾಟನೆ: ಸುಮಲತಾ ಅಂಬರೀಷ್, ಉದಯ್ ಬಿ. ಗರುಡಾಚಾರ್, ಆಯೋಜನೆ ಮತ್ತು ಸ್ಥಳ: ಗರುಡಾ ಮಾಲ್, ಮಧ್ಯಾಹ್ನ 12

ಬಹುಭಾಷಾ ಕವಿತೆ ವಾಚನ: ಆಯೋಜನೆ: ಪ್ರೇರಣ, ಸ್ಥಳ: ಕ್ರೈಸ್ಟ್ ಜೂನಿಯರ್ ಕಾಲೇಜು, ಬನ್ನೇರುಘಟ್ಟ ರಸ್ತೆ, ಮಧ್ಯಾಹ್ನ 1.45

ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ಮಾಲೆ-6: ‘ರಂಗಭೂಮಿ ಮತ್ತು ಅದರ ಸಂದರ್ಭ’ ಕುರಿತ ಉಪನ್ಯಾಸ: ಅಕ್ಷರ ಕೆ.ವಿ., ಆಯೋಜನೆ ಮತ್ತು ಸ್ಥಳ: ಕನ್ನಡ ಸಂಘ, ಕ್ರೈಸ್ಟ್ ವಿಶ್ವವಿದ್ಯಾಲಯ, ಹೊಸೂರು ರಸ್ತೆ, ಮಧ್ಯಾಹ್ನ 3.15

ಸಾಂಸ್ಕೃತಿಕ ಸ್ಪರ್ಧೆಗಳ, ‘ಜೀವರಾಜ್ ಆಳ್ವ ದತ್ತಿನಿಧಿ’ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬಿ.ಝಡ್. ಜಮೀರ್ ಅಹಮದ್ ಖಾನ್, ಅತಿಥಿ: ಜಾಂಬವ ಎಂ. ಗಂಗಾಧರ್, ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟದ ಆವರಣ, ಸಂಜೆ 4

ಸುವರ್ಣ ಮಹೋತ್ಸವ: ಅತಿಥಿಗಳು: ದಿನೇಶ್ ಗುಂಡೂರಾವ್, ಜೋಸೆಫ್ ಜಾರ್ಜ್, ಅಲ್ಫಾನ್ಸ ಕುರಿಯನ್, ಅಧ್ಯಕ್ಷತೆ: ಮೋಹನ್ ಕೆ. ಐಸಾಕ್, ಆಯೋಜನೆ ಮತ್ತು ಸ್ಥಳ: ಮಿಡ್ಕೊ ಪಾಸ್ಟ್ರೊಲ್ ಅಸೋಸಿಯೇಷನ್, ಫ್ರೇಸರ್ ಟೌನ್, ಸಂಜೆ 4

‘ಅಂಕಿತ ಪುಸ್ತಕ ಪುರಸ್ಕಾರ’: ಉದ್ಘಾಟನೆ: ಸತೀಶ ಕುಮಾರ್ ಎಸ್. ಹೊಸಮನಿ, ಅಧ್ಯಕ್ಷತೆ: ಮಹೇಶ ಜೋಶಿ, ಅತಿಥಿ: ಗಿರೀಶ್ ರಾವ್ ಹತ್ವಾರ್ (ಜೋಗಿ), ಉಪಸ್ಥಿತಿ: ಪ್ರಕಾಶ್ ಕಂಬತ್ತಹಳ್ಳಿ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 5

‘ಶಕ್ತಿಮಿತ್ರ’ ಏಕವ್ಯಕ್ತಿ ರಂಗಪ್ರಯೋಗ: ಕಗ್ಗೆರೆ ಮಂಜುನಾಥ, ರಂಗರೂಪ ನಿರ್ದೇಶನ: ಯೋಗೇಶ್ ಮಾಸ್ಟರ್, ಉದ್ಘಾಟನೆ: ಆರ್. ನರೇಂದ್ರಬಾಬು, ಅಧ್ಯಕ್ಷತೆ: ಕೆ.ವೈ. ನಾರಾಯಣಸ್ವಾಮಿ, ಅತಿಥಿಗಳು: ಮೋಹನ್ ಕೊಂಡಜ್ಜಿ, ಬಸವರಾಜ್ ಬಿ. ಪಾಟೀಲ್, ಬೇಲೂರು ರಘುನಂದನ್, ಆಯೋಜನೆ: ರಂಗಚಂದಿರ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

‘ರಪ್ಪು ಶ್ರೇಷ್ಠತಾ’ ಪ್ರಶಸ್ತಿ: ಅತಿಥಿಗಳು: ಎಂ.ಬಿ. ಪಾಟೀಲ, ಶರಣಬಸಪ್ಪ ದರ್ಶನಾಪುರ, ಎಚ್.ಇ ಸೌದ್-ಅಲ್-ಮಜರುಯಿ, ಅಧ್ಯಕ್ಷತೆ: ಬಿ.ವಿ. ಗೋಪಾಲ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಸರ್ ಎಂ.ವಿ. ಸಭಾಂಗಣ, ಕೆ.ಜಿ. ರಸ್ತೆ, ಸಂಜೆ 4.30

ವಚನ ಶ್ರಾವಣ-2023: ವಚನ ಗಾಯನ: ಎಸ್. ಪಿನಾಕಪಾಣಿ, ಪೂರ್ಣಿಕಾ ಆರಾಧ್ಯ, ವಚನ ಚಿಂತನ: ರತ್ನ ದೇಸಾಯಿ, ಅಧ್ಯಕ್ಷತೆ: ಎಸ್.ಆರ್. ಪಾಟೀಲ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸರ್ವಮಂಗಳಮ್ಮ ಸಿದ್ಧಯ್ಯ ವಿದ್ಯಾರ್ಥಿನಿಲಯ, ಮಹಾಲಕ್ಷ್ಮಿಪುರ, ಸಂಜೆ 6

ವಿದ್ಯಾಸಾಗರ ಸಂಗೀತ ಉತ್ಸವ: ಉದ್ಘಾಟನೆ: ಗೀತಾ ರಮಾನಂದ, ಗಾಯನ: ರಾಜೀವ, ಪಿಟೀಲು: ಜನಾರ್ದನ ಎಸ್., ಮೃದಂಗ: ಸಚಿನ್ ಪ್ರಕಾಶ್, ಖಂಜೀರಾ: ಸುನಾದ್ ಆನೂರು, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಕಾಲೇಜಿನ ಸಭಾಂಗಣ, ಮಲ್ಲೇಶ್ವರ, ಸಂಜೆ 6

ಮಣಿಬೆನ್ ಪಟೇಲ್ ಜೀವನಾಧಾರಿತ ‘ಮಣಿಬೆನ್’ ನಾಟಕ ಪ್ರದರ್ಶನ: ರಚನೆ: ಕೆ.ಎಸ್. ರಂಗೇಗೌಡ, ನಿರ್ದೇಶನ: ಜೋಸೆಫ್ ಜಾನ್, ಸಂಗೀತ: ಪ್ರಸನ್ನ ಕುಮಾರ್ ಎಂ.ಎಸ್., ರಂಗವಿನ್ಯಾಸ: ಗಗನ್ ಪ್ರಸಾದ್, ಉದ್ಘಾಟನೆ: ಸಿ.ಕೆ. ರಾಮಮೂರ್ತಿ, ಆಯೋಜನೆ: ಸುಸ್ಥಿರ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

‘ಭುವನ ಭಾರತಿ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷ ಮಿಲನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 10ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ
ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–560001
PH: 080-22867369 E-mail: cgmksamb@gmail.com

ಸಂಖ್ಯೆ: ಕೃಮಾಮಂ/ವಿಭಾಗ:ವಾ.ಕಾ/ಜಿಟಿಐ/ಯೋ/AUCTION/3062/2023-24 ದಿನಾಂಕ : 16.08.2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ವತಿಯಿಂದ e-procurement ಮೂಲಕ 2023ನೇ ಸಾಲಿಗೆ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಶ್ರಮಿಕರಿಗೆ ಗುಂಪು ವಿಮಾ ಯೋಜನೆಯನ್ನು ಕಾರ್ಯಗತಗೊಳಿಸಲು ಅಧಿಕೃತ ಆಸಕ್ತ ವಿಮಾ ಸಂಸ್ಥೆಗಳಿಂದ ಸ್ಪರ್ಧಾತ್ಮಕ ಇ–ಬಿಡ್ಡಿಂಗ್‌ನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು **www.kppp.karnataka.gov.in** ವೆಬ್‌ಸೈಟ್‌ನ ಇಂಡೆಂಟ್ ಸಂಖ್ಯೆ: APMC/2023-24/SE0073/CALL-2 ರಲ್ಲಿ **ದಿನಾಂಕ: 22.8.2023** ರೊಳಗೆ ಪಡೆಯಬಹುದಾಗಿದೆ.

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು
ಕ.ರಾ.ಕೃ.ಮಾ.ಮಂ., ಬೆಂಗಳೂರು.

ವಾಸಾಸಂಇ/ವಾಪ್ರ/ಶಿರಡಿ ಸಾಯಿ/943/2023–24

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
CIN: L74140KA2000PLC118395
315 ವರ್ಕ್ ಅವೆನ್ಯೂ ಕ್ಯಾಂಪಸ್, ಅಸೆಂಟ್ ಬಿಲ್ಡಿಂಗ್, ನಂ.77, ಕೋರಮಂಗಲ ಇಂಡಸ್ಟ್ರಿಯಲ್ ಲೇಔಟ್, ಜ್ಯೋತಿ ನಿವಾಸ್ ಕಾಲೇಜು ರಸ್ತೆ, ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ.
ದೂರವಾಣಿ: + 91 80 6824 3333 / ಫ್ಯಾಕ್ಸ್: + 91 80 6824 3001
corporateaffairs@teamlease.com | https://group.teamlease.com

ಇಪ್ಪತ್ತಮೂರನೇ (23ನೇ) ವಾರ್ಷಿಕ ಸರ್ವಸದಸ್ಯರ ಸಭೆ,

ಇ–ವೋಟಿಂಗ್ ಪ್ರಾರಂಭ	ಇ–ವೋಟಿಂಗ್ ಮುಕ್ತಾಯ
ಸೆಪ್ಟೆಂಬರ್ 12, 2023 ಬೆಳಿಗ್ಗೆ 09.00	ಸೆಪ್ಟೆಂಬರ್ 14, 2023 ಸಂಜೆ 05.00

ದಿನಾಂಕ : ಆಗಸ್ಟ್ 17, 2023
ಸ್ಥಳ : ಬೆಂಗಳೂರು
(M. No. F10911)

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ತಿಳಿಸಿರುವ ಷೆಡ್ಯೂಲ್ ನಲ್ಲಿ, ...

... ಉತ್ತರದಿಂದ ದಕ್ಷಿಣಕ್ಕೆ 500 ಅಡಿಗಳು, ಒಟ್ಟಾರೆ ವಿಸ್ತೀರ್ಣ 70,000 ಚದರ ಅಡಿಗಳು, ಮತ್ತು ಇದರ ಚಕ್ಕುಬಂಧಿ ಈ ಕೆಳಕಂಡಂತಿರುವುದು:– **ಪೂರ್ವಕ್ಕೆ** : ಸೈಟ್ ನಂ. 6 ಮತ್ತು 13, **ಪಶ್ಚಿಮಕ್ಕೆ** : ಸೈಟ್ ನಂ. 8 ಮತ್ತು 11, **ಉತ್ತರಕ್ಕೆ** : ರಸ್ತೆ, (ಸರ್ವಿಸ್ ರಸ್ತೆ), ಮತ್ತು **ದಕ್ಷಿಣಕ್ಕೆ** : ರಸ್ತೆ,

ಶ್ರೀ. ಎಸ್ ಬಿ ಪ್ರಶಾಂತ ಕುಮಾರ್ – ಹಿರಿಯ ಪಾಲುದಾರರು ದಿನಾಂಕ: 18.08.2023
ಶ್ರೀಮತಿ. ಸ್ಮಿತಾ ಪವನ್ – ಗ್ರೂಪ್ ಹೆಡ್
ಫಾಕ್ಸ್ ಮಂಡಲ್ ಮತ್ತು ಅಸೋಸಿಯೆಟ್ಸ್, ಸಾಲಿಸಿಟರ್ಸ್ ಮತ್ತು ವಕೀಲರು
ಎಫ್‌ಎಂ ಹೌಸ್, 6/12, ಪ್ರೈಮ್‌ರೋಸ್ ರಸ್ತೆ, ಬೆಂಗಳೂರು–560025,
ಕರ್ನಾಟಕ, ಭಾರತ, ದೂ. ಸಂ. +91 80 30554100, ಮೊ: +91 98801 62142
ಇ–ಮೇಲ್: prashantha.kumar@foxmandal.in, smitha.pavan@foxmandal.in

Karnataka Forest Development Corporation Limited
(A Government of Karnataka Undertaking)
CIN: U02001KA1971SGC001999
1st Floor, Vana Vikas, 18th Cross, Malleshwaram, Bengaluru - 03.
Phone: 080-23345192, 23345711, 23343712 Fax: 23461647
e-mail: info@kfdcl.com website: www.kfdcl.karnataka.gov.in

No.: KFDC/Accounts/IA/2023-24/539 Date: 16.08.2023

SHORT-TERM DETAILED TENDER NOTIFICATON
(Manual Tender)

Applications are invited for appointment of Practicing Chartered Accountants for conducting Internal Audit of Karnataka Forest Development Corporation Limited for the Financial Year 2023-24 having a turnover of around Rs.75.00 Crores on half yearly basis as per the scope specified in **Annexure II**.

The Tender Notification may be viewed on the company website at **www.kfdcl.karnataka.gov.in**. The complete set of bidding document prepared by KFDCL will be available for free download. KFDCL reserves the right to accept or reject any or all the bids and the decision of the management is final in this regard.

Last date for submission of application is **23.08.2023 on or before 4.00 PM** with sealed tender to undersigned. The tender will be opened **on 24.08.2023 at 4.30 PM**.

Contact details: The Managing Director, KFDCL, Vanavikasa, 1st Floor, 18th Cross, Malleswaram, Bengaluru-560003. Phone: +80 23343712, e-mail: info@kfdcl.com

Sd/- Managing Director

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಬೇಸರ

‘ರಕ್ತದಾನಕ್ಕೆ ಅರ್ಹರಿಂದ ನಿರಾಸಕ್ತಿ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭದಲ್ಲಿ ಜೀವ ಉಳಿಸಲು ರಕ್ತ ಅಗತ್ಯ. ಆದರೆ, ರಕ್ತದಾನಕ್ಕೆ ಅರ್ಹರಾದವರಲ್ಲಿ ಶೇ 90ಕ್ಕಿಂತ ಹೆಚ್ಚು ಜನರು ರಕ್ತದಾನ ಮಾಡುತ್ತಿಲ್ಲ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಬೇಸರ ವ್ಯಕ್ತಪಡಿಸಿದರು.

ಇಂಡಿಯನ್ ಅಸೋಸಿಯೇಷನ್ ಆಫ್ ಬ್ಲಡ್ ಬ್ಯಾಂಕ್ ಹಾಗೂ ಸ್ಪರ್ಶ್ ಆಸ್ಪತ್ರೆ ಜಂಟಿಯಾಗಿ ನಗರದಲ್ಲಿ ರಕ್ತ ವರ್ಗಾವಣೆ ಔಷಧದ ಬಗ್ಗೆ ಗುರುವಾರ ಹಮ್ಮಿಕೊಂಡ ‘ನಿರಂತರ ವೈದ್ಯಕೀಯ ಶಿಕ್ಷಣ ಸಮಾವೇಶ’ ಉದ್ಘಾಟಿಸಿ, ಮಾತನಾಡಿದರು.

‘ಅಪಘಾತ, ಹೆರಿಗೆ, ಕ್ಯಾನ್ಸರ್, ರಕ್ತಹೀನತೆ ಸೇರಿ ವಿವಿಧ ಸಂದರ್ಭಗಳಲ್ಲಿ ಕೆಲವರಿಗೆ ತುರ್ತಾಗಿ ರಕ್ತ ಬೇಕಾಗಿರುತ್ತದೆ. ರಕ್ತದಾನ ಮಾಡುವುದು ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕರ ಕರ್ತವ್ಯವಾಗಬೇಕು. ಯುವ ಜನರು ರಕ್ತದಾನದಂತಹ ಸಮಾಜ ಸೇವೆಗೆ ಹೆಚ್ಚಿನ ಒಲವು ತೋರಬೇಕು. ತಾವು ರಕ್ತದಾನ ಮಾಡುವುದರೊಂದಿಗೆ ಇತರರನ್ನೂ ರಕ್ತದಾನ ಮಾಡುವಂತೆ ಪ್ರೇರೇಪಿಸಬೇಕು. ರಕ್ತದಾನ ಇತರರಿಗೆ ಮರುಜನ್ಮ ನೀಡುವ ಶ್ರೇಷ್ಠ ಮತ್ತು ಸಾರ್ಥಕ ಸೇವೆ’ ಎಂದು ಹೇಳಿದರು.

ಇಂಡಿಯನ್ ಅಸೋಸಿಯೇಷನ್ ಆಫ್ ಬ್ಲಡ್ ಬ್ಯಾಂಕ್ ಅಧ್ಯಕ್ಷ ಮನೋಜ್ ಎಸ್. ಕುಮಾರ್, ‘ರಕ್ತದಾನವು ಎಷ್ಟೋ ಜನರಿಗೆ ಜೀವ ನೀಡುವ ಮಹಾದಾನವಾಗಿದೆ. ರಕ್ತದಾನದಿಂದ ಮಾತ್ರವೇ ರಕ್ತದ ಕೊರತೆ ನೀಗಲು ಸಾಧ್ಯ. ವೈದ್ಯಕೀಯ ಲೋಕಕ್ಕೆ ರಕ್ತದಾನ ಮಹತ್ವದ್ದಾಗಿದೆ. ರಕ್ತಕ್ಕೆ ನಿರಂತರ ಬೇಡಿಕೆ ಇರುತ್ತದೆ. ರಕ್ತದಾನದ ಕುರಿತು ಇರುವ ತಪ್ಪು ಕಲ್ಪನೆಗಳನ್ನು ಕೈಬಿಟ್ಟು, ರಕ್ತದಾನ ಮಾಡಬೇಕು’ ಎಂದರು.

ರೋಗನಿರೋಧಕ ಶಕ್ತಿ ವೃದ್ಧಿ: ಕರ್ನಾಟಕ ಸ್ಟೇಟ್ ಬ್ಲಡ್ ಟ್ರಾನ್ಸ್‌ಫ್ಯೂಷನ್ ಕೌನ್ಸಿಲ್‌ನ ಯೋಜನಾ ನಿರ್ದೇಶಕ ನಾಗರಾಜ್ ಎನ್.ಎಂ., ‘ನಿಯಮಿತ ರಕ್ತದಾನವು ಆರೋಗ್ಯಕ್ಕೆ ಒಳ್ಳೆಯದು. ಕ್ಯಾನ್ಸರ್, ಹೃದಯಾಘಾತ ಮತ್ತು ಪಾರ್ಶ್ವವಾಯುವಿನ ಅಪಾಯ ಕಡಿಮೆ ಮಾಡಲು ಹಾಗೂ ದೇಹವನ್ನು ಸದೃಢವಾಗಿ ಇಡಲು ರಕ್ತದಾನ ಸಹಕಾರಿ. ರಕ್ತದಾನದಿಂದ ರೋಗ ನಿರೋಧಕ ಶಕ್ತಿಯೂ ಹೆಚ್ಚಳವಾಗುತ್ತದೆ’ ಎಂದರು.

ಸ್ಪರ್ಶ್ ಆಸ್ಪತ್ರೆಯ ನಿರ್ದೇಶಕ ಡಾ. ಶರಣ್ ಪಾಟೀಲ, ‘ವಿಜ್ಞಾನ ಎಷ್ಟೇ ಮುಂದುವರೆದರೂ, ರಕ್ತಕ್ಕೆ ಪರ್ಯಾಯ ಸೃಷ್ಟಿ ಸಾಧ್ಯವಾಗಿಲ್ಲ. ಪರಿಣಿತ ವೈದ್ಯರು ದುಬಾರಿ ಔಷಧಗಳನ್ನು ನೀಡಿದರೂ ರೋಗಿಯಲ್ಲಿನ ರಕ್ತದ ಕೊರತೆಯನ್ನು ನೀಗಿಸಲು ಸಾಧ್ಯವಿಲ್ಲ. ರಕ್ತದಾನದಿಂದ ಮಾತ್ರವೇ ರಕ್ತದ ಕೊರತೆ ನೀಗಲು ಸಾಧ್ಯ’ ಎಂದು ಹೇಳಿದರು.

ಒಂದು ಮತದಿಂದ ಗೆಲುವು

ಆನೇಕಲ್: ಬೆಂಗಳೂರು ನಗರ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಸದಸ್ಯರನ್ನು ಹೊಂದಿರುವ ತಾಲ್ಲೂಕಿನ ನೆರಳೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಒಂದು ಮತದಿಂದ ಗೆದ್ದ ಮಂಜುನಾಥ್ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ಉಪಾಧ್ಯಕ್ಷರಾಗಿ ರತ್ನಮ್ಮ ಅವಿರೋಧವಾಗಿ ಆಯ್ಕೆಯಾದರು.



‘ಅರ್ಹತೆ ಇಲ್ಲದಿದ್ದರೂ ಸರ್ಕಾರಿ ಹುದ್ದೆ’

ಬೆಂಗಳೂರು: ಮಂಗಳೂರು ಮಹಾನಗರ ಪಾಲಿಕೆಯ ಎಂಜಿನಿಯರ್ ಜೆ. ಮಹೇಶ್ ಅರ್ಹತೆ ಇಲ್ಲದೇ ಸರ್ಕಾರಿ ಹುದ್ದೆ ಪಡೆದುಕೊಂಡಿದ್ದಾರೆ ಎಂದು ಪರಿಸರ ಸಂರಕ್ಷಣಾ ಸಮಿತಿ ಆರೋಪಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷೆ ಭಾನು ಮೋಹನ್, ‘ಜೆ. ಮಹೇಶ್ ಅವರು ರಾಜಕೀಯ ಮುಖಂಡರ ಪ್ರಭಾವ ಬಳಸಿಕೊಂಡು 1987ರಲ್ಲಿ ಮೈಸೂರು ನಗರ ಪಾಲಿಕೆಯಲ್ಲಿ ಚಿತಾಗಾರದ ಚಾಲಕ ಹುದ್ದೆಗೆ ಅಕ್ರಮವಾಗಿ ನೇಮಕವಾಗಿದ್ದರು. ಅಂದಿನ ಮುಖ್ಯಮಂತ್ರಿಯೊಬ್ಬರು ಕಡತದ ಒಂದು ಭಾಗವನ್ನು ತೆಗೆದು ಮುಂಬಡ್ತಿ ನೀಡಿ ಎಂದು ಆದೇಶಿಸಿದ್ದರು. ಒತ್ತಡಕ್ಕೆ ಒಳಗಾದ ಅಧಿಕಾರಿಗಳು ಕಿರಿಯ ಎಂಜಿನಿಯರ್ ಹುದ್ದೆಗೆ ಮುಂಬಡ್ತಿ ನೀಡುವುದರ ಮೂಲಕ ಕಾಯಂ ಹುದ್ದೆಯನ್ನೇ ನೀಡಿದ್ದಾರೆ’ ಎಂದು ದೂರಿದರು.

ಅರ್ಜಿ ಆಹ್ವಾನ

ಬೆಂಗಳೂರು: ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ಐಬಿಪಿಎಸ್ ಪರೀಕ್ಷೆಗಳಿಗೆ ಕೃಷಿಕ್ ಸರ್ವೋದಯ ಫೌಂಡೇಶನ್ ವತಿಯಿಂದ ಆನ್‌ಲೈನ್, ಆಫ್‌ಲೈನ್ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

2023–24ನೇ ಸಾಲಿನ ಅಭ್ಯರ್ಥಿಗಳು ಸೆ.9ರ ಒಳಗೆ ವೆಬ್‌ಸೈಟ್‌ನಿಂದ ಅರ್ಜಿಗಳನ್ನು ಪಡೆದು ಭರ್ತಿ ಮಾಡಿ ಕೃಷಿಕ್ ಸರ್ವೋದಯ ಫೌಂಡೇಶನ್, ನಂ. 15, 2ನೇ ಮಹಡಿ, ಗಾಲ್ಫ್ ಅವೆನ್ಯೂ ರಸ್ತೆ, ಕೋಡಿಹಳ್ಳಿ, ಬೆಂಗಳೂರು ಇಲ್ಲಿಗೆ ಕಳುಹಿಸಬೇಕು ಅಥವಾ ಭರ್ತಿ ಮಾಡಿದ ಅರ್ಜಿಯನ್ನು ksfbangalore@gmail.com ವಿಳಾಸಕ್ಕೆ ಇ–ಮೇಲ್ ಮಾಡಬಹುದು.

ಪ್ರತಿಭಾವಂತ ಅಭ್ಯರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತದೆ. ಮಾಹಿತಿಗಾಗಿ ದೂರವಾಣಿ: 080-25202299, ಮೊಬೈಲ್: 7625000990, 9901911410 ಸಂಪರ್ಕಿಸಬಹುದು ಎಂದು ಕೃಷಿಕ್ ಸರ್ವೋದಯ ಫೌಂಡೇಶನ್‌ನ ಪ್ರಕಟಣೆ ತಿಳಿಸಿದೆ.

‘ಎನ್‌ಇಪಿ ರದ್ದು ತೀರ್ಮಾನ ರಾಜಕೀಯ ಪ್ರೇರಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದುಪಡಿಸುವ ಕಾಂಗ್ರೆಸ್ ತೀರ್ಮಾನ ರಾಜಕೀಯ ಪ್ರೇರಿತ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಬೇಸರ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಶಿಕ್ಷಣವು ಪ್ರಗತಿಯ ದಾರಿದೀಪವಾಗಬೇಕೇ ವಿನಾ ರಾಜಕೀಯದ ದಾಳವಾಗಬಾರದು ಎಂದಿದ್ದಾರೆ.

‘ನಮ್ಮ ಶಿಕ್ಷಣ ವ್ಯವಸ್ಥೆಗೆ ವಿಕಸನದ ಅಗತ್ಯವಿದೆಯೇ ಹೊರತು ಹಿಂಜರಿಕೆಯಲ್ಲ. ಎನ್‌ಇಪಿ ಎಂಬುದು ಹಲವು ವರ್ಷಗಳ ಗಂಭೀರ ಸಮಾಲೋಚನೆಗಳನ್ನು ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುವ ಫಲಿತಾಂಶವಾಗಿದೆ’ ಎಂದು ಹೇಳಿದ್ದಾರೆ.

‘ಕರ್ನಾಟಕದ ಸರ್ಕಾರ ನಿರ್ಧಾರವು ಕಾಂಗ್ರೆಸ್‌ನ ಸುಧಾರಣೆ ವಿರೋಧಿ, ಭಾರತೀಯ ಭಾಷಾ ವಿರೋಧಿ ಮತ್ತು ಕರ್ನಾಟಕ ವಿರೋಧಿ ಗುಣಗಳನ್ನು ಬಹಿರಂಗಪಡಿಸುತ್ತದೆ. ಕರ್ನಾಟಕವು ಪ್ರಗತಿಶೀಲ ಮತ್ತು ಸರ್ವರನ್ನು ಒಳಗೊಳ್ಳುವಿಕೆಗೆ ಬೆಲೆ ಕೊಡುವ ನಾಯಕತ್ವವನ್ನು ಬಯಸುತ್ತದೆಯೇ ಹೊರತು ಕ್ಷುಲ್ಲಕ ರಾಜಕಾರಣವನ್ನಲ್ಲ. ವಿದ್ಯಾರ್ಥಿಗಳ ಭವ್ಯ ಭವಿಷ್ಯತ್ತಿಗೆ ಮೊದಲ ಆದ್ಯತೆ ಕೊಡೋಣ, ಕ್ಷುಲ್ಲಕ ರಾಜಕಾರಣ ಮಾಡುವುದನ್ನು ನಿಲ್ಲಿಸೋಣ’ ಎಂದಿದ್ದಾರೆ.

ಎನ್‌ಇಪಿ ಹೇರಲ್ಲ: ನಿರ್ಮಲಾ

ಪುರಿ/ಭುವನೇಶ್ವರ (ಪಿಟಿಐ): ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ-2020) ರಾಜ್ಯಗಳ ಮೇಲೆ ಕೇಂದ್ರ ಸರ್ಕಾರ ಹೇರುವುದಿಲ್ಲ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ತಿಳಿಸಿದರು.





ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ಸರ್ಕಾರ – ನೋಂದಾಯಿತ ಸ್ವಾಯತ್ತ ಸಂಸ್ಥೆ ಹಾಗೂ ಎನ್.ಎ.ಬಿ.ಹೆಚ್. ನಿಂದ ಮಾನ್ಯತೆ ಹೊಂದಿದ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069, ದೂ.: 080 22977278 ಫ್ಯಾಕ್ಸ್: 080 22977278
ಇ–ಮೇಲ್: director@jayadevacardiology.com ವೆಬ್‌ಸೈಟ್: www.jayadevacardiology.com

ಸಂಖ್ಯೆ: ಎಸ್‌ಜೆಐಸಿಆರ್/ಇಎಸ್‌ಟಿ(1)/78/2023–24 ದಿನಾಂಕ: 16.08.2023

ವಾಕ್–ಇನ್–ಇಂಟರ್‌ವ್ಯೂನ ಅಧಿಸೂಚನೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಶಾಖೆಗೆ ಈ ಕೆಳಗೆ ತಿಳಿಸಿರುವ ಹುದ್ದೆಗಳ **ವಾಕ್–ಇನ್–ಇಂಟರ್‌ವ್ಯೂಗೆ** ಹಾಜರಾಗಲು ಅರ್ಹ ಅಭ್ಯರ್ಥಿಗಳನ್ನು ಆಹ್ವಾನಿಸಲಾಗಿದ್ದು, ತಿಳಿಸಿರುವ ಹುದ್ದೆಗಳು **ಬೆಂಗಳೂರು, ಮೈಸೂರು, ಕಲಬುರಗಿ ಶಾಖೆಗಳಿಗೆ ಸೇರಿವೆ.**

ಕ್ರ. ಸಂ.	ಹುದ್ದೆಯ ಹೆಸರು	ವೇತನ ಶ್ರೇಣಿ ಎಐಸಿಟಿಇ	ಹುದ್ದೆಗಳ ಸಂಖ್ಯೆ	ವರ್ಗೀಕರಣ	ವಯೋಮಿತಿ
1	ಸಹಾಯಕ ಪ್ರಾಧ್ಯಾಪಕರು ಹೃದ್ರೋಗ ಶಾಸ್ತ್ರ / ಸಹಾಯಕ ಪ್ರಾಧ್ಯಾಪಕರು ಪಿಡಿಯಾಟ್ರಿಕ್ ಕಾರ್ಡಿಯಾಲಜಿಸ್ಟ್	ರೂ. 79800–211500	16	ಪ.ಜಾ. – 3 ಸಾ.ವ. – 8 ಪ.ಪಂ. – 1 ಪ್ರ.ವ.–I – 1 ಪ್ರ.ವ.–IIಎ – 2 ಪ್ರ.ವ.–IIಬಿ – 1	ಪ.ಜಾ./ಪ.ಪಂ./ಪ್ರ.ವ.–I – 45 ವರ್ಷಗಳು ಸಾ.ವ. – 40 ವರ್ಷಗಳು ಪ್ರ.ವ.–IIಎ/IIಬಿ – 43 ವರ್ಷಗಳು
2	ಸಹಾಯಕ ಪ್ರಾಧ್ಯಾಪಕರು ಸಿ.ಟಿ. ಸರ್ಜರಿ	ರೂ. 79800–211500	05	ಪ.ಜಾ. – 1 ಸಾ.ವ. – 2 ಪ.ಪಂ. – 1 ಪ್ರ.ವ.–I – 1	ಪ.ಜಾ./ಪ.ಪಂ./ಪ್ರ.ವ.–I – 45 ವರ್ಷಗಳು ಸಾ.ವ. – 40 ವರ್ಷಗಳು
3	ಸಹಾಯಕ ಪ್ರಾಧ್ಯಾಪಕರು ಅರವಳಿಕೆ ಶಾಸ್ತ್ರ	ರೂ. 79800–211500	04	ಪ.ಜಾ. – 1 ಸಾ.ವ. – 2 ಪ.ಪಂ. – 1	ಪ.ಜಾ./ಪ.ಪಂ. – 45 ವರ್ಷಗಳು ಸಾ.ವ. – 40 ವರ್ಷಗಳು

ಸೂಚನೆ:

1) ಸೂಚಿಸಿರುವ ಹುದ್ದೆಗೆ ಸಂಬಂಧಿಸಿದಂತೆ ಅರ್ಹತೆಯ ವಿವರ, ವಿದ್ಯಾರ್ಹತೆ, ಅನುಭವ ಮತ್ತು ಮೀಸಲಾತಿ ಮತ್ತು ಸೂಚನೆಗಳನ್ನು ಸಂಸ್ಥೆಯ ವೆಬ್‌ಸೈಟ್: www.jayadevacardiology.comನಲ್ಲಿ ನೋಡಿಕೊಳ್ಳತಕ್ಕದ್ದು.
2) ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 069 ರಲ್ಲಿನ ಮೊದಲನೇ ಮಹಡಿಯಲ್ಲಿರುವ ಬೋರ್ಡ್ ರೂಂನಲ್ಲಿ ನೇರ ಸಂದರ್ಶನವನ್ನು ನಡೆಸಲಾಗುವುದು. ಮೇಲೆ ಹೇಳಿರುವ ಹುದ್ದೆಗೆ ಹಾಜರಾಗುವ ಅಭ್ಯರ್ಥಿಗಳು ದಿನಾಂಕ: 07.09.2023 ರಂದು ನಡೆಯುವ ನೇರ ಸಂದರ್ಶನಕ್ಕೆ ಹಾಜರಾಗತಕ್ಕದ್ದು, ಅಭ್ಯರ್ಥಿಗಳು ದಾಖಲಾತಿಗಳ ಪರಿಶೀಲನೆಗಾಗಿ ಬೆಳಗ್ಗೆ 8:30 ಗಂಟೆಗೆ ವರದಿ ಮಾಡಿಕೊಳ್ಳತಕ್ಕದ್ದು ಮತ್ತು ನೇರ ಸಂದರ್ಶನವನ್ನು ಬೆಳಿಗ್ಗೆ 11:30 ಗಂಟೆಗೆ ನಡೆಸಲಾಗುವುದು.

ಸಹಿ/–,
ನಿರ್ದೇಶಕರು

SANSERA ideas@work

ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್

(CIN: L34103KA1981PLC004542)
ನೋಂದಾಯಿತ ವಿಳಾಸ: ಘಟಕ–7, ಸಂ. 143/ಎ, ಜಿಗಣಿ ಲಿಂಕ್ ರಸ್ತೆ, ಬೊಮ್ಮಸಂದ್ರ ಔದ್ಯಮಿಕ ಪ್ರದೇಶ, ಆನೇಕಲ್ ತಾಲೂಕು, ಬೆಂಗಳೂರು - 560105, ಭಾರತ
ಫೋನ್ ನಂ: +91 80–27839081/82/83, **ಫ್ಯಾಕ್ಸ್ ಸಂ.:** +91 80 27839309
ಇಮೇಲ್: rajesh.modi@sansera.in; **ವೆಬ್‌ಸೈಟ್:** www.sansera.in

41ನೇ ವಾರ್ಷಿಕ ಪ್ರಧಾನ ಸಭೆ ಖಾತೆ ಮುಕ್ತಾಯ ಮತ್ತು ಇ–ಮತದಾನ ಮಾಹಿತಿಯ ನೋಟಿಸ್

ಕಂಪನಿಗಳ ಕಾಯ್ದೆ 2013 ರ 108ನೇ ಕಲಂ ಹಾಗೂ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮ 2014 ರ ನೀತಿ 20 ಕ್ಕೆ ಅನುಗುಣವಾಗಿ ಈ ನೋಟಿಸ್ ಪ್ರಕಟಿಸಲಾಗಿದೆ.

(ಎ) ವಾರ್ಷಿಕ ಪ್ರಧಾನ ಸಭೆ ಮತ್ತು ಖಾತೆ ಮುಕ್ತಾಯ:

ಈ ಮೂಲಕ ನೋಟಿಸ್ ನೀಡಿರುವುದೇನೆಂದರೆ, 2023 ಆಗಸ್ಟ್ 01 ರಂದು ನೀಡಿದ ಎಜಿಎಂ ನೋಟಿಸ್‌ನಲ್ಲಿ ನಿಗದಿಸಿದ ವಹಿವಾಟುಗಳನ್ನು ನಡೆಸಲು ವೀಡಿಯೋ ಕಾನ್ಫರೆನ್ಸಿಂಗ್ (“ವಿಸಿ”)/ ಇತರ ಧ್ವನಿ–ದೃಶ್ಯ ವಿಧಾನಗಳ (“ಒಎವಿಎಂ”) ಮೂಲಕ ಮಾತ್ರ 2023 ಸೆಪ್ಟೆಂಬರ್ 08 ರಂದು ಶುಕ್ರವಾರ ಮಧ್ಯಾಹ್ನ 11.00 ಗಂಟೆಗೆ (ಭಾರತೀಯ ಕಾಲಮಾನ) ನಡೆಸಲು ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್ (“ಕಂಪನಿ”) ಸದಸ್ಯರ 41ನೇ ವಾರ್ಷಿಕ ಪ್ರಧಾನ ಸಭೆ (ಎಜಿಎಂ) ಅನ್ನು ನಡೆಸಲಾಗುತ್ತದೆ. ವಿಸಿ/ಒಎವಿಎಂ ಮೂಲಕ ಕಂಪನಿಗಳು ಎಜಿಎಂ ಅನ್ನು ನಡೆಸಲು ಅನುವು ಮಾಡುವುದಕ್ಕೆ ಸಂಬಂಧಿಸಿದಂತೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ಷೇರು ವಿನಿಮಯ ಮಂಡಳಿ ಪ್ರಕಟಿಸಿದ ಸುತ್ತೋಲೆಗಳಿಗೆ ಅನುಗುಣವಾಗಿ ವಿಸಿ/ಒಎವಿಎಂ ಮೂಲಕ ಕಂಪನಿಯ ಎಜಿಎಂ ಅನ್ನು ನಡೆಸಲಾಗುತ್ತದೆ.

ಈ ಮೇಲೆ ಹೇಳಿದ ಸುತ್ತೋಲೆಗಳಿಗೆ ಅನುಗುಣವಾಗಿ, 2023 ಮಾರ್ಚ್ 31 ರಂದು ಆಡಿಟ್ ಮಾಡಿದ ಬ್ಯಾಲೆನ್ಸ್ ಶೀಟ್ ಜೊತೆಗೆ ಎಜಿಎಂ ನೋಟಿಸ್, ಆಡಿಟ್ ಮಾಡಿದ ಲಾಭ ಮತ್ತು ನಷ್ಟದ ಹೇಳಿಕೆ, 2023 ಮಾರ್ಚ್ 31 ಕ್ಕೆ ಕೊನೆಗೊಂಡ ವರ್ಷಾಂತ್ಯದ ನಗದು ಹರಿವು ಹೇಳಿಕೆ ಹಾಗೂ ನಿರ್ದೇಶಕರು ಮತ್ತು ಆಡಿಟರ್‌ಗಳ ವರದಿಗಳನ್ನು 2023 ಆಗಸ್ಟ್ 11, ಶುಕ್ರವಾರದಂದು ಕಂಪನಿ/ಡೆಪಾಸಿಟರಿ ಪಾರ್ಟಿಸಿಪಂಟ್(ಗಳು)/ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಎಟಡ್ (“ಲಿನ್ ಇನ್‌ಟೈಮ್”), ರಿಜಿಸ್ಟ್ರಾರ್ ಮತ್ತು ಕಂಪನಿಯ ಷೇರು ವರ್ಗಾವಣೆ ಏಜೆಂಟರ ಬಳಿ ತಮ್ಮ ಇಮೇಲ್ ಅನ್ನು ನೋಂದಣಿ ಮಾಡಿಕೊಂಡಿರುವ ಸದಸ್ಯರಿಗೆ ಮಾತ್ರ 2023 ಆಗಸ್ಟ್ 17 ರಂದು ಕಳುಹಿಸಲಾಗಿದೆ. ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳಿಗೆ ಅನುಗುಣವಾಗಿ ಎಜಿಎಂ ನೋಟಿಸ್‌ನ ಭೌತಿಕ ಪ್ರತಿಗಳನ್ನು ಕಳುಹಿಸುವ ಅಗತ್ಯವನ್ನು ನಿವಾರಿಸಲಾಗಿದೆ.

ವಿತ್ತ ವರ್ಷ 2022–23 ರ ಎಜಿಎಂ ನೋಟಿಸ್ ಮತ್ತು ಕಂಪನಿಯ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.sansera.in ಮತ್ತು ಕಂಪನಿಯ ಷೇರುಗಳನ್ನು ಲಿಸ್ಟ್ ಮಾಡಿರುವ ಷೇರು ವಿನಿಮಯ ಮಂಡಳಿಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಲಭ್ಯವಿದೆ. ಕಂಪನಿ/ಡೆಪಾಸಿಟರಿ ಪಾರ್ಟಿಸಿಪಂಟ್(ಗಳಲ್ಲಿ) ತಮ್ಮ ಇಮೇಲ್ ಐಡಿಗಳನ್ನು ನೋಂದಣಿ ಮಾಡದ ಸದಸ್ಯರೂ ಸೇರಿದಂತೆ, ಈ ಮೇಲೆ ಹೇಳಿದ ವೆಬ್‌ಸೈಟ್‌ಗಳಿಂದ ಎಜಿಎಂ ನೊಟಿಸ್ ಮತ್ತು ವಾರ್ಷಿಕ ವರದಿಯನ್ನು ಸದಸ್ಯರು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಲಿಂಕ್ ಇನ್‌ಟೈಮ್/ ಡೆಪಾಸಿಟರಿ ಪಾರ್ಟಿಸಿಪಂಟ್ (ಗಳಲ್ಲಿ) ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಳ್ಳದ ಸದಸ್ಯರು ಇಮೇಲ್ ವಿಳಾಸವನ್ನು ನೋಂದಣಿ ಮಾಡಲು ಮತ್ತು ಎಜಿಎಂ ನೋಟಿಸ್, ವಾರ್ಷಿಕ ವರದಿ ಮತ್ತು ಇ–ಮತದಾನದ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಇಮೇಲ್ ಮೂಲಕ ಸ್ವೀಕರಿಸಲು https://linkintime.co.in/emailreg/email_register.html ಲಿಂಕ್‌ಗೆ ಭೇಟಿ ನೀಡಬೇಕು. ಇಮೇಲ್ ವಿಳಾಸವನ್ನು ನೋಂದಣಿ ಮಾಡಿಕೊಳ್ಳಲು ಮತ್ತು ಇ–ಮತದಾನದ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಲು ಮತ್ತು ಎಜಿಎಂ ಸಮಯದಲ್ಲಿ ಇ–ಮತದಾನ ಮಾಡಲು ಮತ್ತು ರಿಮೋಟ್ ಆಗಿ ಮತದಾನ ಮಾಡುವ ವಿಧಾನದ ವಿವರವಾದ ಕ್ರಮವನ್ನು ಈ ಮೇಲೆ ಹೇಳಿದ ವೆಬ್‌ಸೈಟ್‌ಗಳಲ್ಲಿ ಲಭ್ಯವಾಗಿಸಲಾಗುತ್ತದೆ.

ವಿಸಿ/ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಲು ಮತ್ತು ಎಜಿಎಂ ವೆಬ್‌ಕಾಸ್ಟ್ ಅನ್ನು ವೀಕ್ಷಿಸಲು ಸೂಚನೆಗಳಿಗಾಗಿ ಎಜಿಎಂ ನೋಟಿಸ್ ಅನ್ನು ನೋಡುವಂತೆ ಸದಸ್ಯರಿಗೆ ವಿನಂತಿಸಲಾಗಿದೆ.

ಅಂಚೆ ವರ್ಗಾವಣೆಯಲ್ಲಿ ಯಾವುದೇ ನಷ್ಟ/ಮಧ್ಯಪ್ರವೇಶವನ್ನು ತಡೆಯುವುದಕ್ಕಾಗಿ ಮತ್ತು ನ್ಯಾಷನಲ್ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸರ್ವೀಸ್ (ಎನ್‌ಇಸಿಎಸ್) / ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸರ್ವೀಸ್ (ಇಸಿಎಸ್) ಮೂಲಕ ಡಿವಿಡೆಂಡ್ ಕ್ರೆಡಿಟ್ ಅನ್ನು ಪಡೆಯಲು ತಮ್ಮ ಎನ್‌ಇಸಿಎಸ್ / ಇಸಿಎಸ್ ವಿವರಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಿಗೆ rnt.helpdesk@linkintime.co.in ಇಮೇಲ್ ಐಡಿಗೆ ಸಲ್ಲಿಸಬೇಕು.

ಎಜಿಎಂ ದಿನಾಂಕದವರೆಗೆ ಕಂಪನಿಯ ಯಾವುದೇ ಕೆಲಸದ ದಿನದಲ್ಲಿ ಕಚೇರಿ ಅವಧಿಯಲ್ಲಿ ಕಂಪನಿಯ ಸದಸ್ಯರ ಎಲೆಕ್ಟ್ರಾನಿಕ್ ತಪಾಸಣೆಗೆ ಈ ಮೇಲಿನ ದಾಖಲೆಗಳು ಲಭ್ಯವಿವೆ.

ಖಾತೆ ಮುಕ್ತಾಯ:

ಸದಸ್ಯರ ನೋಂದಣಿ ಮತ್ತು ಕಂಪನಿಯ ಷೇರು ವರ್ಗಾವಣೆ ದಾಖಲೆಗಳು ಎಜಿಎಂ ಮತ್ತು 2023 ಮಾರ್ಚ್ 31 ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಡಿವಿಡೆಂಡ್ ಪಾವತಿ ಉದ್ದೇಶಕ್ಕೆ 2023 ಸೆಪ್ಟೆಂಬರ್ 02 ರಿಂದ 2023 ಸೆಪ್ಟೆಂಬರ್ 08 (ಎರಡೂ ದಿನಗಳನ್ನು ಒಳಗೊಂಡು) ಮುಚ್ಚಿರುತ್ತದೆ. ಸದಸ್ಯರು ಘೋಷಿಸಿದರೆ ಡಿವಿಡೆಂಡ್ ಅನ್ನು 2023 ಸೆಪ್ಟೆಂಬರ್ 20 ರಂದು ಅಥವಾ ಮೊದಲು ಅನ್ವಯಿಕ ತೆರಿಗೆಗೆ ಒಳಪಟ್ಟು ಪಾವತಿ ಮಾಡಲಾಗುತ್ತದೆ.

(ಬಿ) ರಿಮೋಟ್ ಇ–ಮತದಾನ

ಕಂಪನಿಗಳ ಕಾಯ್ದೆ 2013 ರ ವಿಭಾಗ 108 ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014 ರ ನಿಯಮ 20 ಹಾಗೂ ಅದಕ್ಕೆ ಕಾಲಕಾಲಕ್ಕೆ ಮಾಡಿದ ತಿದ್ದುಪಡಿಗಳು ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿ 2015 (ಲಿಸ್ಟಿಂಗ್ ನಿಯಮಾವಳಿಗಳು) ರ 44 ರ ವಿಭಾಗದ ಅನುಬಂಧಗಳು ಮತ್ತು ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆ ಪ್ರಕಟಿಸಿದ ಪ್ರಧಾನ ಸಭೆಗಳ ಕಾರ್ಯದರ್ಶೀಯ ಮಾನದಂಡ (ಎಸ್‌ಎಸ್–2) ಕ್ಕೆ ಅನುಗುಣವಾಗಿ ಎಜಿಎಂನಲ್ಲಿ ನಡೆಸಲಾಗುವ ವಹಿವಾಟುಗಳಿಗೆ ಸಂಬಂಧಿಸಿದಂತೆ ಎಜಿಎಂಗೂ ಮೊದಲು/ನಂತರ ರಿಮೋಟ್ ಇ–ಮತದಾನದ ಸೌಲಭ್ಯವನ್ನು ಕಂಪನಿಯು ತನ್ನ ಸದಸ್ಯರಿಗೆ ನೀಡುತ್ತಿದೆ ಮತ್ತು ಈ ಉದ್ದೇಶಕ್ಕೆ ಕಂಪನಿಯು ಎಲೆಕ್ಟ್ರಾನಿಕ್ ರೂಪದಲ್ಲಿ ಮತದಾನ ಸೌಲಭ್ಯ ಕಲ್ಪಿಸುವುದಕ್ಕಾಗಿ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅನ್ನು ಕಂಪನಿಯು ನೇಮಿಸಿದೆ.

ರಿಮೋಟ್ ಇ–ಮತದಾನದ ವಿವರವಾದ ಸೂಚನೆಗಳನ್ನು 41ನೇ ಎಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ. ಈ ಮುಂದಿನವುಗಳನ್ನು ಗಮನಿಸುವಂತೆ ಸದಸ್ಯರಿಗೆ ವಿನಂತಿಸಲಾಗಿದೆ.

ಎ) ಈ ಮುಂದಿನ ಅವಧಿಯಲ್ಲಿ ರಿಮೋಟ್ ಇ–ಮತದಾನದ ಸೌಲಭ್ಯವು ಲಭ್ಯವಿದೆ:

ಅ.ಸಂ	ವಿವರಗಳು / ಚಟುವಟಿಕೆ	ವಿವರಗಳು
1.	ರಿಮೋಟ್ ಇ–ಮತದಾನದ ಆರಂಭ ಮತ್ತು ಮುಕ್ತಾಯದ ದಿನಾಂಕ ಮತ್ತು ಸಮಯ	**ಆರಂಭ:** ಮಂಗಳವಾರ, ಸೆಪ್ಟೆಂಬರ್ 05, 2023 ಬೆಳಗ್ಗೆ 9:00 ಗಂಟೆ (ಭಾರತೀಯ ಕಾಲಮಾನ) **ಮುಕ್ತಾಯ:** ಗುರುವಾರ, ಸೆಪ್ಟೆಂಬರ್ 07, 2023 ಸಂಜೆ 5:00 ಗಂಟೆ (ಭಾರತೀಯ ಕಾಲಮಾನ)
2.	ಕಟ್ ಆಫ್ ದಿನಾಂಕ	ಶುಕ್ರವಾರ, ಸೆಪ್ಟೆಂಬರ್ 01, 2023.

ರಿಮೋಟ್ ಇ–ಮತದಾನ ಮಾಡ್ಯೂಲ್ ಅನ್ನು ಗುರುವಾರ, ಸೆಪ್ಟೆಂಬರ್ 07, 2023 ರಂದು ಸಂಜೆ 5.00 ಗಂಟೆಗೆ ನಿಷ್ಕ್ರಿಯಗೊಳಿಸಲಾಗುತ್ತದೆ.

ಬಿ) ಕಟ್ ಆಫ್ ದಿನಾಂಕ ಅಂದರೆ ಶುಕ್ರವಾರ, ಸೆಪ್ಟೆಂಬರ್ 01, 2023 ರಂದು ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಡೆಪಾಸಿಟರಿಗಳು ನಿರ್ವಹಿಸಿರುವ ಫಲಾನುಭವಿ ಮಾಲೀಕರ ನೋಂದಣಿಯಲ್ಲಿ ಹೆಸರು ದಾಖಲಾಗಿರುವ ಸದಸ್ಯರು ಮಾತ್ರ ಎಜಿಎಂ ವೇಳೆ ರಿಮೋಟ್ ಇ–ಮತದಾನ / ಇ–ಮತದಾನದ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಸದಸ್ಯರು ನಿಲುವಳಿಯ ಮೇಲೆ ಮತವನ್ನು ಹಾಕಿದ ನಂತರ, ಅದನ್ನು ಬದಲಾವಣೆ ಮಾಡಲು ಅವರಿಗೆ ಅನುಮತಿ ನೀಡಲಾಗುವುದಿಲ್ಲ. ಎಲೆಕ್ಟ್ರಾನಿಕ್ ರೂಪದಲ್ಲಿ ತಮ್ಮ ಮತವನ್ನು ಹಾಕದ ಸದಸ್ಯರು ಮತ್ತು ಮತ ಹಾಕುವುದರಿಂದ ನಿಷೇಧಿಸಲ್ಪಟ್ಟವರು ತಮ್ಮ ಮತದಾನದ ಹಕ್ಕನ್ನು ಎಜಿಎಂ ಅವಧಿಯಲ್ಲಿ ಇ–ಮತದಾನ ವ್ಯವಸ್ಥೆಯ ಮೂಲಕ ಮತ ಹಾಕಬಹುದು. ಎಜಿಎಂ ಸಮಯದಲ್ಲಿ ಇ–ಮತದಾನಕ್ಕೆ ಸೂಕ್ತ ವ್ಯವಸ್ಥೆಯನ್ನು ಕಂಪನಿ ಮಾಡುತ್ತದೆ. ಸಭೆಗೂ ಮುನ್ನ ರಿಮೋಟ್ ಇ–ಮತದಾನದ ಮೂಲಕ ತಮ್ಮ ಮತಗಳನ್ನು ಹಾಕಿದ ಸದಸ್ಯರು ಎಜಿಎಂಗೆ ಹಾಜರಾಗಬಹುದು. ಆದರೆ, ಎಜಿಎಂ ಅವಧಿಯಲ್ಲಿ ಪುನಃ ಮತ ಹಾಕಲು ಅವರು ಅರ್ಹರಾಗಿರುವುದಿಲ್ಲ.

ಸಿ) ಸಭೆಯಲ್ಲಿ ಮಾತನಾಡುವವರಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಸ್ತುತಪಡಿಸಲು/ ಪ್ರಶ್ನೆಗಳನ್ನು ಕೇಳಲು ಬಯಸುವ ಸದಸ್ಯರು ತಮ್ಮ ಹೆಸರು, ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ / ಫಾಲಿಯೋ ಸಂಖ್ಯೆ, ಪ್ಯಾನ್ ಮತ್ತು ಮೊಬೈಲ್ ನಂಬರ್ ಅನ್ನು ಕಂಪನಿಯ ಇಮೇಲ್ ಐಡಿ rajesh.modi@sansera.in ಗೆ 2023 ಆಗಸ್ಟ್ 30 ಬುಧವಾರದಂದು (ಸಂಜೆ 5.00 ಗಂಟೆವರೆಗೆ) ಅಥವಾ ಅದಕ್ಕೂ ಮೊದಲು ವಿನಂತಿಯನ್ನು ಕಳುಹಿಸುವ ಮೂಲಕ ಮೊದಲೇ ನೋಂದಣಿ ಮಾಡಿಕೊಳ್ಳಬೇಕು. ಮಾತನಾಡುವವರಾಗಿ ಮೊದಲೇ ನೋಂದಣಿ ಮಾಡಿಕೊಂಡ ಸದಸ್ಯರಿಗೆ ಮಾತ್ರ ಎಜಿಎಂ ವೇಳೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು/ಪ್ರಶ್ನೆಗಳನ್ನು ಕೇಳಲು ಅನುಮತಿಸಲಾಗುತ್ತದೆ. ಎಜಿಎಂಗೆ ಲಭ್ಯವಿರುವ ಸಮಯವನ್ನು ಆಧರಿಸಿ ಮಾತನಾಡುವವರ ಸಂಖ್ಯೆಯನ್ನು ನಿರ್ಬಂಧಿಸುವ ಹಕ್ಕನ್ನು ಕಂಪನಿ ಹೊಂದಿದೆ.

ಡಿ) ವಿಸಿ / ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಲು ಮತ್ತು ಇ–ಮತದಾನದ ವಿಧಾನದ ಸೂಚನೆಗಳನ್ನು ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಂಡಿರುವ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಅಥವಾ ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಂಡಿಲ್ಲದ ಸದಸ್ಯರಿಗಾಗಿ ಎಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ.

ಬೆಂಗಳೂರಿನ, ಪ್ರಾಕ್ಟೀಸ್ ಮಾಡುತ್ತಿರುವ ಕಂಪನಿ ಸೆಕ್ರೆಟರಿ ಸಂಸ್ಥೆ ಮೆಸರ್ಸ್ ಬಿಎಂಪಿ & ಕೋ. ಎಲ್‌ಎಲ್‌ಪಿ ಯ ಸಿಎಸ್ ಪ್ರಮೋದ್ ಎಸ್ ಎಂ ಅಥವಾ ಅವರನ್ನು ಉಳಿದು ಸಿಎಸ್ ಬಿಸ್ವಜಿತ್ ಘೋಷ್ ಅವರನ್ನು ಪಾರದರ್ಶಕ ಮತ್ತು ನ್ಯಾಯೋಚಿತ ವಿಧಾನದಲ್ಲಿ ಎಜಿಎಂ ವೇಳೆ/ಮೊದಲು ರಿಮೋಟ್ ಇ–ಮತದಾನದ ಪ್ರಕ್ರಿಯೆಯನ್ನು ಪರಿಶೀಲಿಸಲು ತಪಾಸಕರನ್ನಾಗಿ ನೇಮಿಸಲಾಗಿದೆ.

ವೆಬ್‌ಕಾಸ್ಟ್ ಸೌಲಭ್ಯ:

ಎಜಿಎಂ ಕಾರ್ಯಾಚರಣೆಯ ವೆಬ್‌ಕಾಸ್ಟ್ ಅನ್ನು ಕಂಪನಿ ಒದಗಿಸುತ್ತದೆ ಎಂಬುದನ್ನು ದಯವಿಟ್ಟು ಸದಸ್ಯರು ಗಮನಿಸಬೇಕು. ಎಜಿಎಂನಲ್ಲಿ ಭಾಗವಹಿಸಲು ಅರ್ಹವಾದ ಸದಸ್ಯರು, ತಮ್ಮ ಇ–ಮತದಾನ ಲಾಗಿನ್ ವಿವರಗಳನ್ನು ಬಳಸಿಕೊಂಡು ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವೆಬ್‌ಸೈಟ್ https://instameet.linkintime.co.in ಗೆ ಲಾಗಿನ್ ಮಾಡಿ ಎಜಿಎಂ ಕಾರ್ಯಾಚರಣೆಯನ್ನು ವೀಕ್ಷಿಸಬಹುದು.

ವಿಸಿ ಸಭೆ, ರಿಮೋಟ್ ಇ–ಮತದಾನಕ್ಕೆ ಸಂಬಂಧಿಸಿದ ಯಾವುದೇ ವಿಚಾರಣೆ / ಸ್ಪಷ್ಟನೆ / ದೂರಿಗೆ ಮತ್ತು ಎಜಿಎಂ ನೋಟಿಸ್ ವಿಲೇವಾರಿ ಮಾಡುವ ದಿನಾಂಕದ ನಂತರ ಕಂಪನಿಯ ಷೇರುಗಳನ್ನು ಪಡೆದ ಸದಸ್ಯರು ಮತ್ತು ಕಟ್ ಆಫ್ ದಿನಾಂಕ ಅಂದರೆ ಆಗಸ್ಟ್ 11, 2023 ರಂದು ಶುಕ್ರವಾರ ಷೇರುಗಳನ್ನು ಹೊಂದಿರುವವರು ಈ ಮುಂದೆ ನಮೂದಿಸಿದ ಹಂತಗಳನ್ನು ಅನುಸರಿಸಿ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು ಅಥವಾ ಕಂಪನಿಗೆ rajesh.modi@sansera.in ಗೆ ಇಮೇಲ್ ಬರೆಯಬಹುದು ಅಥವಾ ಆರ್‌ಟಿಎಗೆ enotices@linkintime.co.in ಇಮೇಲ್ ಬರೆಯಬಹುದು ಅಥವಾ ದೂರವಾಣಿ 022 - 4918 6000 ಗೆ ಮತ್ತು 1800 22 44 30 ಗೆ ಸಂಪರ್ಕಿಸಬಹುದು.

ಮಂಡಳಿ ನಿರ್ದೇಶಕರ ಆದೇಶದ ಮೇರೆಗೆ
ಸನ್ಸೆರಾ ಇಂಜಿನೀರಿಂಗ್ ಲಿಮಿಟೆಡ್ ಪರವಾಗಿ
ಸಹಿ/–
ರಾಜೇಶ್ ಕುಮಾರ್ ಮೋದಿ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂ. ಎಫ್5176

ಸ್ಥಳ: ಬೆಂಗಳೂರು
ದಿನಾಂಕ: ಆಗಸ್ಟ್ 17, 2023

ಗಾಂಧೀಜಿ, ನೆಹರೂ ಚರಿತ್ರೆ ತಿರುಚುವ ಕೆಲಸ: ಪ್ರಗತಿಪರ ಚಿಂತಕರ ದೂರು

ದ್ವೇಷ ರಾಜಕಾರಣ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವೇಷ ರಾಜಕಾರಣಕ್ಕಾಗಿ ಚರಿತ್ರೆಯನ್ನು ತಿರುಚುವ ಕೆಲಸ ನಡೆಯುತ್ತಿದೆ. ಗಾಂಧೀಜಿ, ನೆಹರೂ ಚರಿತ್ರೆ ಮಕ್ಕಳಿಗೆ ಸಿಗದಂತೆ ಮಾಡಲಾಗುತ್ತಿದೆ. ಗಾಂಧಿ ಪ್ರಣೀತ ಸಂಸ್ಥೆಗಳ ಅಂತಃಶಕ್ತಿಯನ್ನೇ ಉಡುಗಿಸುವ ಹುನ್ನಾರಗಳಾಗುತ್ತಿವೆ ಎಂದು ಪ್ರಗತಿಪರ ಚಿಂತಕರು ದೂರಿದರು.

ಗಾಂಧಿ ಭವನದ ಒಳ ಆವರಣದಲ್ಲಿರುವ ಗಾಂಧಿ ಪ್ರತಿಮೆಯ ಮುಂದೆ ಗುರುವಾರ ನಡೆದ ಪ್ರತಿಭಟನೆಯಲ್ಲಿ ಅನೇಕರು ಆಕ್ರೋಶ ವ್ಯಕ್ತಪಡಿಸಿದರು.

ಗುಜರಾತ್‌ನ ಅಹಮದಾಬಾದ್‌ನಲ್ಲಿ ಗಾಂಧೀಜಿ ಸ್ಥಾಪಿಸಿದ್ದ ಸಬರಮತಿ ಆಶ್ರಮವನ್ನು ಅಲ್ಲಿನ ಸರ್ಕಾರವು ವಾಣಿಜ್ಯ ಮತ್ತು ಪ್ರವಾಸಿ ಕೇಂದ್ರವನ್ನಾಗಿ ರೂಪಿಸಿ ಮೂಲ ಸಬರಮತಿ ಆಶ್ರಮದ ಆಶಯವನ್ನೇ ಹಾಳುಗೆಡವಿದೆ. 'ಸಬರಮತಿ ಆಶ್ರಮ ಸಂರಕ್ಷಣಾ ಮತ್ತು ಸ್ಮಾರಕ ಟ್ರಸ್ಟ್'ಗೆ ತಮ್ಮ ರಾಜಕೀಯ ನಿಲುವು ಇರುವವರನ್ನು ನೇಮಿಸಿದೆ. ಆಶ್ರಮದ ಆರಂಭದಿಂದಲೂ ಆರ್ಥಿಕ ನೆರವು ನೀಡುತ್ತಾ ಬಂದಿದ್ದ ಗಾಂಧಿ ಸ್ಮಾರಕ ನಿಧಿ, ಹರಿಜನ ಸೇವಕ ಸಂಘ, ಇತರ ಟ್ರಸ್ಟ್‌ಗಳನ್ನು ಮೂಲೆಗುಂಪು ಮಾಡಲಾಗಿದೆ ಎಂದು ಆರೋಪಿಸಿದರು.

ಗಾಂಧೀಜಿಯವರೇ 1920ರಲ್ಲಿ ಆರಂಭಿಸಿದ್ದ ಗುಜರಾತ್ ವಿದ್ಯಾಪೀಠವೂ ಈಗ ರಾಜಕೀಯ ಮೇಲಾಟಕ್ಕೆ ಬಲಿಯಾಗಿದೆ. ಗಾಂಧೀಜಿಗೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆ ಮತ್ತು ಮಾರಾಟಕ್ಕಾಗಿ ಸ್ಥಾಪಿಸಿದ್ದ ನವಜೀವನ ಟ್ರಸ್ಟ್ ಅನ್ನು ಮಾಮೂಲಿ ವ್ಯಾಪಾರೀ ಸಂಸ್ಥೆಯನ್ನಾಗಿ ಮಾಡಲಾಗಿದೆ. ಉತ್ತರಪ್ರದೇಶದ ವಾರಾಣಸಿಯಲ್ಲಿದ್ದ ಗಾಂಧಿಪ್ರಣೀತ ಸಂಸ್ಥೆ ಸರ್ವ ಸೇವಾ ಸಂಘದ ಆಸ್ತಿಯನ್ನು ರೈಲ್ವೆಗೆ ಸೇರಿದ ಆಸ್ತಿ ಎಂದು ದಾಖಲೆ ಸೃಷ್ಟಿಸಿ ವಶಪಡಿಸಿಕೊಳ್ಳಲಾಗಿದೆ. ಟ್ರಸ್ಟ್‌ನ ಕಟ್ಟಡಗಳಲ್ಲಿ ನೆಲೆಸಿದ್ದವರನ್ನು ಹೊರದಬ್ಬಿ ಕಟ್ಟಡಗಳನ್ನು ನೆಲಸಮ ಮಾಡಲಾಗಿದೆ ಎಂದು ದೂರಿದರು.

ಬೇರೆ ದೇಶಗಳಿಗೆ ಗಾಂಧೀಜಿಯ ಮಹತ್ವ ಅರ್ಥವಾಗಿದ್ದು, ಅಲ್ಲಿ ಸ್ಮರಣೆ ಕಾರ್ಯಗಳಾಗುತ್ತಿವೆ. ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳದ ಸಮುದಾಯದಿಂದ ಬಂದವರು ಇತಿಹಾಸ ತಿರುಚುತ್ತಿದ್ದಾರೆ. ಇಂದಿನ ಪ್ರತಿಭಟನೆಯ ಬಿಂದು ಬೃಹದಾಕಾರವಾಗಿ ಬೆಳೆದು ಮುಂದಿನ ಚುನಾವಣೆಯಲ್ಲಿ ಅವರಿಗೆ ಪಾಠ ಕಲಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರೊ.ಕೆ.ಮರುಳಸಿದ್ದಪ್ಪ, ಪ್ರೊ.ಜಿ.ರಾಮಕೃಷ್ಣ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಎಲ್.ಎನ್. ಮುಕುಂದರಾಜ್, ಕೆ. ಷರೀಫಾ, ಕೆ.ಎಸ್. ವಿಮಲಾ, ಎನ್.ಆರ್. ವಿಶುಕುಮಾರ್ ಮಾತನಾಡಿದರು.



ಗಾಂಧಿ ಪ್ರಣೀತ ಸಂಸ್ಥೆಗಳ ಮೇಲಿನ ದಮನಕಾರಿ ಕೃತ್ಯಗಳ ವಿರುದ್ಧ ಗಾಂಧಿ ಸ್ಮಾರಕ ನಿಧಿ ಮತ್ತು ಸಮಾನ ಮನಸ್ಕ ಸಂಘಟನೆಗಳು ಗುರುವಾರ ಬೆಂಗಳೂರಿನ ಗಾಂಧಿ ಭವನದ ಆವರಣದ ಗಾಂಧಿ ಪ್ರತಿಮೆಯ ಮುಂದೆ ಸಾಂಕೇತಿಕ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಉಪೇಂದ್ರ ವಿರುದ್ಧದ 2ನೇ ಎಫ್‌ಐಆರ್‌ಗೆ ತಡೆ

ಬೆಂಗಳೂರು: ಜಾತಿ ನಿಂದನೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರನಟ ಉಪೇಂದ್ರ ವಿರುದ್ಧ ಹಲಸೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಉಪೇಂದ್ರ ಅಲಿಯಾಸ್ ಬಿ.ಎಂ. ಉಪೇಂದ್ರ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಉಪೇಂದ್ರ ಪರ ಹಿರಿಯ ವಕೀಲ ಉದಯ ಹೊಳ್ಳ ಅವರು, 'ದೂರುದಾರ ಭೈರಪ್ಪ ಹರೀಶ್ ಕುಮಾರ್ ಕನ್ನಡಪರ ಸಂಘಟನೆ ಹೋರಾಟಗಾರ ಎಂದು ಹೇಳಿಕೊಂಡು ಪ್ರಚಾರಕ್ಕಾಗಿ ಇಂತಹ ದೂರು ಸಲ್ಲಿಸಿದ್ದಾರೆ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿದ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ (ಎಸ್‌ಪಿಪಿ-1) ಬಿ.ಎ.ಬೆಳ್ಳಿಯಪ್ಪ, 'ಅರ್ಜಿದಾರರ ಹೇಳಿಕೆ ಹಿಂಸೆಗೆ ಪ್ರಚೋದನೆ ನೀಡುವಂತಿದೆ. ಹೀಗಾಗಿ ಪ್ರಕರಣದ ತನಿಖೆ ಅಗತ್ಯವಿದೆ' ಎಂದು ಪ್ರತಿಪಾದಿಸಿದರು. ಇಬ್ಬರ ವಾದಾಂಶಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಈ ಪ್ರಕರಣವನ್ನು ಗಮನಿಸಿದಾಗ ಅರ್ಜಿದಾರರು ಒಂದು ನಿರ್ದಿಷ್ಟ ಸಮುದಾಯವನ್ನು ಉದ್ದೇಶಿಸಿ ಆ ರೀತಿ ಹೇಳಿದ್ದಾರೆಯೇ' ಎಂದು ಪ್ರಶ್ನಿಸಿತಲ್ಲದೆ, ಮಧ್ಯಂತರ ತಡೆ ನೀಡಿ ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು.



'ಅಪರಾಧ ಕೃತ್ಯಗಳಿಂದ ದೂರವಿರಿ'

ಮಾಗಡಿ: ಪೊಲೀಸ್ ಇಲಾಖೆಯಿಂದ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಕಾನೂನು ಅರಿವು ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸರ್ಕಲ್ ಇನ್ಸ್‌ಪೆಕ್ಟರ್ ಗಿರಿರಾಜ, ಜಿ.ವೈ., ಮಾತನಾಡಿ, 'ಕಾಲೇಜು ಜೀವನ ಬಂಗಾರದ ಜೀವನವಾಗಬೇಕಾದರೆ ದುಶ್ಚಟಗಳಿಂದ ದೂರವುಳಿದು ಜ್ಞಾನ ಸಂಪಾದಿಸಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

'ಬಾಲ್ಯ ವಿವಾಹ, ಅಪ್ರಾಪ್ತರಿಗೆ ಲೈಂಗಿಕ ದೌರ್ಜನ್ಯ, ಜಾತಿ, ಲಿಂಗಬೇಧ, ಧರ್ಮದ ವಿಚಾರದಲ್ಲಿ ನಿಂದನೆಗೆ ಮುಂದಾಗಬಾರದು. ಚಾಲನಾ ಪರವಾನಗಿ ಇಲ್ಲದೆ ವಾಹನ ಚಲಾಯಿಸುವುದು, ಸಂಚಾರ ನಿಯಮ ಉಲ್ಲಂಘಿಸುವುದು, ರೌಡಿಸಂ, ರ‍್ಯಾಗಿಂಗ್, ಕಳ್ಳತನ, ಕಾಲೇಜಿಗೆ ಚಕ್ಕರ್ ಒಡೆದು ಸುತ್ತುವುದು ಕಂಡು ಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಅಮಲಿನ ಪದಾರ್ಥ ಸೇವನೆ, ಮಾರಾಟ, ಸರಬರಾಜು ಮಾಡುವುದು ಕಾನೂನು ಬಾಹಿರ ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ತಾಯಿ-ತಂದೆ, ಗುರುಗಳಿಗೆ ಸದಾ ಗೌರವ ನೀಡಬೇಕು. ಕಾನೂನು ಉಲ್ಲಂಘಿಸುವವರಿಗೆ ಶಿಕ್ಷೆ ಕಾದಿದೆ ಎಂಬುದು ನೆನಪಿನಲ್ಲಿದ್ದರೆ ಸಾಕು' ಎಂದು ಹೇಳಿದರು.

ಕಾಲೇಜಿನ ಉಪನ್ಯಾಸಕರಾದ ಬೆಟ್ಟಸ್ವಾಮಿ, ಚಂದ್ರಕಲಾ ಇದ್ದರು.

ತೀಸ್ತಾಗೆ ಐಐಎಸ್‌ಸಿಯಲ್ಲಿ ಪ್ರವೇಶ ನಿರಾಕರಣೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಮು ಸೌಹಾರ್ದತೆ ಮತ್ತು ನ್ಯಾಯದ ಕುರಿತು ಉಪನ್ಯಾಸ ನೀಡಲು ಭಾರತೀಯ ವಿಜ್ಞಾನ ಸಂಸ್ಥೆಗೆ ಬುಧವಾರ ಬಂದಿದ್ದ ನಾಗರಿಕ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಅವರಿಗೆ ಪ್ರವೇಶ ನಿರಾಕರಿಸಲಾಯಿತು.

ಅಧ್ಯಾಪಕರು ಮಧ್ಯಪ್ರವೇಶಿಸಿ ಮಾತುಕತೆ ನಡೆಸಿದ ಬಳಿಕ ಪ್ರವೇಶ ನೀಡಲಾಯಿತು. ಆದರೆ, ನಿಗದಿತ ಸ್ಥಳವಾದ 'ಸೆಂಟರ್ ಫಾರ್ ಕಂಟಿನ್ಯೂಯಿಂಗ್ ಎಜುಕೇಷನ್' ನಲ್ಲಿ (ಸಿಸಿಇ) ಉಪನ್ಯಾಸ ನಡೆಯದೇ ಕ್ಯಾಂಪಸ್‌ನ ಬೇರೆ ಸ್ಥಳದಲ್ಲಿ ನಡೆಸಲಾಯಿತು. ಒಂದು ವಾರದ ಹಿಂದೆಯೇ ಕುಲಸಚಿವರು ಸೇರಿದಂತೆ ಸಂಸ್ಥೆಯ ಅಧಿಕಾರಿಗಳಿಗೆ ಇ-ಮೇಲ್ ಮೂಲಕ ವಿದ್ಯಾರ್ಥಿಗಳ ಸಂಘಟನೆಯಾದ 'ಬ್ರೇಕ್ ದ ಸೈಲನ್ಸ್'ಅನುಮತಿ ಕೋರಿತ್ತು. ಅದಕ್ಕೆ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ.

ಕಾರ್ಯಕ್ರಮಕ್ಕಿಂತ ಮೂರು ತಾಸು ಮೊದಲು ಕುಲಸಚಿವರು ನಮ್ಮನ್ನು ಕರೆದು, 'ಸಿಸಿಇಯಲ್ಲಿ ಕಾರ್ಯಕ್ರಮ ನಡೆಸಲು ಸಾಧ್ಯವಿಲ್ಲ. ಸಂಸ್ಥೆಯ ನಿರ್ದೇಶಕರು ಕಚೇರಿಯಲ್ಲಿ ಇಲ್ಲದ ಕಾರಣ ಇ-ಮೇಲ್‌ಗೆ ಪ್ರತಿಕ್ರಿಯಿಸಲು ಸಾಧ್ಯವಾಗಿಲ್ಲ ಎಂದು ತಿಳಿಸಿದರು' ಎಂದು ಸಂಘಟಕ, ವಿದ್ಯಾರ್ಥಿ ಸೇನ್‌ಗುಪ್ತಾ ತಿಳಿಸಿದ್ದಾರೆ.

ಸಿಸಿಇಯಲ್ಲಿ ಕಾರ್ಯಕ್ರಮ ನಡೆಸಲು ಅನುಮತಿ ದೊರೆಯದ ಕಾರಣ ಕೆಫೆಟೇರಿಯಾದಲ್ಲಿ ಅನೌಪಚಾರಿಕವಾಗಿ ನಡೆಸಲು ನಿರ್ಧರಿಸಲಾಯಿತು. ತೀಸ್ತಾ ಅವರು ಬಂದಾಗ ಐವರು ಭದ್ರತಾ ಸಿಬ್ಬಂದಿ ತಡೆದರು. ಬಳಿಕ ಅಧ್ಯಾಪಕರು ಮಧ್ಯಪ್ರವೇಶಿಸಿ, ತೀಸ್ತಾ ಸೆಟಲ್ವಾಡ್ ನಮ್ಮ ಅತಿಥಿ ಎಂದು ತಿಳಿಸಿದ ಮೇಲೆ ಕ್ಯಾಂಪಸ್ ಪ್ರವೇಶಿಸಲು ಅವಕಾಶ ನೀಡಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಗೇಟ್‌ವರೆಗೆ ಬಂದು ಹಿಂತಿರುಗಬೇಕಾಯಿತು. ಸಂಜೆ 6ರಿಂದ ರಾತ್ರಿ 8ರವರೆಗೆ ವಿದ್ಯಾರ್ಥಿಗಳೊಂದಿಗೆ ತೀಸ್ತಾ ಸಂವಾದ ನಡೆಸಿದರು ಎಂದು ಸೇನ್‌ಗುಪ್ತಾ ಮಾಹಿತಿ ನೀಡಿದರು. ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆಯ ಕುರಿತು ಚರ್ಚೆಯನ್ನು ಎರಡು ತಿಂಗಳ ಹಿಂದೆ ಆಯೋಜಿಸುವಾಗಲೂ ಅನುಮತಿಯನ್ನು ನಿರಾಕರಿಸಿದ್ದು ವಿವಾದವಾಗಿತ್ತು.

ವಾಸ್ತು ನೆಪ: ₹3.50 ಕೋಟಿ ವಂಚನೆ

ಠಾಣೆಗೆ ದೂರು ನೀಡಿದ್ದ ವೃದ್ಧೆ • ಮೂವರು ಮಹಿಳೆಯರು ಸೇರಿ ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ


ಅಪೂರ್ವಾ


ವಿಶಾಲಾ


ರಾಕೇಶ್


ಅರುಂಧತಿ

ಬೆಂಗಳೂರು: 'ವಾಸ್ತು ಸರಿ ಇಲ್ಲ' ಎಂಬುದಾಗಿ ಹೇಳಿ ಮನೆ ಮಾರಿಸಿ ₹ 3.50 ಕೋಟಿ ವಂಚನೆ ಮಾಡಿದ್ದ ಆರೋಪದಡಿ ಮೂವರು ಮಹಿಳೆಯರು ಸೇರಿ ನಾಲ್ವರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅಪೂರ್ವಾ ಯಾದವ್, ಅರುಂಧತಿ, ವಿಶಾಲಾ ಹಾಗೂ ರಾಕೇಶ್ ಬಂಧಿತರು. ನಾಲ್ವರು ಸೇರಿಕೊಂಡು ಒಳಸಂಚು ರೂಪಿಸಿ ವೃದ್ಧೆ ಶಾಂತಾ ಅವರ ಹಣ ತಮ್ಮದಾಗಿಸಿಕೊಂಡಿದ್ದರು. ವೃದ್ಧೆ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಂಬಿಎ ಪದವೀಧರರಾದ ಅಪೂರ್ವಾ ಹಾಗೂ ಅರುಂಧತಿ, ಇಬ್ಬರೂ ಬ್ಯಾಂಕ್ ಉದ್ಯೋಗಿಗಳು. ಅಪೂರ್ವಾ ಅವರ ತಾಯಿ ವಿಶಾಲಾ ಹಾಗೂ ಅರುಂಧತಿ ಪತಿ ರಾಕೇಶ್ ಕೃತ್ಯಕ್ಕೆ ಸಹಕಾರ ನೀಡಿದ್ದರು' ಎಂದರು.

ಬ್ಯಾಂಕ್‌ಗೆ ಹೋಗಿ ಬರುತ್ತಿದ್ದ ವೃದ್ಧೆ: 'ವೃದ್ಧೆ ಶಾಂತಾ ಅವರ ಪತಿ ತೀರಿಕೊಂಡಿದ್ದಾರೆ. ಪದ್ಮನಾಭನಗರದಲ್ಲಿ ಮಗಳ ಜೊತೆ ವೃದ್ಧೆ ವಾಸವಿದ್ದರು. ಹಣ ಪಡೆಯುವುದಕ್ಕಾಗಿ ಆಗಾಗ ಬ್ಯಾಂಕ್‌ಗೆ ಹೋಗಿ ಬರುತ್ತಿದ್ದರು. ಇದೇ ವೇಳೆಯೇ ಆರೋಪಿಗಳು, ವೃದ್ಧೆಯನ್ನು ಪರಿಚಯ ಮಾಡಿಕೊಂಡಿದ್ದರು' ಎಂದು ಪೊಲೀಸರು ತಿಳಿಸಿದರು.

'ವೃದ್ಧೆ ಜೊತೆ ಹೆಚ್ಚು ಮಾತನಾಡಲಾರಂಭಿಸಿದ್ದ ಆರೋಪಿಗಳು, ವಿಮೆ ಮಾಡಿಸಿಕೊಡುವುದಾಗಿ ಹೇಳಿ ಕೆಲ ತಿಂಗಳ ಹಿಂದೆಯಷ್ಟೇ ಮನೆಗೆ ಹೋಗಿದ್ದರು. ಮನೆ ನೋಡಿದ್ದ ಆರೋಪಿಗಳು, 'ನಿಮ್ಮ ಮನೆಯ ವಾಸ್ತು ಸರಿ ಇಲ್ಲ. ಈ ಮನೆಯಲ್ಲಿ ಇದ್ದರೆ, ನಿಮಗೆ ಸಾಕಷ್ಟು ತೊಂದರೆಗಳು ಬರುತ್ತವೆ. ಈ ಮನೆ ಮಾರಿ, ಬೇರೆ ಮನೆ ಖರೀದಿಸಿ. ಬೇಕಾದರೆ, ನಾವೇ ಖರೀದಿದಾರರನ್ನು ಹುಡುಕಿಕೊಡುತ್ತೇವೆ' ಎಂದು ಹೇಳಿದ್ದರು. ಅದನ್ನು ನಂಬಿದ್ದ ವೃದ್ಧೆ, ಮನೆ ಮಾರಲು ತೀರ್ಮಾನಿಸಿದ್ದರು' ಎಂದು ಪೊಲೀಸರು ಹೇಳಿದರು.

'ಖರೀದಿದಾರರನ್ನು ಕರೆತಂದಿದ್ದ ಆರೋಪಿಗಳು, ₹ 3.50 ಕೋಟಿಗೆ ಮನೆ ಮಾರಾಟ ಮಾಡಿಸಿದ್ದರು. ಹಣವೆಲ್ಲವೂ ವೃದ್ಧೆ ಬ್ಯಾಂಕ್ ಖಾತೆಗೆ ವರ್ಗಾವಣೆ ಆಗಿತ್ತು. ಅದರಲ್ಲಿ ಸ್ವಲ್ಪ ಹಣವನ್ನು ವೃದ್ಧೆ ನಿಶ್ಚಿತ ಠೇವಣಿ (ಎಫ್.ಡಿ) ಇರಿಸಿದ್ದರು. ಪತಿಯ ಹೆಸರಿನಲ್ಲಿರುವ ಷೇರು ಹಣ ಪಡೆಯಬೇಕೆಂದು ಹೇಳಿ ವೃದ್ಧೆಯ ಸಹಿ ಪಡೆದಿದ್ದ ಆರೋಪಿಗಳು, ನಿಶ್ಚಿತ ಠೇವಣಿ ಖಾತೆಗಳನ್ನು ಬಂದ್ ಮಾಡಿಸಿದ್ದರು. ಇದಾದ ನಂತರ, ವೃದ್ಧೆಯಿಂದ ಖಾಲಿ ಚೆಕ್‌ಗಳಿಗೆ ಸಹಿ ಪಡೆದುಕೊಂಡಿದ್ದರು. ಹಂತ ಹಂತವಾಗಿ ₹ 3.50 ಕೋಟಿಯನ್ನು ವರ್ಗಾಯಿಸಿಕೊಂಡಿದ್ದರು' ಎಂದು ತಿಳಿಸಿದರು.

ಮುಖ್ಯಾಂಶಗಳು
- ಬ್ಯಾಂಕ್ ಉದ್ಯೋಗಿಗಳ ಸಂಚು
- ಮಗಳ ಜೊತೆ ವಾಸವಿದ್ದ ವೃದ್ಧೆ
- ₹ 1.75 ಕೋಟಿ ಜಪ್ತಿ

ಸಂಬಂಧಿಕರ ಖಾತೆಗಳಿಗೆ ಹಣ: 'ವೃದ್ಧೆ ಖಾತೆಯಲ್ಲಿದ್ದ ಹಣವನ್ನು ಆರೋಪಿಗಳು, ತಮ್ಮ ಹಾಗೂ ಸಂಬಂಧಿಕರ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದರು. ಕೆಲ ಸಂಬಂಧಿಕರು, ತಮ್ಮ ಸಾಲಗಳನ್ನು ತೀರಿಸಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಅಪೂರ್ವಾ ಅವರಿಗೆ ಸ್ನೇಹಿತನಿದ್ದು, ಆತನ ಖಾತೆಗೂ ₹ 2 ಲಕ್ಷ ವರ್ಗಾವಣೆ ಆಗಿದೆ. ವಂಚನೆ ಹಣ ಪಡೆದಿದ್ದ ಸಂಬಂಧಿಕರು, ತಮ್ಮ ಸಾಲುಗಳನ್ನು ತೀರಿಸಿದ್ದಾರೆ. ಸದ್ಯ ಬಂಧಿತ ಆರೋಪಿಗಳಿಂದ ₹ 1.75 ಕೋಟಿ ಜಪ್ತಿ ಮಾಡಲಾಗಿದೆ. ಮರುಪಾವತಿ ಮಾಡಿರುವ ಸಾಲದ ಹಣವನ್ನು ವಾಪಸು ನೀಡುವಂತೆ ಬ್ಯಾಂಕ್‌ಗೆ ಪತ್ರ ಬರೆಯಲಾಗಿದೆ' ಎಂದರು.

ಗುಂಪು ಘರ್ಷಣೆ: ಲಘು ಲಾಠಿ ಪ್ರಹಾರ

ಬಾಳೆಹೊನ್ನೂರು (ಚಿಕ್ಕಮಗಳೂರು): ಪಟ್ಟಣದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದ್ದು, ಗುಂಪು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದಾರೆ.

ಸಂಜೆ ವೇಳೆ ಪೊಲೀಸ್ ಠಾಣೆ ಎದುರು ಕೆಲವು ಯುವಕರು ಕಿಚ್ಚಬ್ಬಿ ಬಳಿಯ ಯುವಕನ ಮೇಲೆ ಹಲ್ಲೆ ನಡೆಸಲು ಮುಂದಾದರು. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರ ಮೇಲೂ ಹಲ್ಲೆಗೆ ಮುಂದಾಗಿದ್ದಾರೆ. ತಕ್ಷಣ ಪೊಲೀಸರು ಯುವಕರನ್ನು ಠಾಣೆಗೆ ಕರೆದೊಯ್ದರು. ವಿಷಯ ತಿಳಿಯುತ್ತಿದ್ದಂತೆ ಠಾಣೆ ಎದುರು ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರು ಸೇರಿದರು. ಘಟನೆ ಕೈ ಮೀರುವುದನ್ನು ತಿಳಿದ ಪೊಲೀಸರು ಗುಂಪು ಚದುರಿಸಲು ಲಘು ಲಾಠಿ ಪ್ರಹಾರ ನಡೆಸಿದರು.

ಮುರುಘಾ ಮಠ: ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ, 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ'ಕ್ಕೆ ರಾಜ್ಯ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ ಆದೇಶವನ್ನು ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಮೇಲ್ಮನವಿ ವಿಚಾರಣೆಯನ್ನು ಹೈಕೋರ್ಟ್ ಇದೇ 21ಕ್ಕೆ ಮುಂದೂಡಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಒಟ್ಟು ಏಳು ಮೇಲ್ಮನವಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರವೂ ಮುಂದುವರಿಸಿತು. ಶಿವಮೂರ್ತಿ ಶರಣರ ಪರ ಹಿರಿಯ ವಕೀಲರಾದ ಜಯಕುಮಾರ್ ಎಸ್.ಪಾಟೀಲ,ಮಠದ ಪರ ಉದಯ ಹೊಳ್ಳ ವಾದ ಮಂಡಿಸಿದರು. ಅಡ್ವೊಕೇಟ್ ಜನರಲ್ ಅವರ ವಾದ ಮಂಡನೆಗಾಗಿ ವಿಚಾರಣೆಯನ್ನು ಮುಂದೂಡಲಾಗಿದೆ.

ಬಿಎಂಟಿಸಿ ಬಸ್ ಹರಿದು ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್ಸಿನ ಚಕ್ರ ತಲೆ ಮೇಲೆ ಹರಿದು ಬೈಕ್ ಸವಾರ ದಾಸಪ್ಪ (42) ಅವರು ಮೃತಪಟ್ಟಿದ್ದು, ಈ ಸಂಬಂಧ ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆಂಧ್ರಪ್ರದೇಶದ ಮಡಕಶಿರಾದ ದಾಸಪ್ಪ, ನಗರದ ಕಂಪನಿಯೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಗುರುವಾರ ಬೈಕ್‌ನಲ್ಲಿ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ' ಎಂದು ಪೀಣ್ಯ ಸಂಚಾರ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

ಕಾರಿಗೆ ಡಿಕ್ಕಿ ಹೊಡೆದಿದ್ದ ಬೈಕ್: 'ದಾಸಪ್ಪ ಅವರು ಬೈಕ್ ಚಲಾಯಿಸಿಕೊಂಡು ದಾಸರಹಳ್ಳಿ ಮೆಟ್ರೊ ನಿಲ್ದಾಣ ಬಳಿಯ ಸರ್ವೀಸ್ ರಸ್ತೆಯಲ್ಲಿ ಹೊರಟಿದ್ದರು. ಇದೇ ರಸ್ತೆಯ ಬದಿಯಲ್ಲಿ ಕಾರೊಂದನ್ನು ನಿಲ್ಲಿಸಲಾಗಿತ್ತು. ಅದೇ ಕಾರಿಗೆ ಬೈಕ್ ಡಿಕ್ಕಿ ಆಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ದಾಸಪ್ಪ ಅವರು ಬೈಕ್ ಸಮೇತ ರಸ್ತೆಗೆ ಬಿದ್ದಿದ್ದರು. ಅದೇ ಮಾರ್ಗದಲ್ಲಿ ಬರುತ್ತಿದ್ದ ಬಿಎಂಟಿಸಿ ಬಸ್ಸಿನ ಚಕ್ರ, ರಸ್ತೆಯಲ್ಲಿ ಬಿದ್ದಿದ್ದ ದಾಸಪ್ಪ ಅವರ ತಲೆ ಮೇಲೆ ಹರಿದಿತ್ತು. ತೀವ್ರ ಗಾಯಗೊಂಡು ದಾಸಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಾಹಿತಿ ತಿಳಿಯುತ್ತಿದ್ದಂತೆ ಸಿಬ್ಬಂದಿ ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ' ಎಂದು ಹೇಳಿವೆ.

ಬಸ್ ಬಿಟ್ಟು ಚಾಲಕ ಪರಾರಿ: 'ಅಪಘಾತದ ನಂತರ ಸ್ಥಳದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜನರು ಸೇರಿದ್ದರು. ಬಸ್ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಯಾವುದೇ ಸೂಚನೆ ನೀಡದೇ, ರಸ್ತೆಬದಿ ಕಾರು ನಿಲ್ಲಿಸಿದ್ದರಿಂದ ಈ ಅಪಘಾತ ಸಂಭವಿಸಿದೆ. ಬಿಎಂಟಿಸಿ ಚಾಲಕನ ನಿರ್ಲಕ್ಷ್ಯವೂ ಇದೆ. ಹೀಗಾಗಿ, ಕಾರು ಹಾಗೂ ಬಸ್ಸಿನ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಾರು, ಬಸ್ ಜಪ್ತಿ ಮಾಡಲಾಗಿದೆ' ಎಂದು ಹೇಳಿವೆ.

ಮೃತಪಟ್ಟಿದ್ದ ಬಾಲಕಿ: ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್ಸಿನ ಚಕ್ರ ಹರಿದು ನಾಲ್ಕೂವರೆ ವರ್ಷ ವಯಸ್ಸಿನ ಎಂ.ಡಿ. ಪೂರ್ವರಾವ್ ಬಾಲಕಿ ಮೃತಪಟ್ಟಿದ್ದಳು. ಇದಾದ ಮರುದಿನವೇ ಬಿಎಂಟಿಸಿ ಬಸ್‌ನಿಂದಾಗಿ ದಾಸಪ್ಪ ಮೃತಪಟ್ಟಿದ್ದಾರೆ.

1,500 ಎಳನೀರು ಕದ್ದಿದ್ದ ಮೂವರು ಬಂಧನ

ಬೆಂಗಳೂರು: ರಸ್ತೆಬದಿ ಇರಿಸಿದ್ದ ಎಳನೀರುಗಳನ್ನು ಕದ್ದೊಯ್ದಿದ್ದ ಮೂವರು ಆರೋಪಿಗಳನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಘು, ಗೌತಮ್ ಹಾಗೂ ಮಣಿಕಂಠ ಬಂಧಿತರು. ಕೊಲೆ ಯತ್ನ ಪ್ರಕರಣದ ಆರೋಪಿಯಾಗಿದ್ದ ರಘು, ತನ್ನ ಸಹಚರರ ಜೊತೆ ಸೇರಿ ಕೃತ್ಯ ಎಸಗಿದ್ದ' ಎಂದು ಪೊಲೀಸರು ಹೇಳಿದರು.

'ರಾಷ್ಟ್ರೀಯ ವಿದ್ಯಾಲಯ ರಸ್ತೆಯ ಮೆಟ್ರೊ ನಿಲ್ದಾಣ ಬಳಿ ವ್ಯಾಪಾರಿಯೊಬ್ಬರು ಎಳನೀರು ಮಾರುತ್ತಿದ್ದರು. ರಾತ್ರಿ ಸಮಯದಲ್ಲಿ ರಸ್ತೆಬದಿಯೇ ಎಳನೀರುಗಳನ್ನು ಸಂಗ್ರಹಿಸಿಟ್ಟು ಮನೆಗೆ ಹೋಗುತ್ತಿದ್ದರು. ಆಗಸ್ಟ್ 7ರಂದು ನಸುಕಿನಲ್ಲಿ ಟಾಟಾ ಏಸ್‌ನಲ್ಲಿ ಸ್ಥಳಕ್ಕೆ ಬಂದಿದ್ದ ಮೂವರು ಆರೋಪಿಗಳು, 1,500 ಎಳನೀರುಗಳನ್ನು ಕದ್ದೊಯ್ದಿದ್ದರು. ಕೃತ್ಯದ ಬಗ್ಗೆ ವ್ಯಾಪಾರಿ ದೂರ ನೀಡಿದ್ದರು' ಎಂದು ತಿಳಿಸಿದರು.

ಫೋನ್‌ಪೇ ನೀಡಿದ ಸುಳಿವು: 'ಆರೋಪಿಗಳ ಬಗ್ಗೆ ಯಾವುದೇ ಸುಳಿವು ಇರಲಿಲ್ಲ. ಘಟನಾ ಸ್ಥಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಳವಡಿಸಿದ್ದ 60 ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಉತ್ತರಹಳ್ಳಿ ಬಳಿಯ ಚಹಾ ಅಂಗಡಿ ಎದುರು ಟಾಟಾ ಏಸ್ ನಿಲ್ಲಿಸಿದ್ದ ಆರೋಪಿಗಳು, ಕೆಲ ನಿಮಿಷ ವಿಶ್ರಾಂತಿ ಪಡೆದಿದ್ದರು. ಅದೇ ಅಂಗಡಿಯಲ್ಲಿ ಚಹಾ ಕುಡಿದಿದ್ದರು. ಫೋನ್‌ಪೇ ಮೂಲಕ ಹಣ ಪಾವತಿಸಿದ್ದರು. ಇದೇ ಸುಳಿವು ಆಧರಿಸಿ ಅಂಗಡಿಗೆ ಹೋಗಿದ್ದ ಸಿಬ್ಬಂದಿ, ಆರೋಪಿಗಳ ಬಗ್ಗೆ ವಿಚಾರಿಸಿದ್ದರು. ಆರೋಪಿಗಳ ಮೊಬೈಲ್ ನಂಬರ್ ಸಿಕ್ಕಿತ್ತು.' 'ಮೊಬೈಲ್ ನಂಬರ್ ಪರಿಶೀಲಿಸಿದಾಗ, ಆರೋಪಿಗಳ ವಿಳಾಸ ಪತ್ತೆಯಾಯಿತು. ಬಳಿಕವೇ ಕಾರ್ಯಾಚರಣೆ ನಡೆಸಿ ಮೂವರನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಕ್ರಿಸ್ತು ಜಯಂತಿ ಕಾನೂನು ಕಾಲೇಜಿನಿಂದ ಸ್ಪರ್ಧೆ ಆಯೋಜನೆ

ಅಣಕು ನ್ಯಾಯಾಲಯ ಸ್ಪರ್ಧೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಸ್ತು ಜಯಂತಿ ಕಾನೂನು ಕಾಲೇಜು ಹಮ್ಮಿಕೊಂಡಿರುವ ಮೂರು ದಿನಗಳ ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆಗೆ ಗುರುವಾರ ಚಾಲನೆ ಸಿಕ್ಕಿದ್ದು, ದೇಶದ ವಿವಿಧೆಡೆಯಿಂದ 46 ಕಾನೂನು ಕಾಲೇಜುಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿವೆ.

ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ಅವರು ವರ್ಚುವಲ್ ಮಾದರಿಯಲ್ಲಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. 'ಇತ್ತೀಚೆಗೆ ವಕೀಲ ವೃತ್ತಿಗೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಾಗಿದ್ದು, ಈ ಕ್ಷೇತ್ರದಲ್ಲಿ ಮಹಿಳೆಯರಿಗೆ ಉತ್ತಮ ಅವಕಾಶಗಳಿವೆ. ಈ ಹಿಂದೆ ಈ ಕ್ಷೇತ್ರಕ್ಕೆ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ಹೀಗಾಗಿ, ಬೆರಳಣಿಕೆಯಷ್ಟು ಮಾತ್ರ ಮಹಿಳಾ ವಕೀಲರು ನ್ಯಾಯಾಲಯದಲ್ಲಿ ಕಾಣಿಸುತ್ತಿದ್ದರು. ಇತ್ತೀಚೆಗೆ ಕೋರ್ಟ್ ಗಳಲ್ಲಿ ಮಹಿಳಾ ನ್ಯಾಯಾಧೀಶರ ಸಂಖ್ಯೆಯೂ ಹೆಚ್ಚಳವಾಗಿದೆ' ಎಂದು ಹೇಳಿದರು.

ಕ್ರಿಸ್ತು ಜಯಂತಿ ಕಾನೂನು ಕಾಲೇಜಿನ ಪ್ರಾಂಶುಪಾಲ ಮೋಹನ್ ಆರ್. ಬೊಳ್ಳ, 'ಕಾನೂನು ವಿದ್ಯಾರ್ಥಿಗಳು ಪಠ್ಯಕ್ಕೆ ಸೀಮಿತವಾಗದೆ ಇತರ ಚಟುವಟಿಕೆಗಳಿಂದ ಜ್ಞಾನ ಸಂಪಾದಿಸಬೇಕು. ಅಣಕು ನ್ಯಾಯಾಲಯ ಸ್ಪರ್ಧೆಯಿಂದ ವಿದ್ಯಾರ್ಥಿಗಳು ಸಾಕಷ್ಟು ಕಲಿಯಬಹುದು' ಎಂದು ತಿಳಿಸಿದರು.

ಎಲ್‌ಎಲ್‌ಬಿ ಅಂತಿಮ ವರ್ಷದ ವಿದ್ಯಾರ್ಥಿ ಅಖೀಲ್ ಮೊಹಮ್ಮದ್, 'ಅಣಕು ನ್ಯಾಯಾಲಯ ಸ್ಪರ್ಧೆಯು ಕಾನೂನು ಶಿಕ್ಷಣದ ಗುಣಮಟ್ಟ ವೃದ್ಧಿಗೆ ಸಹಕಾರಿಯಾಗಿದೆ' ಎಂದು ಹೇಳಿದರು.



ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಭಾಗವಹಿಸಿರುವ ವಿವಿಧ ಕಾಲೇಜಿನ ವಿದ್ಯಾರ್ಥಿಗಳು

ಶಾಶ್ವತ ಪರಿಶೋಧನಾ ಸಮಿತಿ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯಗಳ ಕುಲಪತಿ ನೇಮಕಕ್ಕೆ ಶಿಕ್ಷಣ ತಜ್ಞರನ್ನು ಒಳಗೊಂಡ ಶಾಶ್ವತ ಪರಿಶೋಧನಾ ಸಮಿತಿ ರಚಿಸಬೇಕು ಎಂದು ಕಾಂಗ್ರೆಸ್ ಮುಖಂಡ ಪ್ರೊ. ಬಿ.ಕೆ.ಚಂದ್ರಶೇಖರ್ ಒತ್ತಾಯಿಸಿದರು.

ಈಚಿನ ವರ್ಷಗಳಲ್ಲಿ ಕುಲಪತಿಗಳ ನೇಮಕದಲ್ಲಿ ಪಾರದರ್ಶಕತೆ ಕಾಣುತ್ತಿಲ್ಲ. ಹಣ ನೀಡಿ ಹುದ್ದೆ ಪಡೆಯಲಾಗುತ್ತಿದೆ. ಹೀಗೆ ನೇಮಕವಾದವರು ರಾಜಕೀಯ ಹಿಡಿತದಲ್ಲೇ ಕೆಲಸ ಮಾಡುತ್ತಿದ್ದಾರೆ. ಸಿಂಡಿಕೇಟ್‌ಗಳಲ್ಲೂ ಸರ್ಕಾರ ನಾಮ ನಿರ್ದೇಶನ ಆರಂಭಿಸಿದ ನಂತರ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದೆ ಉನ್ನತ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಎಂದು ಹೇಳಿದರು..

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಗೆ ತಿದ್ದುಪಡಿ ತರಬೇಕು. ಕುಲಪತಿಗಳ ಆಯ್ಕೆಗೆ ಭಾರತೀಯ ವಿಜ್ಞಾನ ಸಂಸ್ಥೆ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳ ತಜ್ಞರ ಶಾಶ್ವತ ಪರಿಶೋಧನಾ ಸಮಿತಿ ರಚಿಸಬೇಕು. ಸಮಿತಿಯು ಒಬ್ಬರನ್ನು ಮಾತ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ರಾಜ್ಯಪಾಲರಿಗಿರುವ ಅಧಿಕಾರವನ್ನು ಹಿಂಪಡೆಯಬೇಕು ಎಂದು ಹೇಳಿದರು.

ಉನ್ನತ ಶಿಕ್ಷಣದ ಕೆಳ ಹಂತದಲ್ಲಿ ಲಂಚ: 'ಕಡತ ವಿಲೇವಾರಿಗೆ ಉನ್ನತ ಶಿಕ್ಷಣ ಇಲಾಖೆಯ ಕೆಳ ಹಂತದ ಅಧಿಕಾರಿಗಳು ಲಂಚ ಪಡೆಯುತ್ತಿದ್ದಾರೆ. ಹಾಸನ ಜಿಲ್ಲೆಯ ಕಾಲೇಜೊಂದರ ಟ್ರಸ್ಟ್‌ನ ಹೆಸರು ಬದಲಾವಣೆ, ಸ್ಥಳಾಂತರಕ್ಕೆ ಇಬ್ಬರು ಅಧಿಕಾರಿಗಳು ಹಣ ಪಡೆದಿದ್ದಾರೆ. ಇದನ್ನು ಇಲಾಖೆಯ ಪ್ರಧಾನ ಕಾರ್ಯದರ್ಶಿ ಗಮನಕ್ಕೆ ತಂದಿದ್ದೇನೆ' ಎಂದರು.

ಎಂಜಿನಿಯರಿಂಗ್ ವಿದ್ಯಾರ್ಥಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆಜಾನ್ ಇ-ಕಾಮರ್ಸ್ ಕಂಪನಿಗೆ ಗ್ರಾಹಕರ ಸೋಗಿನಲ್ಲಿ ವಂಚಿಸುತ್ತಿದ್ದ ಆರೋಪದಡಿ ಎಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬರನ್ನು ಯಶವಂತಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಗರದ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದ ಆರೋಪಿ, ತನ್ನದೇ ಸಹಪಾಠಿಗಳ ತಂಡ ಕಟ್ಟಿಕೊಂಡು ಕೃತ್ಯ ಎಸಗುತ್ತಿದ್ದ. ಕಂಪನಿ ವ್ಯವಸ್ಥಾಪಕ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ. ₹ 20.34 ಲಕ್ಷ ಮೌಲ್ಯದ 16 ಮೊಬೈಲ್‌ಗಳು, ನಾಲ್ಕು ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ವಂಚನೆ ಹೇಗೆ: 'ಅಮೆಜಾನ್ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದ ಆರೋಪಿ, ಮೊಬೈಲ್ ಹಾಗೂ ಇತರೆ ವಸ್ತುಗಳನ್ನು ಖರೀದಿಸುತ್ತಿದ್ದ. ಮುಂಗಡವಾಗಿ ಹಣ ಪಾವತಿಸುತ್ತಿದ್ದ. ವಸ್ತುಗಳು ತನ್ನ ವಿಳಾಸಕ್ಕೆ ಡೆಲಿವರಿ ಆಗುತ್ತಿದ್ದವು. ನಂತರ ಆ್ಯಪ್‌ನಲ್ಲಿ ಆರ್ಡರ್ ರದ್ದು ಮಾಡುತ್ತಿದ್ದ. ವಸ್ತುಗಳನ್ನು ವಾಪಸು ಕೊಡುವುದಾಗಿ ಹೇಳುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಆರ್ಡರ್ ರದ್ದು ಮಾಡಿದ್ದರಿಂದಾಗಿ ಕಂಪನಿಯವರು ಆರೋಪಿ ಖಾತೆಗೆ ಹಣ ವಾಪಸು ಜಮೆ ಮಾಡುತ್ತಿದ್ದರು. ಆದರೆ, ಆರೋಪಿ ಡೆಲಿವರಿ ಬಾಯ್‌ಗೆ ವಸ್ತುಗಳನ್ನು ವಾಪಸು ನೀಡುತ್ತಿರಲಿಲ್ಲ. ಕಂಪನಿ ಅಧಿಕಾರಿಗಳು, ಆಂತರಿಕ ತನಿಖೆ ನಡೆಸಿ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

ಬ್ಯಾಂಕ್ ಖಾತೆಯಲ್ಲಿ ₹ 30 ಲಕ್ಷ: 'ವಂಚನೆ ಮೂಲಕ ಬಂದ ವಸ್ತುಗಳನ್ನು ಮಾರಾಟ ಮಾಡಲು ಆರೋಪಿ, ಟೆಲಿಗ್ರಾಂ ಗ್ರೂಪ್ ಮಾಡಿಕೊಂಡಿದ್ದ. ಕಡಿಮೆ ಬೆಲೆಗೆ ವಸ್ತುಗಳನ್ನು ಮಾರಿ ಹಣ ಸಂಪಾದಿಸುತ್ತಿದ್ದ. ಹೀಗೆ ಗಳಿಸಿದ್ದ ₹ 30 ಲಕ್ಷವನ್ನು ಬ್ಯಾಂಕ್ ಖಾತೆಯಲ್ಲಿ ಇರಿಸಿದ್ದ. ಈ ಖಾತೆ ವಹಿವಾಟುಗಳನ್ನು ಈಗಾಗಲೇ ಸ್ಥಗಿತಗೊಳಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಆರೋಪಿ ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಇದಕ್ಕೆ ಸಹಪಾಠಿಗಳೂ ಸಹಕಾರ ನೀಡುತ್ತಿದ್ದರು. ಎಲ್ಲರನ್ನೂ ಪತ್ತೆ ಮಾಡಲಾಗುತ್ತಿದೆ' ಎಂದು ಹೇಳಿದರು.

ಶೈಲೇಶ್ ಕುಮಾರ್ ಪ್ರಕರಣ: ದತ್ತಾಂಶ ಅಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಸ್ಲಾಂ ಧರ್ಮ ಮತ್ತು ಸೌದಿ ಅರೇಬಿಯಾದ ರಾಜನ ಕುರಿತಂತೆ ಫೇಸ್‌ಬುಕ್‌ನಲ್ಲಿ ನಿಂದನಾತ್ಮಕ ಹೇಳಿಕೆಗಳನ್ನು ಪ್ರಕಟಿಸಿದ ಆರೋಪದಡಿ ಸೌದಿ ಅರೇಬಿಯಾದಲ್ಲಿ 15 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿರುವ ಮಂಗಳೂರಿನ ಶೈಲೇಶ್ ಕುಮಾರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅಗತ್ಯ ದತ್ತಾಂಶ ಲಭ್ಯವಾಗದೇ ಇರುವುದರಿಂದ ತನಿಖೆ ಮುಂದುವರಿಸಲಾಗಿಲ್ಲ' ಎಂದು ತನಿಖಾಧಿಕಾರಿ ಹೈಕೋರ್ಟ್‌ಗೆ ತಿಳಿಸಿದ್ದಾರೆ.

ಈ ಸಂಬಂಧ ಶೈಲೇಶ್ ಪತ್ನಿ ಕವಿತಾ ಶೈಲೇಶ್ ಸಲ್ಲಿಸಿರುವ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ಆರಂಭವಾಗುತ್ತಿದ್ದಂತೆ ತನಿಖಾಧಿಕಾರಿಯನ್ನು ಕುರಿತು ನ್ಯಾಯಪೀಠವು, 'ತನಿಖೆ ಯಾವ ಹಂತದಲ್ಲಿದೆ? ಏನೆಲ್ಲಾ ಆಗಿದೆ? ಶೈಲೇಶ್ ಕುಮಾರ್ ಅವರನ್ನು ಯಾವುದಾದರೂ ಕ್ರಿಮಿನಲ್ ಪ್ರಕರಣದಲ್ಲಿ ಸಿಲುಕಿಸಬೇಕು ಎಂಬ ಶಂಕೆಯ ಕುರಿತಾದ ತನಿಖೆ ಏನಾಗಿದೆ?' ಎಂದು ರಾಜ್ಯ ಸರ್ಕಾರವನ್ನು ಮೌಖಿಕವಾಗಿ ಪ್ರಶ್ನಿಸಿತು.

ಇದಕ್ಕೆ ತನಿಖಾಧಿಕಾರಿಯು 'ಅಗತ್ಯ ದತ್ತಾಂಶ ಲಭ್ಯವಾಗದಿರುವುದರಿಂದ ತನಿಖೆ ಮುಂದುವರಿಸಲಾಗಿಲ್ಲ' ಎಂದು ಪೀಠಕ್ಕೆ ವಿವರಿಸಿದರು. ಏತನ್ಮಧ್ಯೆ, ಕೇಂದ್ರ ಸರ್ಕಾರದ ಪರ ವಕೀಲ ಮಧುಕರ್ ದೇಶಪಾಂಡೆ, 'ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಯು ಮೇಲ್ಮನವಿ ವಿಚಾರಣೆಯ ವೇಳೆ ತನ್ನ ಇಚ್ಛೆಯ ವಕೀಲರನ್ನು ನೇಮಿಸಿಕೊಳ್ಳಬಹುದೇ? ಹೌದಾದರೆ, ಭಾರತ ಸರ್ಕಾರವು ಅವರಿಗೆ ವಕೀಲರ ನೆರವು ಒದಗಿಸಲಿದೆಯೇ? ಸೌದಿ ಅರೇಬಿಯಾದ ಸ್ಥಳೀಯ ಕಾನೂನಿನ ಅಡಿ ಶಿಕ್ಷೆ ಕಾಯಂಗೊಳಿಸುವ ಪ್ರಕ್ರಿಯೆಯ ವ್ಯಾಪ್ತಿ ಏನು? ತನಿಖೆಯಲ್ಲಿ ಕಂಡುಬರುವ ಮಾಹಿತಿಯನ್ನು ಅಲ್ಲಿನ ನ್ಯಾಯಾಲಯದ ಮುಂದೆ ಇಡಬಹುದೇ? ಭಾರತದಲ್ಲಿ ಪೊಲೀಸ್ ವಿಚಾರಣೆ ನಡೆಯುತ್ತಿದ್ದು, ಅದು ಪೂರ್ಣಗೊಳ್ಳುವವರೆಗೆ ವಿಚಾರಣೆಯನ್ನು ಮುಂದೂಡುವಂತೆ ಭಾರತೀಯ ರಾಯಭಾರ ಕಚೇರಿಯನ್ನು ಕೋರಬಹುದೇ?' ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಎರಡು ಕಾಲಾವಕಾಶ ಬೇಕು ಎಂದು ಕೋರಿದರು. ಇದಕ್ಕೆ ಮಾನ್ಯ ಮಾಡಿದ ನ್ಯಾಯಪೀಠವು ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿತು.

ಸಾಹಿತಿಗಳಿಗೆ ಬೆದರಿಕೆ ಪತ್ರ: ಸರ್ಕಾರದ ಗಮನಕ್ಕೆ ತರಲು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಮುವಾದಿ, ಜಾತಿವಾದ ವಿರುದ್ಧದ ನಿಲುವುಳ್ಳ ಲೇಖಕರು, ಚಿಂತಕರಿಗೆ ಬೆದರಿಕೆ ಪತ್ರಗಳು ಬರುತ್ತಿದ್ದು, ರಕ್ಷಣೆ ನೀಡಲು ಮತ್ತು ಪತ್ರ ಬರೆದವರ ವಿರುದ್ಧ ಕ್ರಮ ಕೈಗೊಳ್ಳಲು ಗೃಹಸಚಿವರಿಗೆ ಮನವಿ ಸಲ್ಲಿಸಲಾಗುವುದು ಎಂದು ಸಾಹಿತಿಗಳು ತಿಳಿಸಿದ್ದಾರೆ.

ಪ್ರೊ. ಕೆ. ಮರುಳಸಿದ್ದಪ್ಪ, ಪ್ರೊ. ಎಸ್.ಜಿ. ಸಿದ್ದರಾಮಯ್ಯ,ಬಂಜಗೆರೆ ಜಯಪ್ರಕಾಶ್, ವಸುಂದರಾ ಭೂಪತಿ, ಕುಂ. ವೀರಭದ್ರಪ್ಪ ಸೇರಿದಂತೆ 15ಕ್ಕೂ ಹೆಚ್ಚು ಲೇಖಕರಿಗೆ ಒಂದು ವರ್ಷದಿಂದ ಬೆದರಿಕೆ ಪತ್ರಗಳು ಬರುತ್ತಿವೆ. ಬೆದರಿಕೆ ಪತ್ರ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಆರೋಪಿಗಳನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಚರ್ಚಿಸಲು ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರನ್ನು ಶನಿವಾರ ಭೇಟಿ ಮಾಡಲಾಗುವುದು ಎಂದು ಹೇಳಿದ್ದಾರೆ.

'ಕೋಮುವಾದಿ ಗುಂಪಿನಿಂದಲೇ ಈ ಪತ್ರಗಳು ಬರುತ್ತಿವೆ. ಜಾತಿವಾದ, ಕೋಮುವಾದ ವಿರುದ್ಧ ಮಾತನಾಡಿದಾಗಲೆಲ್ಲ 'ನಿಮ್ಮನ್ನು ಮುಗಿಸಿ ಬಿಡ್ತೀವಿ' ಎಂದು ಒಂದೇ ರೀತಿಯಲ್ಲಿ ಎಲ್ಲರಿಗೂ ಪತ್ರ ಬರುತ್ತಿವೆ. ಗೌರಿ ಲಂಕೇಶ್ , ಕಲ್ಬುರ್ಗಿಯವರ ಹತ್ಯೆ ಮಾಡಿದ ಗುಂಪು ನಮ್ಮನ್ನು ಹತ್ಯೆ ಮಾಡಬಹುದು. ಅದಕ್ಕಾಗಿ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ' ಎಂದು ಲೇಖಕ ಕೆ. ಮರುಳಸಿದ್ದಪ್ಪ ಮಾಹಿತಿ ನೀಡಿದರು.

'ರಕ್ಷಣೆ ನೀಡಲು ಸೂಚನೆ'



'ಈಗಾಗಲೇ ಸಾಹಿತಿಗಳ ನಿಯೋಗ ಭೇಟಿಗೆ ಸಮಯ ಕೇಳಿದ್ದಾರೆ. ಹಿಂದೆ ಬಹಳ ಕಹಿ ಘಟನೆಗಳಾಗಿವೆ. ರಕ್ಷಣೆ ನೀಡುವಂತೆ ಡಿಜಿಪಿ ಮತ್ತು ಕಮಿಷನರ್‌ಗೆ ಸೂಚನೆ ನೀಡಿದ್ದೇನೆ. ನಾವು ಕಲ್ಬುರ್ಗಿ, ಗೌರಿಲಂಕೇಶ್ ಹತ್ಯೆಯನ್ನು ಮರೆತಿಲ್ಲ. ಈ ಬೆದರಿಕೆ ಪತ್ರ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುವುದು' ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದ್ದಾರೆ.

ಒಂದು ವಾರದೊಳಗೆ ಮಳೆಯಾಗದಿದ್ದರೆ ಫಸಲು ಸಿಗುವುದು ಕಷ್ಟ: ಸಚಿವ ಎನ್‌. ಚಲುವರಾಯಸ್ವಾಮಿ

‘61.72 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಈ ಬಾರಿಯ ಮುಂಗಾರು ಹಂಗಾಮಿನಲ್ಲಿ 61.72 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ (ಶೇ 75ರಷ್ಟು) ಮಾತ್ರ ಬಿತ್ತನೆಯಾಗಿದೆ’ ಎಂದು ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘82.35 ಲಕ್ಷ ಹೆಕ್ಟರ್ ಬಿತ್ತನೆಯ ಗುರಿ ಹೊಂದಲಾಗಿತ್ತು. ಆದರೆ, ಮಳೆ ಕೊರತೆಯಿಂದ ಗುರಿ ಸಾಧಿಸಿಲ್ಲ. ಕಳೆದ ಎರಡು ವಾರಗಳಿಂದ ರಾಜ್ಯದಲ್ಲಿ ಮುಂಗಾರು ದುರ್ಬಲವಾಗಿದ್ದು, ಮಳೆಯಿಲ್ಲದೆ ಬೆಳೆಗಳೆಲ್ಲ ಒಣಗುವ ಹಂತಕ್ಕೆ ತಲುಪಿವೆ. ಒಂದು ವಾರದೊಳಗೆ ಮಳೆಯಾಗದಿದ್ದರೆ ರೈತರ ಕೈಗೆ ಫಸಲು ಸಿಗುವುದು ಕಷ್ಟವಾಗಲಿದೆ’ ಎಂದರು.

’ಬರ ಘೋಷಿಸಲು ವಿವಿಧ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಶೇ 60ಕ್ಕಿಂತ ಹೆಚ್ಚು ಮಳೆಯ ಕೊರತೆ, ಸತತ ಮೂರು ವಾರಗಳ ಕಾಲ ಒಣ ಹವೆ, ಶೇ 75ಕ್ಕಿಂತ ಕಡಿಮೆ ಪ್ರದೇಶದಲ್ಲಿ ಬಿತ್ತನೆ, ಮಣ್ಣಿನಲ್ಲಿ ಶೇ 50ಕ್ಕಿಂತ ಕಡಿಮೆ ತೇವಾಂಶ ಮತ್ತು ಜಲಾಶಯಗಳಲ್ಲಿರುವ ನೀರಿನ ಮಟ್ಟ ಆಧರಿಸಿ ಬರ ಘೋಷಿಸಲಾಗುತ್ತದೆ. ಸ್ಥಳೀಯ ಸಮಸ್ಯೆಗಳ ಮಾಹಿತಿ ಪಡೆದು ಸಚಿವರ ಉಪಸಮಿತಿಯಲ್ಲಿ ಚರ್ಚಿಸಲಾಗುವುದು’ ಎಂದು ತಿಳಿಸಿದರು.

‘ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಸತತ ಮೂರು ವಾರಗಳವರೆಗೆ ಶೇ 60ರಷ್ಟು ಮಳೆ ಕೊರತೆಯಾದರೆ ಮಾತ್ರ ಬರ ಘೋಷಿಸಬಹುದು. ಇದನ್ನು ಬದಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಶೇ 30ರಷ್ಟು ಮಳೆ ಕೊರತೆಯಾದರೂ ಬರ ಘೋಷಿಸಲು ಅವಕಾಶ ನೀಡುವಂತೆ ಮಾರ್ಗಸೂಚಿಗಳನ್ನು ಬದಲಿಸುವಂತೆ ಒತ್ತಾಯಿಸಿದ್ದಾರೆ’ ಎಂದು ವಿವರಿಸಿದರು.

‘ಬರ ಘೋಷಿಸಿದ ನಂತರವೇ ಮೋಡ ಬಿತ್ತನೆ ತೀರ್ಮಾನ ಕೈಗೊಳ್ಳಲಾಗುವುದು. ಸೆಪ್ಟೆಂಬರ್ 19ರಂದು ದೆಹಲಿಯಲ್ಲಿ ನಡೆಯುವ ಜಿ–20 ಸಭೆಯಲ್ಲಿ ಭಾಗವಹಿಸಲು ರಾಜ್ಯದಿಂದ ಇಬ್ಬರು ರೈತ ಮಹಿಳೆಯರಾದ ಮಂಡ್ಯದ ರಾಣಿ ಚಂದ್ರಶೇಖರ, ಕೋಲಾರದ ಮಾರ್ಗ್‌ರೇಟ್ ಅವರನ್ನು ಆಯ್ಕೆ ಮಾಡಲಾಗಿದೆ’ ಎಂದರು.

‘ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ದೊರೆಯಲಿ ಎಂಬ ಉದ್ದೇಶದಿಂದ ನಂದಿನಿ ಮಾದರಿಯಲ್ಲಿ ಅಮೃತ ಮಳಿಗೆಗಳನ್ನು ತೆರೆದು ಕೃಷಿ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್ ಮಾಡಲಾಗುವುದು. ಸದ್ಯ ಭೀಮಾ ಪಲ್ಸ್ ಹೆಸರಿನಲ್ಲಿ ತೊಗರಿ ಬೇಳೆ ಬ್ರ್ಯಾಂಡಿಂಗ್ ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ’ ಎಂದು ತಿಳಿಸಿದರು.

2023–24ನೇ ಸಾಲಿನ ಮುಂಗಾರು ಹಂಗಾಮಿ ಬೆಳೆವಿಮೆಯ ಒಟ್ಟು ಕ್ಷೇತ್ರ 14.22 ಲಕ್ಷ ಹೆಕ್ಟರ್ ಇದ್ದು, 14.94 ಲಕ್ಷ ರೈತರು ಅರ್ಜಿ ಸಲ್ಲಿಸಿದ್ದಾರೆ

ಎನ್‌. ಚಲುವರಾಯಸ್ವಾಮಿ
ಕೃಷಿ ಸಚಿವ



ಟ್ರ್ಯಾಕ್ಟರ್ ಬಳಸಿ ಬಿತ್ತನೆ ಮಾಡುತ್ತಿರುವ ರೈತರು

ಅಕ್ರಮ ಮಾರಾಟ		ಜಪ್ತಿಯಾದ ವಸ್ತುವಿನ ಮೌಲ್ಯ
ಬಿತ್ತನೆ ಬೀಜ	385 ಕ್ವಿಂಟಲ್	₹39 ಲಕ್ಷ
ರಸಗೊಬ್ಬರ	3,200 ಕ್ವಿಂಟಲ್	₹1.52 ಕೋಟಿ
ಕೀಟನಾಶಕ	6,541 ಲೀಟರ್, 22.54 ಕ್ವಿಂಟಲ್	₹2.32 ಕೋಟಿ
ಒಟ್ಟು		₹4.23 ಕೋಟಿ

ಜೂನ್ 1ರಿಂದ ಆಗಸ್ಟ್ 16ರವರೆಗೆ ವಾಡಿಕೆ ಮಳೆ	
ವಾಡಿಕೆ ಮಳೆ	601 ಮಿ.ಮೀ
ವಾಸ್ತವ ಮಳೆ	472 ಮಿ.ಮೀ
ಕೊರತೆ	ಶೇ 22 ರಷ್ಟು
ಜುಲೈ 31ರಂದು ಸುರಿದ ಮಳೆ	
ವಾಡಿಕೆ ಮಳೆ	271 ಮಿ.ಮೀ
ವಾಸ್ತವ ಮಳೆ	349 ಮಿ.ಮೀ
ವ್ಯತ್ಯಾಸ	ಶೇ 29 ರಷ್ಟು

ಕೆ.ಜಿ. ಟೊಮೆಟೊ ಬೆಲೆ ₹33ಕ್ಕೆ ಕುಸಿತ!



ಕೋಲಾರ: ಸ್ಥಳೀಯ ಎಪಿಎಂಸಿ ಮಾರುಕಟ್ಟೆಯಲ್ಲಿ ಗುರುವಾರ ನಡೆದ ಹರಾಜಿನಲ್ಲಿ 15 ಕೆ.ಜಿ ನಾಟಿ ಟೊಮೆಟೊ ಬಾಕ್ಸ್ ಕೇವಲ ₹500ಕ್ಕೆ ಮಾರಾಟವಾಗಿದೆ.

ಹರಾಜಿನಲ್ಲಿ ಗರಿಷ್ಠ ₹ 530 ಹಾಗೂ ಕನಿಷ್ಠ ₹ 150ಕ್ಕೆ ಮಾರಾಟವಾಗಿದೆ. ರೈತನಿಗೆ ಕೆ.ಜಿ ಸರಾಸರಿ ₹33 ದರ ಲಭಿಸಿದೆ. ಚಿಲ್ಲರೆ ಮಾರುಕಟ್ಟೆಯಲ್ಲೂ ಇದೆ ದರ ಇದೆ.

ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿ ನಾಟಿ ಮಾಡಿದ್ದ ಟೊಮೆಟೊ ಈಗ ಫಸಲು ಕೊಡುತ್ತಿದ್ದು, ಮಾರುಕಟ್ಟೆಗೆ ಬರುತ್ತಿರುವ ಟೊಮೆಟೊ ತೀರಾ ಹೆಚ್ಚಳವಾಗಿ, ಎಪಿಎಂಸಿಯಲ್ಲಿ ಭಾರಿ ಪ್ರಮಾಣದಲ್ಲಿ ಟೊಮೆಟೊ ಆವಕವಾಗುತ್ತಿದೆ. ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಯಲ್ಲಿ ಟೊಮೆಟೊ ದರ ಇಳಿಕೆ ಕಂಡಿದೆ.

ಟೊಮೆಟೊ ಜುಲೈ 31 ರಂದು ಗರಿಷ್ಠ ₹ 2,700ಕ್ಕೆ ಮಾರಾಟವಾಗಿ ಸಾರ್ವಕಾಲಿಕ ದಾಖಲೆ ನಿರ್ಮಿಸಿತ್ತು. 17 ದಿನಗಳ ಅಂತರದಲ್ಲಿ 15 ಕೆ.ಜಿ. ಟೊಮೆಟೊ ಬಾಕ್ಸ್ ದರ ₹ 2 ಸಾವಿರಕ್ಕೂ ಅಧಿಕ ಇಳಿಕೆ ಆದಂತಾಗಿದೆ.

ಗುರುವಾರ ಕೋಲಾರ ಎಪಿಎಂಸಿಗೆ 17,546 ಕ್ವಿಂಟಲ್ ಅಂದರೆ 1.17 ಲಕ್ಷ ಬಾಕ್ಸ್ ಟೊಮೆಟೊ ಆವಕವಾಗಿತ್ತು. 17 ದಿನಗಳ ಅಂತರದಲ್ಲಿ ಸುಮಾರು 64 ಸಾವಿರ ಬಾಕ್ಸ್ ಆವಕ ಹೆಚ್ಚಿದೆ. ಜುಲೈ 31 ರಂದು ಕೇವಲ 52,820 ಬಾಕ್ಸ್ ಆವಕವಾಗಿತ್ತು, ಹೀಗಾಗಿ, ಬೇಡಿಕೆ ತಗ್ಗಿದೆ ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.

‘ರೈತ ಕರೆ ಕೇಂದ್ರ’ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಇಲಾಖೆಯಲ್ಲಿ ರೈತರಿಗೆ ಮಾಹಿತಿ, ಸಲಹೆ, ಮಾರ್ಗದರ್ಶನ ನೀಡಲು ಏಕೀಕೃತ ರೈತ ಕರೆ ಕೇಂದ್ರವನ್ನು ಆರಂಭಿಸಲಾಗಿದೆ.

‘ರೈತರು 1800-425-3553 ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು’ ಎಂದು ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಈ ಹಿಂದೆ ಬೆಳೆ ಸಮೀಕ್ಷೆ, ಪಿ.ಎಂ. ಕಿಸಾನ್, ರೈತ ವಿದ್ಯಾನಿಧಿ, ಬೆಳೆ ವಿಮೆ, ಕೃಷಿ ಸಂಜೀವಿನಿ, ಕೆ–ಕಿಸಾನ್ ಮತ್ತು ರೈತರ ಸಹಾಯವಾಣಿ ಎಂಬ ಏಳು ದೂರವಾಣಿ ಸಂಖ್ಯೆಗಳು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ರೈತರಿಗೆ ಯಾವ ಸಹಾಯವಾಣಿಗೆ ಕರೆ ಮಾಡಬೇಕೆಂಬ ಗೊಂದಲ ಉಂಟಾಗುತ್ತಿತ್ತು. ಆ ಸಮಸ್ಯೆಗೆ ಪರಿಹಾರ ನೀಡಲು ಕೃಷಿ ಇಲಾಖೆಯ ಕೇಂದ್ರ ಕಚೇರಿಯಲ್ಲಿ ರೈತರ ಸಮಸ್ಯೆಗಳಿಗೆ ಪರಿಹಾರ ನೀಡುವ ರೈತ ಕರೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ರಾಜ್ಯದ ಎಲ್ಲ ರೈತರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಪರಿಹಾರ ಪಡೆದುಕೊಳ್ಳಬಹುದು’ ಎಂದು ತಿಳಿಸಿದರು.

‘ಮುಂದಿನ ದಿನಗಳಲ್ಲಿ ಮಷಿನ್ ಲರ್ನಿಂಗ್ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುವುದು. ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಗಳು ಜಂಟಿಯಾಗಿ ಬೆಳೆ ಸಮೀಕ್ಷೆ ನಡೆಸುತ್ತಿದ್ದು, ಇದರಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಸೇರಿಸಿಕೊಳ್ಳಬೇಕು’ ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.



ರೈತ ಕರೆ ಕೇಂದ್ರವನ್ನು ಸಚಿವ ಎನ್‌. ಚಲುವರಾಯಸ್ವಾಮಿ ಅವರು ಗುರುವಾರ ಚಾಲನೆ ನೀಡಿದರು. ಕೃಷಿ ಇಲಾಖೆ ಕಾರ್ಯದರ್ಶಿ ವಿ. ಅನ್ಬುಕುಮಾರ್, ಆಯುಕ್ತ ವೈ.ಎಸ್. ಪಾಟೀಲ ಇದ್ದಾರೆ ಪ್ರಜಾವಾಣಿ ಚಿತ್ರ

ಗ್ರಾ.ಪಂ ಗ್ರಂಥಪಾಲಕರ ವೇತನ ₹ 15,196ಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಜ್ಯದ ಗ್ರಾಮ ಪಂಚಾಯಿತಿಗಳ ಗ್ರಂಥಪಾಲಕರ ಬಹುದಿನಗಳ ಬೇಡಿಕೆಯಾಗಿದ್ದ ವೇತನ ಪರಿಷ್ಕರಣೆ ಮಾಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ಆದೇಶ ಹೊರಡಿಸಿದ್ದು, ಇನ್ನು ಮುಂದೆ ಗ್ರಂಥಪಾಲಕರಿಗೆ ₹ 15,196 ಕನಿಷ್ಠ ವೇತನ ಹಾಗೂ ತುಟ್ಟಿಭತ್ಯೆ ಸಿಗಲಿದೆ. ಈ ಹಿಂದೆ ₹ 12,000 ವೇತನ ನೀಡಲಾಗುತ್ತಿತ್ತು.

ಗ್ರಂಥಾಲಯಗಳನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವನ್ನಾಗಿ ಬದಲಿಸಲಾಗಿದೆ. ಕೆಲಸದ ಅವಧಿಯನ್ನು ಎರಡು ಗಂಟೆ ಹೆಚ್ಚಳ ಮಾಡಲಾಗಿದೆ. ಸಾರ್ವಜನಿಕ ರಜಾ ದಿನಗಳು, ಪ್ರತಿ ತಿಂಗಳ ಎರಡನೇ ಮತ್ತು ನಾಲ್ಕನೇ ಮಂಗಳವಾರ ಹಾಗೂ ವಾರದ ರಜೆ (ಸೋಮವಾರ) ಹೊರತುಪಡಿಸಿ ಮಂಗಳವಾರ, ಬುಧವಾರ, ಗುರುವಾರ ಹಾಗೂ ಶುಕ್ರವಾರಗಳಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ, ಮಧ್ಯಾಹ್ನ 3ರಿಂದ ಸಂಜೆ 7ರವರೆಗೆ; ಶನಿವಾರ ಹಾಗೂ ಭಾನುವಾರ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1ರವರೆಗೆ, ಮಧ್ಯಾಹ್ನ 2ರಿಂದ ಸಂಜೆ 6ರವರೆಗೆ ಗ್ರಂಥಾಲಯ ತೆರೆಯಲು ನಿರ್ಧರಿಸಲಾಗಿದೆ.

ವೇತನ ಪರಿಷ್ಕರಣೆ ಕುರಿತು ಹೇಳಿಕೆ ನೀಡಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಪ್ರಿಯಾಂಕ್ ಖರ್ಗೆ, ‘ಸಮೃದ್ಧ ಸಮಾಜ ನಿರ್ಮಿಸಲು, ಸ್ಥಿರ ಸಮಾಜದ ಅಗತ್ಯವಿದೆ. ಸ್ಥಿರ ಸಮಾಜ ನಿರ್ಮಾಣವಾಗಲು ಪ್ರಬುದ್ಧ ಸಮಾಜದ ಅಗತ್ಯವಿದೆ.

ನಾಡಿನ ಗ್ರಂಥಾಲಯ ಹಾಗೂ ಇವುಗಳನ್ನು ಪೂರ್ಣಬಳಕೆಗೆ ಸನ್ನದ್ಧಗೊಳಿಸುವ ಗ್ರಂಥಪಾಲಕರನ್ನು ಸಬಲೀಕರಣಗೊಳಿಸಲು ಹೊರಡಿಸಲಾಗಿರುವ ಈ ಆದೇಶ ಪ್ರಬುದ್ಧ ಸಮಾಜದ ನಿರ್ಮಾಣಕ್ಕೆ ನಮ್ಮ ಸರ್ಕಾರದ ಬದ್ಧತೆಯ ಪ್ರತೀಕವಾಗಿದೆ’ ಎಂದು ಹೇಳಿದ್ದಾರೆ.

‘ಡೆಂಗಿ ನಿಯಂತ್ರಣಕ್ಕೆ ಸಮೀಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಡೆಂಗಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಹಾಯಕರು ಹಾಗೂ ಆಶಾ ಕಾರ್ಯಕರ್ತೆಯರು ಈಡಿಸ್ ಲಾರ್ವಾ ಸಮೀಕ್ಷೆಯ ಜತೆಗೆ ಜ್ವರ ಸಮೀಕ್ಷೆಯನ್ನೂ ನಡೆಸುತ್ತಿದ್ದಾರೆ’ ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

ಈ ಅವಧಿಯಲ್ಲಿ ಡೆಂಗಿ ಪ್ರಕರಣಗಳ ಏರಿಕೆಗೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿರುವ ಅವರು, ‘ಮುಂಗಾರು ಪೂರ್ವ, ಮುಂಗಾರು ಹಾಗೂ ನಂತರದ ದಿನಗಳಲ್ಲಿ ಘನತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಸಂಗ್ರಹವಾಗಿ, ಈಡಿಸ್ ಸೊಳ್ಳೆಗಳ ಉತ್ಪತ್ತಿ ತಾಣಗಳು ಹೆಚ್ಚಳವಾಗುವ ಸಾಧ್ಯತೆ ಇರುತ್ತವೆ. ಆದ್ದರಿಂದ ಈ ಅವಧಿಯಲ್ಲಿ ಡೆಂಗಿ ಹಾಗೂ ಚಿಕೂನ್‌ಗುನ್ಯಾ ಪ್ರಕರಣಗಳ ಹೆಚ್ಚಳ ಸಾಮಾನ್ಯವಾಗಿದೆ. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಸೊಳ್ಳೆ ಉತ್ಪತ್ತಿ ತಾಣಗಳ ನಾಶ, ಆರೋಗ್ಯ ಶಿಕ್ಷಣ ಸೇರಿ ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದು ಹೇಳಿದ್ದಾರೆ.

15 ದಿನಗಳಿಗೊಮ್ಮೆ ಸಭೆ: ‘ಜಿಲ್ಲೆಗಳಲ್ಲಿ ಡೆಂಗಿ ಪರಿಸ್ಥಿತಿಯನ್ನು ಪರಿಶೀಲಿಸಿ, ಅಗತ್ಯ ಸಲಹೆ ಸೂಚನೆಗಳನ್ನು ನೀಡಲು ಪ್ರತಿ 15 ದಿನಗಳಿಗೊಮ್ಮೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗುತ್ತಿದೆ. ಅಕ್ಟೋಬರ್ ಅಂತ್ಯದವರೆಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಡೆಂಗಿ ನಿಯಂತ್ರಣ ಕ್ರಮಗಳ ಪರಿಶೀಲನೆಗೆ ಸೂಚನೆ ನೀಡಲಾಗಿದೆ’ ಎಂದು ಡಿ. ರಂದೀಪ್ ತಿಳಿಸಿದ್ದಾರೆ.

‘ಡೆಂಗಿ ಪ್ರಕರಣಗಳಿಗೆ ಆಸ್ಪತ್ರೆ ಹಾಗೂ ಕ್ಷೇತ್ರ ಮಟ್ಟದಲ್ಲಿ ಚಿಕಿತ್ಸೆ ಮತ್ತು ಔಷಧಗಳಿಗೆ ಅಗತ್ಯ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆಯನ್ನು ಸನ್ನದ್ಧವಾಗಿರಿಸಲಾಗಿದ್ದು, ತುರ್ತು ಸಂದರ್ಭದಲ್ಲಿ ಸ್ಪಂದಿಸುವಂತೆ ಸೂಚಿಸಲಾಗಿದೆ’ ಎಂದು ಹೇಳಿದ್ದಾರೆ.

71 ಸಾವಿರ ಮಂದಿಗೆ ತಪಾಸಣೆ

ರಾಜ್ಯದಲ್ಲಿ ಈ ವರ್ಷ 71 ಸಾವಿರ ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 45 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿ ಪರೀಕ್ಷೆ ಮಾಡಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡೆಂಗಿ ಜ್ವರ ದೃಢಪಟ್ಟಿದ್ದು, ಬಿಬಿಎಂಪಿ ವ್ಯಾಪ್ತಿಯಲ್ಲಿ 3,454 ಪ್ರಕರಣಗಳು ಸೇರಿ ರಾಜ್ಯದಲ್ಲಿ 6,132 ಪ್ರಕರಣಗಳು ವರದಿಯಾಗಿವೆ. 28 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 26 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 17 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 760 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ.

136 ಶಾಸಕರು, 50 ಗಂಟೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಕ್ಷೇತ್ರಗಳ ಅಭಿವೃದ್ಧಿ ಮತ್ತು ಲೋಕಸಭಾ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಡೆಸಿದ ಜಿಲ್ಲಾವಾರು ಕಾಂಗ್ರೆಸ್ ಶಾಸಕರ ಸಭೆ ಗುರುವಾರ ಅಂತ್ಯವಾಗಿದೆ.

ಐದು ದಿನ 31 ಜಿಲ್ಲೆಗಳ 136 ಶಾಸಕರ ಜೊತೆ 50 ಗಂಟೆ ಸಭೆ ನಡೆಸಿದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ, ಶಾಸಕರ ಅಹವಾಲುಗಳನ್ನು ಆಲಿಸಿ ಬೇಡಿಕೆಗಳಿಗೆ ಸ್ಪಂದಿಸುವ ಭರವಸೆ ನೀಡಿದರು.

ಚರ್ಚೆಯಲ್ಲಿ ತಮ್ಮ ಕ್ಷೇತ್ರಗಳಿಗೆ ಆಗಬೇಕಾದ ಅಗತ್ಯ ಕೆಲಸಗಳ ಬೇಡಿಕೆಯನ್ನು ಮತ್ತು ತಮ್ಮ ಅಸಮಾಧಾನಗಳನ್ನು ಶಾಸಕರು ಮುಕ್ತವಾಗಿ ಹೇಳಿಕೊಂಡರು ಎಂದು ಮುಖ್ಯಮಂತ್ರಿ ಕಚೇರಿಯ ಮೂಲಗಳು ತಿಳಿಸಿವೆ.

ಶಾಸಕರ ಮಾತಿಗೆ ಸಭೆಯಲ್ಲಿ ಪ್ರಥಮ ಪ್ರಾಶಸ್ತ್ಯ ನೀಡಲಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವರು ಎಲ್ಲ ಶಾಸಕರ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಕೇಳಿಸಿಕೊಂಡು ಸಕಾರಾತ್ಮಕವಾಗಿ ಸ್ಪಂದಿಸಿದರು. ಅಗತ್ಯವೆಂದಾಗ ಶಾಸಕರು ಮತ್ತು ಉಸ್ತುವಾರಿ ಸಚಿವರಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸೂಚನೆ, ಸಲಹೆಗಳನ್ನು ನೀಡಿದರು.

ಶಾಸಕರು ಮತ್ತು ಜಿಲ್ಲಾ ಸಚಿವರ ನಡುವೆ ಸಮನ್ವಯ, ಸರ್ಕಾರ ಮತ್ತು ಪಕ್ಷದ ಜತೆ ಸಮನ್ವಯ, ಪಕ್ಷದ ಐದು ಗ್ಯಾರಂಟಿ ಯೋಜನೆಗಳನ್ನು ಮಧ್ಯಮ ಮತ್ತು ಬಡವರ್ಗದ ಎಲ್ಲ ಜಾತಿ ಸಮುದಾಯಗಳ ಜನರ ಮನೆ ಬಾಗಿಲಿಗೆ ತಲುಪಿಸುವುದು, ಸ್ಥಳೀಯ ಸಂಸ್ಥೆಗಳು ಮತ್ತು ಲೋಕಸಭಾ ಚುನಾವಣೆಯಲ್ಲಿ ಗೆಲುವಿಗೆ ಶ್ರಮಿಸುವುದು ಸೇರಿದಂತೆ ಹಲವು ವಿಷಯಗಳ ಕುರಿತು ಸಭೆಯಲ್ಲಿ ಗಹನ ಚರ್ಚೆ ನಡೆದಿದೆ ಎಂದೂ ಮೂಲಗಳು ಹೇಳಿವೆ.

ಶಾಸಕರ ಅಭಿಪ್ರಾಯ ಮತ್ತು ಬೇಡಿಕೆಗಳನ್ನು ದಾಖಲಿಸಿಕೊಳ್ಳಲು ಮುಖ್ಯಮಂತ್ರಿ ಸಚಿವಾಲಯದ ಅಧಿಕಾರಿ ಮತ್ತು ಸಿಬ್ಬಂದಿ ತಂಡ ರಚಿಸಲಾಗಿತ್ತು. ಈ ತಂಡ ಜಿಲ್ಲಾವಾರು ಪ್ರತ್ಯೇಕ ಬೇಡಿಕೆಗಳು ಮತ್ತು ಪ್ರಗತಿಯ ಪಟ್ಟಿಗಳನ್ನು ಸಿದ್ಧಪಡಿಸಿ ಸಂಬಂಧಪಟ್ಟ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ನೀಡಲಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

ಇಗ್ನೊ ಪ್ರವೇಶಾತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವು (ಇಗ್ನೊ) 2023ನೇ ಸಾಲಿನ ವಿವಿಧ ಸ್ನಾತಕೋತ್ತರ ಪದವಿ, ಪಿಜಿ ಡಿಪ್ಲೊಮಾ, ಡಿಪ್ಲೊಮಾ ಮತ್ತು ಪ್ರಮಾಣಪತ್ರ ಮಟ್ಟದ ಕಾರ್ಯಕ್ರಮಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟ ಜಾತಿ, ಪಂಗಡ ಮತ್ತು ದೈಹಿಕ ಅಶಕ್ತ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ ಸೌಲಭ್ಯ ಪಡೆಯಲು ಅವಕಾಶವಿದೆ ಎಂದು ಇಗ್ನೊ ಬೆಂಗಳೂರು ಪ್ರಾದೇಶಿಕ ಕೇಂದ್ರದ ಹಿರಿಯ ಪ್ರಾದೇಶಿಕ ನಿರ್ದೇಶಕಿ ಎಸ್‌. ರಾಧಾ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳು ಬಿ.ಕಾಂ, ಬಿ.ಎ, ಬಿ.ಎಸ್‌ಸಿ ಗೆ ಅರ್ಜಿ ಸಲ್ಲಿಸುವಾಗ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿಯಲ್ಲಿ ಶುಲ್ಕ ವಿನಾಯಿತಿ ಪಡೆಯಬಹುದು ಎಂದು ವಿವರಿಸಿದರು.

ಡಿಜಿಟಲ್ ಮಾಧ್ಯಮ, ದೃಶ್ಯ ಮಾಧ್ಯಮ, ಅಭಿವೃದ್ಧಿ ಪತ್ರಿಕೋದ್ಯಮ, ಸೇವಾ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ, ಭೌಗೋಳಿಕ, ಭೌತವಿಜ್ಞಾನ, ಅನ್ವಯಿಕ ಅಂಕಿ ಅಂಶಗಳು, ಜಿಯೊ ಇನ್‌ಫಾರ್ಮ್ಯಾಟಿಕ್ಸ್ ಎಂ.ಎಸ್‌ಸಿ ಸಹಿತ ವಿವಿಧ ಉಪಯುಕ್ತ ಮತ್ತು ಉದ್ಯಮಸ್ನೇಹಿ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಇಗ್ನೊ ಅಧ್ಯಯನ ಕೇಂದ್ರಗಳನ್ನು ಕ್ರಿಸ್ತು ಜಯಂತಿ ಕಾಲೇಜು, ಮೌಂಟ್ ಫೋರ್ಟ್ ಕಾಲೇಜುಗಳಲ್ಲಿ ಆರಂಭಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಪ್ರವೇಶಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು https://ignouadmission.samarth.edu.in/ ಲಿಂಕ್ ಕ್ಲಿಕ್ ಮಾಡಬೇಕು. ವಿವರಗಳಿಗೆ www.ignou.ac.in/userfiles/common-prospectus-english.pdfನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾಹಿತಿಗೆ 9449337272ಗೆ ವಾಟ್ಸ್‌ಆ್ಯಪ್ ಮಾಡಬಹುದು. 080 29607272ಗೆ ಕರೆ ಮಾಡಬಹುದು. admissionrc12@ignou.ac.inಗೆ ಮೇಲ್ ಮಾಡಿ ವಿವರ ಪಡೆಯಬಹುದು ಎಂದು ಸಹಾಯಕ ಪ್ರಾದೇಶಿಕ ನಿರ್ದೇಶಕರಾದ ಎಂ. ಷಣ್ಮುಗಂ, ಹೇಮಮಾಲಿನಿ ಎಚ್‌.ಸಿ, ಕಸ್ತೂರಿ ಪೆಸೆಲ್ಲ ತಿಳಿಸಿದರು.

650 ಅಮೆರಿಕ ಕಂಪನಿಗಳಿಗೆ ಆತಿಥ್ಯ: ಸಚಿವ ಪ್ರಿಯಾಂಕ್



ಸಮಾರಂಭದಲ್ಲಿ ಯು.ಎಸ್‌. ಕಮರ್ಷಿಯಲ್ ಸರ್ವೀಸ್‌ನ ಮುಖ್ಯ ವಾಣಿಜ್ಯ ಅಧಿಕಾರಿಕೇರಿ ಅರುಣ್, ನವದೆಹಲಿಯ ಅಮೆರಿಕ ರಾಯಭಾರ ಕಚೇರಿಯ ಮಿನಿಸ್ಟರ್ ಕೌನ್ಸಲರ್ ಫಾರ್ ಕಮರ್ಷಿಯಲ್ ಅಫೇರ್ಸ್ ಜೊನಾಥನ್ ಹೀಮರ್, ಕ್ರಿಸ್ಟೋಫರ್ ಡಬ್ಲ್ಯು. ಹಾಡ್ಜಸ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಇದ್ದಾರೆ.

ಬೆಂಗಳೂರು: ‘ಬೆಂಗಳೂರು ನಗರವು 650ಕ್ಕೂ ಹೆಚ್ಚು ಅಮೆರಿಕದ ಕಂಪನಿಗಳಿಗೆ ಆತಿಥ್ಯ ನೀಡಿದೆ. ಈ ಮೂಲಕ ಅಮೆರಿಕ ಹಾಗೂ ಭಾರತ ದ್ವಿಪಕ್ಷೀಯ ಸಂಬಂಧಗಳಿಗೆ ಕೊಡುಗೆ ನೀಡುತ್ತಿದೆ’ ಎಂದು ಚೆನ್ನೈನ ಅಮೆರಿಕ ದೂತಾವಾಸದ ಕಾನ್ಸಲ್ ಜನರಲ್ ಕ್ರಿಸ್ಟೊಫರ್ ಡಬ್ಲ್ಯು. ಹಾಡ್ಜಸ್ ತಿಳಿಸಿದರು.

ಯು.ಎಸ್‌. ಕಮರ್ಷಿಯಲ್ ಸರ್ವೀಸ್ ನಗರದಲ್ಲಿ ಗುರುವಾರ ಹಮ್ಮಿಕೊಂಡ 30ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು. ‘ಭಾರತದಲ್ಲಿ ಅಮೆರಿಕದ ಪ್ರಮುಖ ವಾಣಿಜ್ಯ ಸಹಭಾಗಿಗಳಲ್ಲಿ ಬೆಂಗಳೂರು ನಗರವೂ ಒಂದಾಗಿದೆ. ಅಮೆರಿಕ-ಭಾರತದ ನಡುವಿನ ವಾಣಿಜ್ಯ ವ್ಯವಹಾರವು ಬಾಹ್ಯಾಕಾಶ, ತಂತ್ರಜ್ಞಾನ, ನವೀಕರಿಸಬಹುದಾದ ಇಂಧನ, ಆರೋಗ್ಯ, ಶಿಕ್ಷಣ ಸೇರಿ ವಿವಿಧ ವಲಯಗಳಲ್ಲಿ ಹಿಂದೆಂದಿಗಿಂತಲು ಬಲವಾಗಿದೆ’ ಎಂದು ಹೇಳಿದರು.

‘ಅಮೆರಿಕ ಮತ್ತು ಭಾರತದ ನಡುವಿನ ಆರ್ಥಿಕ ಪಾಲುದಾರಿಕೆಯು ಏರುಗತಿಯಲ್ಲಿದ್ದು, ಎರಡೂ ದೇಶಗಳಲ್ಲಿ ಸಾವಿರಾರು ಉದ್ಯೋಗಗಳಿಗೆ ನೆರವಾಗುತ್ತಿದೆ. ತಾಂತ್ರಿಕ ಆವಿಷ್ಕಾರಗಳಿಗೆ ಪ್ರೋತ್ಸಾಹ ಸಿಗುತ್ತಿದೆ’ ಎಂದು ತಿಳಿಸಿದರು.

ಕನ್ನಡ ಮಾಧ್ಯಮ: ನಾಳೆ ಪೋಷಕರ ಸಭೆ

ಬೆಂಗಳೂರು: ಕನ್ನಡ ಮಾಧ್ಯಮದಲ್ಲಿ ತಮ್ಮ ಮಕ್ಕಳನ್ನು ಓದಿಸುತ್ತಿರುವ, ಕನ್ನಡ ಮಾಧ್ಯಮದಲ್ಲಿ ಓದಿಸಬೇಕು ಎಂಬ ಉದ್ದೇಶ ಹೊಂದಿರುವ ಪಾಲಕರ ಸಭೆಯನ್ನು ‘ಮುನ್ನೋಟ ಟ್ರಸ್ಟ್’ ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದೆ.

‘ಬೆಂಗಳೂರಿನಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಕೆಯನ್ನು ಬಲಪಡಿಸಬೇಕು ಎಂಬ ಆಸೆ ಹೊಂದಿರುವವರು ಸಭೆಯಲ್ಲಿ ಪಾಲ್ಗೊಳ್ಳಬಹುದು. ಸಭೆಯು ಬಸವನಗುಡಿಯ ಬಿ.ಎಂ.ಶ್ರೀ ಕಲಾಭವನದಲ್ಲಿ ಶನಿವಾರ (ಆಗಸ್ಟ್ 19) ಸಂಜೆ 4 ಗಂಟೆಗೆ ನಡೆಯಲಿದೆ’ ಎಂದು ಟ್ರಸ್ಟ್‌ನ ಪರವಾಗಿ ಪ್ರಶಾಂತ ಸೊರಟೂರ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಕನ್ನಡ ಮಾಧ್ಯಮ ಶಾಲೆಗಳು ದಿನೇ ದಿನೇ ಕಡಿಮೆಯಾಗುತ್ತಿವೆ. ಬೆಂಗಳೂರಿನಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಬೆರಳೆಣಿಕೆಯಷ್ಟಿವೆ. ತಾಯ್ನುಡಿಯಲ್ಲಿ ಅಥವಾ ಪರಿಸರದ ನುಡಿಯಲ್ಲಿ ಮಕ್ಕಳು ಮೊದಲ ಹಂತದ ಕಲಿಕೆ ಪಡೆಯುವುದು ಬೌದ್ಧಿಕ ವಿಕಾಸಕ್ಕೆ ಗಟ್ಟಿಯಾದ ಅಡಿಪಾಯ ಹಾಕುತ್ತದೆ ಎಂಬ ತತ್ತ್ವದಲ್ಲಿ ನಂಬಿಕೆ ಇರುವ ಹಲವಾರು ಪೋಷಕರು ಬೆಂಗಳೂರಿನ ಬೇರೆ ಬೇರೆ ಶಾಲೆಗಳಲ್ಲಿ ತಮ್ಮ ಮಕ್ಕಳನ್ನು ಓದಿಸುತ್ತಿದ್ದಾರೆ’ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

‘ಕನ್ನಡ ಮಾಧ್ಯಮದ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ಕಾರ, ಶಿಕ್ಷಕರಷ್ಟೇ ಮುಖ್ಯ ಪಾಲುದಾರರಾದ ಪೋಷಕರನ್ನು ಒಂದೆಡೆ ಸೇರಿಸಿ ಅವರ ಅನುಭವ, ಅನಿಸಿಕೆಗಳನ್ನು ಆಲಿಸುವುದು, ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳ ಪಠ್ಯೇತರ ಕಲಿಕೆಯ ಅಗತ್ಯಗಳನ್ನು ಪೋಷಕರಿಂದ ತಿಳಿಯುವುದು ಮತ್ತು ಅಂತಹ ಅಗತ್ಯಗಳನ್ನು ಶಾಲೆಯ ಹೊರಗೆ ಪಾಲಕರೇ ಕೈಜೋಡಿಸಿ ಏರ್ಪಾಟು ಮಾಡಿಕೊಳ್ಳುವುದು ಹೇಗೆ ಅನ್ನುವ ಕುರಿತು ಈ ಸಭೆ ಚರ್ಚೆ ಮಾಡಲಿದೆ’ ಎಂದು ಪ್ರಶಾಂತ ಹೇಳಿದ್ದಾರೆ.

‘ಒಂದು ನಿಲ್ದಾಣ ಒಂದು ಉತ್ಪನ್ನ’ ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯ ಕುಶಲಕರ್ಮಿಗಳು, ಕೈಮಗ್ಗ ನೇಕಾರರ ಜೀವನೋಪಾಯ ಮತ್ತು ಕೌಶಲಾಭಿವೃದ್ಧಿಗೆ ಅವಕಾಶ ನೀಡಲು ‘ಒಂದು ನಿಲ್ದಾಣ ಒಂದು ಉತ್ಪನ್ನ’ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದೆ ಎಂದು ಕೌಶಲಾಭಿವೃದ್ಧಿ ಸಚಿವ ಶರಣಪ್ರಕಾಶ್ ಆರ್‌. ಪಾಟೀಲ ತಿಳಿಸಿದರು.

ಕೇಂದ್ರ ರೈಲ್ವೆ ಸಚಿವಾಲಯ ಮತ್ತು ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಸಹಯೋಗದಲ್ಲಿ ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಗುರುವಾರ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಲ್ಲಿ ‘ಒಂದು ನಿಲ್ದಾಣ ಒಂದು ಉತ್ಪನ್ನ ಮಳಿಗೆ’ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳಾ ಸ್ವ ಸಹಾಯ ಸಂಘಗಳಿಗೆ ಆರ್ಥಿಕ ನೆರವು, ಕೌಶಲಾಭಿವೃದ್ಧಿ ತರಬೇತಿ, ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಿ ನಗರ ಪ್ರದೇಶದಲ್ಲಿನ ಬಡತನದ ಪ್ರಮಾಣವನ್ನು ಕಡಿಮೆ ಮಾಡುವುದು ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಉದ್ದೇಶ ಎಂದು ವಿವರಿಸಿದರು.

ಸ್ವ-ಸಹಾಯ ಸಂಘಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಪ್ರತಿನಿಧಿಸುವ ಹಸ್ತಶಿಲ್ಪಗಳು, ಕಲಾಕೃತಿಗಳು ಮತ್ತು ಸ್ಥಳೀಯವಾಗಿ ತಯಾರಿಸಲಾದ ಉತ್ಪನ್ನಗಳ ವಿವಿಧ ಕಲೆಗಳ ಪ್ರಾಮುಖ್ಯವನ್ನು ತಿಳಿಸುತ್ತದೆ. ಮಹಿಳಾ ಸ್ವ-ಸಹಾಯ ಸಂಘಗಳು ತಯಾರಿಸಿದ ಉತ್ಪನ್ನಗಳಿಗೆ ಉತ್ತೇಜನ ನೀಡಲಾಗುವುದು ಎಂದರು.



ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಲ್ಲಿ ‘ಒಂದು ನಿಲ್ದಾಣ ಒಂದು ಉತ್ಪನ್ನ ಮಳಿಗೆ’ಗೆ ಸಚಿವ ಶರಣಪ್ರಕಾಶ್ ಆರ್. ಪಾಟೀಲ ಚಾಲನೆ ನೀಡಿದರು ಪ್ರಜಾವಾಣಿ ಚಿತ್ರ

ಶಸ್ತ್ರಚಿಕಿತ್ಸೆಯ ಗುರಿ ತಲುಪದ ಆರೋಗ್ಯ ಇಲಾಖೆ

153 ಮಕ್ಕಳಿಗಷ್ಟೇ ಕಾಕ್ಲಿಯರ್ ಇಂಪ್ಲಾಂಟ್

• ವರುಣ ಹೆಗಡೆ

ಬೆಂಗಳೂರು: ಹುಟ್ಟಿನಿಂದಲೇ ಶ್ರವಣ ದೋಷ ಸಮಸ್ಯೆ ಎದುರಿಸುತ್ತಿರುವ ಆರು ವರ್ಷದೊಳಗಿನ ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಅಳವಡಿಸುವ ಯೋಜನೆ ರಾಜ್ಯದಲ್ಲಿ ಕುಂಟುತ್ತಾ ಸಾಗುತ್ತಿದ್ದು, ಕಳೆದ ವರ್ಷ 153 ಮಕ್ಕಳಿಗೆ ಮಾತ್ರ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಈ ಯೋಜನೆ ಅಡಿ ಸರ್ಕಾರವು ಗಂಭೀರ ಶ್ರವಣದೋಷವುಳ್ಳ ಮಕ್ಕಳಲ್ಲಿ 500 ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಲು 2022–23ನೇ ಸಾಲಿನಲ್ಲಿ ₹ 32 ಕೋಟಿ ಅನುದಾನವನ್ನು ಮೀಸಲಿಟ್ಟಿತ್ತು. ಇದರಲ್ಲಿ ಆರೋಗ್ಯ ಇಲಾಖೆಯು ₹ 31.24 ಕೋಟಿ ವೆಚ್ಚ ಮಾಡಿ, ಕಾಕ್ಲಿಯರ್ ಇಂಪ್ಲಾಂಟ್ ಸಾಧನಗಳನ್ನು ಖರೀದಿಸಿದೆ. ಆದರೆ, ಅರ್ಧದಷ್ಟು ಮಕ್ಕಳಿಗೂ ಶಸ್ತ್ರಚಿಕಿತ್ಸೆ ನಡೆಸಿ, ಸಾಧನ ಅಳವಡಿಸಿಲ್ಲ. ಹೀಗಾಗಿ, ಸರ್ಕಾರವು 2023–24ನೇ ಸಾಲಿಗೆ ಯೋಜನೆ ಅಡಿ ₹ 10 ಕೋಟಿ ಮಾತ್ರ ಮೀಸಲಿಟ್ಟಿದೆ. ಈ ಹಣದಲ್ಲಿ ಮತ್ತೆ 150 ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಿ, ಸಾಧನ ಅಳವಡಿಸಲಾಗುತ್ತದೆ. ಇದರಿಂದಾಗಿ ಶಸ್ತ್ರಚಿಕಿತ್ಸೆಗೆ ಕಾಯುವವರ ಸಂಖ್ಯೆ ಹೆಚ್ಚಳವಾಗಿದೆ.

ಕಾಕ್ಲಿಯರ್ ಇಂಪ್ಲಾಂಟ್ ಎಲೆಕ್ಟ್ರಾನಿಕ್ ಸಾಧನವಾಗಿದ್ದು, ಈ ಸಾಧನವು ತೀವ್ರ ಮತ್ತು ಗಂಭೀರ ಪ್ರಮಾಣದಲ್ಲಿ ಶ್ರವಣ ದೋಷ ಹೊಂದಿರುವ ಮಕ್ಕಳಿಗೆ ಶಬ್ದಗಳನ್ನು ಕೇಳಲು ಸಹಾಯ ಮಾಡುತ್ತದೆ. ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳಲ್ಲಿ ₹ 30 ಲಕ್ಷದ ವರೆಗೂ ತಗಲುತ್ತದೆ. ಈ ಶಸ್ತ್ರಚಿಕಿತ್ಸೆಯನ್ನು ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯಡಿ 6 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿ ನಡೆಸಲಾಗುತ್ತಿದೆ.

2 ಲಕ್ಷ ಮಂದಿಗೆ ಶ್ರವಣ ದೋಷ: ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮದಡಿ ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ 2 ಲಕ್ಷ ಮಂದಿ ಶ್ರವಣದೋಷವುಳ್ಳವರನ್ನು, 35,418 ಮಂದಿ ಗಂಭೀರ ಶ್ರವಣ ದೋಷವುಳ್ಳವರನ್ನು ಗುರುತಿಸಲಾಗಿದೆ. ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯಡಿ ಹುಟ್ಟಿನಿಂದಲೇ ಶ್ರವಣದೋಷ ಸಮಸ್ಯೆ ಇರುವ 26,959 ಮಂದಿಯನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 2,959 ಮಕ್ಕಳಲ್ಲಿ ತೀವ್ರ ಶ್ರವಣದೋಷ ಸಮಸ್ಯೆ ದೃಢಪಟ್ಟಿದೆ.

‘ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯಡಿ ಕಳೆದ ವರ್ಷ ಫಲಾನುಭವಿಗಳಿಗೆ ಸಾಧನಗಳನ್ನು ಖರೀದಿಸಲಾಗಿದೆ. ಈ ವರ್ಷ ಅವರ ಜತೆಗೆ ಇನ್ನೂ 150 ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಿ, ಸಾಧನ ಅಳವಡಿಸಲಾಗುತ್ತದೆ. ಇದು ನಿರಂತರ ಕಾರ್ಯಕ್ರಮವಾಗಿದ್ದು, ಅನುದಾನ ಅಗತ್ಯವಿದ್ದಲ್ಲಿ ಕೇಳಲಾಗುತ್ತದೆ’ ಎಂದು ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದರು.

20 ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ

ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯಡಿ ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ನಾರಾಯಣ ಹೃದಯಾಲಯ, ಎಂ.ಎಸ್. ರಾಮಯ್ಯ, ವೈದೇಹಿ, ಆಸ್ಟರ್ ಆರ್.ವಿ., ಅಪೋಲೊ (ಬನ್ನೇರುಘಟ್ಟ), ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ, ತುಮಕೂರಿನ ಜಿಲ್ಲಾ ಆಸ್ಪತ್ರೆ, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ರಾಯಚೂರಿನ ವೈದ್ಯಕೀಯ ವಿಜ್ಞಾನ ಸಂಸ್ಥೆ, ದಕ್ಷಿಣ ಕನ್ನಡದ ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಕೆ.ಎಸ್. ಹೆಗ್ಡೆ ಆಸ್ಪತ್ರೆ, ಮಂಡ್ಯದ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಯ ಕೆ.ಎಲ್.ಇ.ಎಸ್. ಡಾ. ಪ್ರಭಾಕರ್ ಕೋರೆ ಆಸ್ಪತ್ರೆ, ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆ ಹಾಗೂ ಚಿಕ್ಕಬಳ್ಳಾಪುರದ ಶ್ರೀ ಸತ್ಯ ಸಾಯಿ ಸರಳ ಮೆಮೋರಿಯಲ್ ಆಸ್ಪತ್ರೆಯಲ್ಲಿ ಉಚಿತ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ.

ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಗೆ ಅನುದಾನ ಕೊರತೆಯಿಲ್ಲ. ಕಳೆದ ವರ್ಷ ಗುರುತಿಸಲಾದ ಫಲಾನುಭವಿಗಳ ಜತೆಗೆ ಈ ವರ್ಷ 150 ಮಕ್ಕಳಿಗೆ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ

ದಿನೇಶ್ ಗುಂಡೂರಾವ್
ಆರೋಗ್ಯ ಸಚಿವ

ತಮಿಳುನಾಡಿಗೆ ನೀರು: ಸರ್ವಪಕ್ಷ ಸಭೆಗೆ ಆಗ್ರಹ

ಪ್ರಜಾವಾಣಿ ವಾರ್ತೆ


ಬೆಂಗಳೂರು: ‘ಇಂಡಿಯಾ’ ಮೈತ್ರಿಕೂಟ ಬಲಪಡಿಸಲು ರಾಜ್ಯದ ಹಿತಾಸಕ್ತಿಯನ್ನೇ ಬಲಿಕೊಟ್ಟು ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ. ಮುಖ್ಯಮಂತ್ರಿ ಅವರು ತಕ್ಷಣ ಸರ್ವಪಕ್ಷ ಸಭೆ ಕರೆಯಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಈ ಕುರಿತು ಗುರುವಾರ ಟ್ವೀಟ್ ಮಾಡಿರುವ ಅವರು, ಪ್ರತಿಪಕ್ಷಗಳು, ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ರಾಜ್ಯ ಸರ್ಕಾರ ಕಾವೇರಿ ನೀರು ಹರಿಸುವ ನಿರ್ಧಾರ ತೆಗೆದುಕೊಂಡಿದೆ.

ಬಹುಮತ ಬಂದಿದೆ ಎಂದಾಕ್ಷಣ ಕಾಂಗ್ರೆಸ್ ಪಕ್ಷ ಏಕಪಕ್ಷೀಯವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಬಾರದು. ತಕ್ಷಣ ನೀರು ನಿಲುಗಡೆ ಮಾಡಬೇಕು. ಸಂಕಷ್ಟ ಸೂತ್ರದ ಪಾಲನೆಗೆ ಒತ್ತಡ ಹೇರಬೇಕು ಎಂದು ಆಗ್ರಹಿಸಿದ್ದಾರೆ.

ಮೇಕೆದಾಟು ಪಾದಯಾತ್ರೆ ಮಾಡಿ ದೊಡ್ಡ ನಾಟಕ ಮಾಡಿದ್ದ ಕಾಂಗ್ರೆಸ್ ಕನ್ನಡಿಗರಿಗೆ, ರೈತರಿಗೆ ವಿಶ್ವಾಸದ್ರೋಹ ಎಸಗಿದೆ. ಮಳೆ ಅಭಾವದಿಂದ ಜಲಾಶಯಗಳು ತುಂಬಿಲ್ಲ. ರೈತರ ಬೆಳೆಗೆ ನೀರಿಲ್ಲ, ಬೆಂಗಳೂರಿಗೆ ಕುಡಿಯುವ ನೀರಿಗೂ ಕೊರತೆ ಎದುರಾಗಿದೆ. ಕಾವೇರಿ ಕೊಳ್ಳದ ರೈತರಿಗಾಗಿ ಎಚ್‌.ಡಿ.ದೇವೇಗೌಡರು ಜೀವವನ್ನೇ ತೇದಿದ್ದಾರೆ. ಸಂಕಷ್ಟದ ಸ್ಥಿತಿಯಲ್ಲೂ ನೆರೆ ರಾಜ್ಯಕ್ಕೆ ಮಣಿದಿರಲಿಲ್ಲ. ಈಗಿನ ಸ್ಥಿತಿಯನ್ನು ಸರ್ಕಾರ ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಿಕೊಟ್ಟಿಲ್ಲ ಎಂದು ದೂರಿದ್ದಾರೆ.

ಜಲ ಸಂಪನ್ಮೂಲ ಖಾತೆ ವಹಿಸಿಕೊಂಡವರು ತಾವು ತಮಿಳುನಾಡು ಸಚಿವರೆಂದು ಭಾವಿಸಿದ್ದಾರೆ. ಕಾವೇರಿ ಕೀಲಿಕೈ ಸ್ಟಾಲಿನ್ ಅಥವಾ ಸೋನಿಯಾ ಬಳಿ ಇದೆಯೇ? ಕೋರ್ಟ್‌ಗೆ ಹೋಗಿ ಎಂದು ರೈತರಿಗೆ ಹೇಳಿರುವುದು ದರ್ಪದ ಸಂಕೇತ ಎಂದಿದ್ದಾರೆ.



ಜವಾರಿ ನಾಡಿನತ್ತ ಸವಾರಿ



ಸಂಯುಕ್ತ

ವರುಣ್ ಕಟ್ಟಿಮನಿ, ಸಂಯುಕ್ತ ಹೊರನಾಡು ಅಭಿನಯದ 'ಬಯಲುಸೀಮೆ' ಮುಂದಿನ ವಾರ ತೆರೆ ಕಾಣುತ್ತಿದೆ. ಅಪ್ಪಟ ಜವಾರಿ ಭಾಷೆಯ, ಉತ್ತರ ಕರ್ನಾಟಕದ ಸೊಗಡಿನ ಸಿನಿಮಾವಿದು. ಇದರೊಂದಿಗೇ ತೆರೆ ಕಾಣುತ್ತಿರುವ 'ಟೋಬಿ' ಚಿತ್ರದಲ್ಲಿನ ತಮ್ಮ ಪಾತ್ರದ ಬಗ್ಗೆಯೂ ನಟಿ ಸಂಯುಕ್ತ ಒಂದಷ್ಟು ಮಾಹಿತಿ ಹಂಚಿಕೊಂಡಿದ್ದಾರೆ...

ವಿನಾಯಕ ಕೆ.ಎಸ್.

• 'ಬಯಲುಸೀಮೆ'ಯಲ್ಲಿ ನಿಮ್ಮ ಪಾತ್ರವೇನು? ಯಾವುದರ ಕುರಿತ ಕಥೆ?

ಇದೊಂದು ರಾಜಕೀಯ ಚಿತ್ರಣ ಹೊಂದಿರುವ ಉತ್ತರ ಕರ್ನಾಟಕದ ಅಪ್ಪಟ ಸಿನಿಮಾ. ಇದರಲ್ಲಿ ನೇಕಾರ ಹುಡುಗಿಯ ಪಾತ್ರ ಮಾಡಿದ್ದೇನೆ. ಬಯಲುಸೀಮೆಯ ಘಟನೆಗಳನ್ನು ಹಸಿಹಸಿಯಾಗಿಯೇ ತೋರಿಸಲಾಗಿದೆ. ರವಿಶಂಕರ್, ಟಿ.ಎಸ್. ನಾಗಾಭರಣ, ಯಶ್ ಶೆಟ್ಟಿಯಂತಹ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ನನ್ನ ಪಾತ್ರ ಹೋರಾಟ ಅಥವಾ ರಾಜಕೀಯದಲ್ಲಿ ತೊಡಗಿಸಿಕೊಳ್ಳುವುದಿಲ್ಲ. ನಾಯಕ ವರುಣ್ ಜೊತೆಗಿನ ಪ್ರೇಮದ ದೃಶ್ಯಗಳಿಗೆ ಮಾತ್ರ ಸೀಮಿತವಾಗಿದೆ.

• ಮೂಲತಃ ಹೊರನಾಡಿನವರಾದ ನಿಮಗೆ ಬಯಲು ಸೀಮೆಯ ಭಾಷೆ ಸವಾಲಾಗಲಿಲ್ಲವೆ?

ಚಿತ್ರಕ್ಕಾಗಿ ಜವಾರಿ ಭಾಷೆ ಕಲಿತೆ. ಸವಾಲಿನ ಪಾತ್ರಗಳನ್ನು ಆಯ್ಕೆ ಮಾಡಿಕೊಂಡು, ಪಾತ್ರಕ್ಕೆ ನ್ಯಾಯ ಒದಗಿಸುತ್ತ ಹೋಗುವುದೇ ನಟನೆಯಲ್ಲಿನ ಬೆಳವಣಿಗೆ. ಉತ್ತರ ಕರ್ನಾಟಕದ ಜೋಳದ ರೊಟ್ಟಿ, ಚಟ್ನಿಪುಡಿಯಿಂದ ಹಿಡಿದು ಸಿನಿಮಾ ಸೆಟ್ ಒಂದು ರೀತಿ ಬಯಲುನಾಡಿನ ಮನೆಯಾಗಿತ್ತು. ನಿರ್ದೇಶಕ ವರುಣ್ ಬಹಳ ವರ್ಷ ಸ್ಕ್ರಿಪ್ಟ್ ಮೇಲೆ ಕೆಲಸ ಮಾಡಿ, ಶ್ರಮಪಟ್ಟು ಸಿನಿಮಾ ಮಾಡಿದ್ದಾರೆ.

• 'ಟೋಬಿ' ಚಿತ್ರದಲ್ಲಿ ನಿಮ್ಮ ಪಾತ್ರವೇನು?

ಇದೊಂದು ಸೇಡು ತೀರಿಸಿಕೊಳ್ಳುವ ಕಥೆ. ಸಾವಿತ್ರಿ ಎಂಬ ಪಾತ್ರ ಮಾಡಿರುವೆ. ಅದರ ಬಗ್ಗೆ ಹೆಚ್ಚು ಮಾಹಿತಿ ನೀಡಲಾರೆ. ರಾಜ್ ಶೆಟ್ಟಿಯಂತಹ ಸಿನಿಮಾ ಪ್ರೀತಿ ಇರುವವರ ಜೊತೆ ಕೆಲಸ ಮಾಡುವುದು ಖುಷಿಯ ಸಂಗತಿ. ಈ ಚಿತ್ರೀಕರಣವೇ ಒಂದು ಅದ್ಭುತವಾದ ಅನುಭವ. ರಾಜ್ ಒಂದು ದಿನ ಕರೆ ಮಾಡಿ, 'ನೀನು ಹೇಗೆ ಇದ್ದೀಯೋ ಹಾಗೆಯೇ ಇರುವ ಪಾತ್ರವಿದೆ. ಮಾಡುತ್ತೀಯಾ?' ಎಂದರು. ಸ್ಕ್ರಿಪ್ಟ್ ಕಳುಹಿಸಿದರು. ತುಂಬ ಚೆನ್ನಾಗಿತ್ತು. ಚೂರುಪಾರು ಮೇಕಪ್ ಮಾಡಿಕೊಂಡಿದ್ದನ್ನು ಕೂಡ ತೆಗಿಸಿ ಶೂಟ್ ಮಾಡಿದರು. ಇಷ್ಟು ವರ್ಷದ ಸಿನಿಮಾ ಪಯಣದಲ್ಲಿ ಇದೊಂದು ಭಿನ್ನ ಅನುಭವ. ಮೇಕಪ್ ಇಲ್ಲದೆ ಚಿತ್ರೀಕರಣ ಮಾಡಿದ್ದು ಇದೇ ಮೊದಲು.

• ನಿಮ್ಮ ಮುಂದಿನ ಯೋಜನೆಗಳ ಕುರಿತು ಹೇಳಿ

ಕನ್ನಡ, ತಮಿಳು, ತೆಲುಗು ಸೇರಿ ಒಟ್ಟು ಈ ವರ್ಷ 7 ಸಿನಿಮಾಗಳು, 2 ವೆಬ್ ಸೀರೀಸ್ ಇವೆ. ಕೆಲವು ಈಗಾಗಲೇ ಬಿಡುಗಡೆಗೊಂಡಿವೆ. ಇನ್ನು ಕೆಲವು ಬಿಡುಗಡೆಯಾಗಬೇಕಿವೆ. ಇದರ ಹೊರತಾಗಿ ಹೊಸ ಚಿತ್ರಗಳ ಚಿತ್ರೀಕರಣ ನಡೆಯುತ್ತಿವೆ. ಅವುಗಳ ಬಗ್ಗೆ ಈಗಲೇ ಹೇಳುವುದು ಕಷ್ಟ.

• ಇಲ್ಲಿವರೆಗಿನ ನಿಮ್ಮ ಸಿನಿಮಾ ಪಯಣ ಹೇಗಿದೆ?

ಚಿತ್ರರಂಗಕ್ಕೆ ಬಂದು 10 ವರ್ಷಗಳ ಮೇಲಾಗಿದೆ. ಪ್ರತಿ ವರ್ಷ ನಾನು ನಟಿಸಿರುವ ಕನಿಷ್ಠ ಎರಡು ಸಿನಿಮಾಗಳು ಬಿಡುಗಡೆಯಾಗಿವೆ. ನಾಯಕಿ ಆಗಬೇಕು ಎಂದು ನಾನು ಕನಸು ಕಂಡವಳಲ್ಲ. ದೊಡ್ಡ ನಾಯಕರ ಜೊತೆ ನಟಿಸಬೇಕು ಎಂಬ ಇರಾದೆಯೂ ಇಲ್ಲ. ಯಾವ ಪಾತ್ರ ಬಂದರೂ ಸವಾಲಾಗಿ ಸ್ವೀಕರಿಸುತ್ತೇನೆ. ಇಲ್ಲಿ ಸುದೀರ್ಘ ಕಾಲ ಉಳಿಯಲು ಅದೃಷ್ಟ, ಪ್ರತಿಭೆ ಮುಖ್ಯ ಎನ್ನುತ್ತಾರೆ. ಆದರೆ ನನ್ನ ಪ್ರಕಾರ ನಮ್ಮ ವರ್ತನೆ, ಸಿನಿಮಾ ಮೇಲಿನ ಪ್ರೀತಿ, ತಾಳ್ಮೆ ಬಹಳ ಮುಖ್ಯ. ಒಂದು ಸಿನಿಮಾದಿಂದ ನಮ್ಮ ಬದುಕು ಬದಲಾಗಿ ಬಿಡುತ್ತದೆ ಎಂಬುದು ಸುಳ್ಳು. ಸಿನಿಮಾ ಸೋಲಲಿ, ಗೆಲ್ಲಲಿ ಮರುದಿನ ಯಥಾಪ್ರಕಾರದ ಬದುಕು ಮುಂದುವರಿಯುತ್ತದೆ. ಹೀಗಾಗಿ ನಿರಂತರತೆ ಇಲ್ಲಿ ಬಲು ಮುಖ್ಯ.


• ನಿಮ್ಮ ಪ್ರಾಣಿ, ಪಕ್ಷಿಗಳ ಜಗತ್ತು ಹೇಗಿದೆ?

ಸಮಾಜಕ್ಕೆ, ನಮ್ಮ ಸುತ್ತಮುತ್ತಲಿನವರಿಗೆ ನಾವೇನು ಪ್ರೀತಿ ಕೊಡುತ್ತೇವೆ ಎಂಬುದು ಬಹಳ ಮುಖ್ಯ. ಪ್ರತಿ ಸೆಟ್‌ನಲ್ಲಿಯೂ ನಾನು ನಟನೆಯ ಹೊರತಾಗಿ ಛಾಯಾಗ್ರಹಣ, ಸೆಟ್ ಎಲ್ಲ ಕಡೆ ಆಸಕ್ತಿಯಿಂದ ಭಾಗಿಯಾಗುತ್ತೇನೆ. ಅಲ್ಲಿನ ಜನರೊಂದಿಗೆ ಬೆರೆಯುತ್ತೇನೆ. ಬಹುಶಃ ಅಮ್ಮ, ಅಜ್ಜಿಯಿಂದ ನನಗೆ ಈ ಸಂಸ್ಕಾರ, ತಾಳ್ಮೆ ಬಂದಿದ್ದು. ನನ್ನ ಸಾಮಾಜಿಕ ಮಾಧ್ಯಮದ ಪುಟಗಳನ್ನು ನೋಡಿದರೆ ನಿಮಗೆ ಅಲ್ಲಿ ಬರಿ ಪ್ರಾಣಿ, ಪಕ್ಷಿ, ಪ್ರಕೃತಿಯೇ ಸಿಗುತ್ತದೆ ಹೊರತು ರೀಲ್ಸ್ ಇಲ್ಲ, ನನ್ನ ಡ್ಯಾನ್ಸ್ ವಿಡಿಯೊ ಅಂತೂ ಇಲ್ಲವೇ ಇಲ್ಲ. ❖

ಪ್ರಜಾವಾಣಿ ನೋಡಿಯೊ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

'ಸಂಜು ವೆಡ್ಸ್ ಗೀತಾ -2' ಪ್ರಾರಂಭ



ಶ್ರೀನಗರ ಕಿಟ್ಟಿ ರಚಿತಾ ರಾಮ್

ಶ್ರೀನಗರ ಕಿಟ್ಟಿ ಹಾಗೂ ರಚಿತಾ ರಾಮ್ ಮುಖ್ಯ ಭೂಮಿಕೆಯಲ್ಲಿರುವ 'ಸಂಜು ವೆಡ್ಸ್ ಗೀತಾ-2' ಚಿತ್ರಕ್ಕೆ ಇತ್ತೀಚೆಗಷ್ಟೇ ಚಾಲನೆ ದೊರೆಯಿತು. ಅಶ್ವಿನಿ ಪುನೀತ್ ರಾಜ್‌ಕುಮಾರ್ ಮೊದಲ ದೃಶ್ಯಕ್ಕೆ ಚಾಲನೆ ನೀಡಿದರೆ, ಎಸ್.ಮಹೇಂದರ್ ಚಿತ್ರದ ಟೀಸರ್ ಬಿಡುಗಡೆ ಮಾಡಿದರು.


'ಸಂಜು ವೆಡ್ಸ್ ಗೀತಾ' ಚಿತ್ರ 2011ರಲ್ಲಿ ತೆರೆ ಕಂಡಿತ್ತು. ಇದನ್ನು ನಿರ್ದೇಶಿಸಿದ್ದ ನಾಗಶೇಖರ್ ಅವರೇ ಈ ಸಿನಿಮಾವನ್ನು ನಿರ್ದೇಶನ ಮಾಡುವ ಜೊತೆಗೆ ನಿರ್ಮಾಣವನ್ನೂ ಮಾಡುತ್ತಿದ್ದಾರೆ.

'ನಾನು ಧಾರಾವಾಹಿಗಳಲ್ಲಿ ನಟಿಸುತ್ತಿದ್ದಾಗ ಕರೆದು ತಮ್ಮ ನಿರ್ದೇಶನದ 'ನಿನಗಾಗಿ' ಚಿತ್ರದಲ್ಲಿ ಅವಕಾಶ ನೀಡಿದವರು ಎಸ್.ಮಹೇಂದರ್. ಅವರು ನಮ್ಮ ಈ ಚಿತ್ರದ ಟೀಸರ್ ಬಿಡುಗಡೆ ಮಾಡಿದ್ದಾರೆ. ಈ ಸಿನಿಮಾವನ್ನು 5 ವರ್ಷಗಳ ಹಿಂದೆಯೇ ಪ್ರಾರಂಭಿಸಬೇಕಾಗಿತ್ತು. ಆದರೆ ನಾನು ತೆಲುಗು, ತಮಿಳು ಕಡೆ ಹೋಗಿದ್ದರಿಂದ ಆಗಲಿಲ್ಲ. ಹಿಂದಿನ ಚಿತ್ರದಲ್ಲಿದ್ದ ಬಹುತೇಕರು ಇದರಲ್ಲೂ ಇರುತ್ತಾರೆ. ನಾನು ಚಿತ್ರದಲ್ಲಿ ಕಥೆಯ ಜೊತೆ ಹಾಡುಗಳಿಗೂ ಜಾಸ್ತಿ ಪ್ರಾಮುಖ್ಯ ಕೊಡುತ್ತೇನೆ. ಶ್ರೀಧರ್ ಸಂಭ್ರಮ್ ಸೊಗಾಸದ 5 ಹಾಡುಗಳನ್ನು ನೀಡಿದ್ದಾರೆ' ಎಂದು ಮಾಹಿತಿ ಬಿಚ್ಚಿಟ್ಟರು ನಿರ್ದೇಶಕ ನಾಗಶೇಖರ್.

ನಾಯಕ ಕಿಟ್ಟಿ ಮಾತನಾಡಿ, 'ನಾಗಶೇಖರ್ ಚಿತ್ರದ ಕಥೆಗೆ ಹೆಚ್ಚು ಒತ್ತು ನೀಡುತ್ತಾರೆ. ನನ್ನ ಉತ್ತಮ ಸಿನಿಮಾಗಳಲ್ಲಿ 'ಸಂಜು ವೆಡ್ಸ್ ಗೀತಾ' ಕೂಡ ಒಂದು. ಅದ್ಭುತವಾದ ಪ್ರೇಮಕಥೆಯೊಂದಿಗೆ ಮತ್ತೆ ಬರುತ್ತೇವೆ. ಮೊದಲ ಚಿತ್ರಕ್ಕಿಂತ ಈ ಚಿತ್ರದ ಪಾತ್ರ ಚೆನ್ನಾಗಿದೆ. ರಚಿತಾ ರಾಮ್ ಅವರ ಜೊತೆ ಮೊದಲ ಬಾರಿಗೆ ತೆರೆ ಹಂಚಿಕೊಳ್ಳುತ್ತಿದ್ದೇನೆ' ಎಂದರು.

ಶ್ರೀಧರ್ ವಿ. ಸಂಭ್ರಮ್ ಸಂಗೀತ ನಿರ್ದೇಶನ, ಸತ್ಯ ಹೆಗಡೆ ಛಾಯಾಗ್ರಾಹಣ ಚಿತ್ರಕ್ಕಿದೆ. ❖

ನಿವೃತ್ತ ಸೈನಿಕನಾಗಿ ರಾಘವೇಂದ್ರ ರಾಜ್‌ಕುಮಾರ್



ರಾಘವೇಂದ್ರ ರಾಜ್‌ಕುಮಾರ್

ರಾಘವೇಂದ್ರ ರಾಜ್‌ಕುಮಾರ್, ಶ್ರುತಿ ಜೋಡಿಯಾಗಿ ನಟಿಸಿರುವ '13' ಚಿತ್ರ ತೆರೆಗೆ ಬರಲಿದೆ ಸಿದ್ಧವಾಗಿದೆ. ರಾಘವೇಂದ್ರ ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ಪ್ರಯುಕ್ತ ಇತ್ತೀಚೆಗಷ್ಟೇ ಚಿತ್ರತಂಡ ಹೊಸ ಪೋಸ್ಟರ್ ಬಿಡುಗಡೆಗೊಳಿಸಿದೆ. ಪಲ್ಲಕ್ಕಿ ಖ್ಯಾತಿಯ ಕೆ.ನರೇಂದ್ರಬಾಬು ಅವರ ನಿರ್ದೇಶನದ ಚಿತ್ರವನ್ನು ಯುವಿ ಪ್ರೊಡಕ್ಷನ್ ನಿರ್ಮಾಣ ಮಾಡಿದೆ.

'ರಾಘವೇಂದ್ರ ರಾಜ್‌ಕುಮಾರ್ ನಿವೃತ್ತ ಸೈನಿಕನಾಗಿ ಕಾಣಿಸಿಕೊಂಡಿದ್ದಾರೆ. ನಿವೃತ್ತಿ ಬಳಿಕ ಇವರು ಗುಜರಿ ಅಂಗಡಿ ಮಾಲೀಕ ಮೋಹನ್ ಕುಮಾರ್ ಆಗಿರುತ್ತಾರೆ. ಟೀ ಅಂಗಡಿ ನಡೆಸುವ ಸಾಯಿರಾಬಾನು ಎಂಬ ಮುಸ್ಲಿಂ ಮಹಿಳೆಯ ಪಾತ್ರದಲ್ಲಿ ಶ್ರುತಿ ಅವರು ನಟಿಸಿದ್ದಾರೆ' ಎನ್ನುತ್ತಾರೆ ನಿರ್ದೇಶಕ ಕೆ.ನರೇಂದ್ರಬಾಬು.

'ಗಂಡ- ಹೆಂಡತಿ ಅಂದರೆ ಹೀಗಿರಬೇಕು ಎನ್ನುವಂತಿದ್ದ ದಂಪತಿ ತಮ್ಮದಲ್ಲದ ತಪ್ಪಿಗೆ ಇಡೀ ಜೀವನ ಯಾವ ರೀತಿ ಕಷ್ಟಪಡುತ್ತಾರೆ ಎಂಬುದನ್ನು ಥ್ರಿಲ್ಲರ್ ಕಥೆಯ ಮೂಲಕ ಹೇಳುವ ಚಿತ್ರ ಇದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಒಂದು ನೈಜ ಘಟನೆ ಈ ಕಥೆಗೆ ಸ್ಫೂರ್ತಿ. ಪ್ರಮೋದ್ ಶೆಟ್ಟಿ ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರ ನಿರ್ವಹಿಸಿದ್ದಾರೆ' ಎಂದು ನಿರ್ದೇಶಕರು ತಿಳಿಸಿದರು.

ಮಂಜುನಾಥ್ ನಾಯ್ಡು ಅವರ ಛಾಯಾಗ್ರಹಣ ಹಾಗೂ ಸೋಹನ್ ಬಾಬು ಅವರ ಸಂಗೀತ ಈ ಚಿತ್ರಕ್ಕಿದೆ. ❖

ಲೋಕಾಯುಕ್ತ ದಾಳಿ: ಅಪಾರ ಆಸ್ತಿ ಜಪ್ತಿ

‘ಟುಡಾ’ ಅಧಿಕಾರಿ ಕೋಟಿ ಒಡೆಯ

ಪ್ರಜಾವಾಣಿ ವಾರ್ತೆ

ತುಮಕೂರು: ಜಿಲ್ಲೆಯ ಮೂಲೆ, ಮೂಲೆಯಲ್ಲಿ ಕೋಟಿ, ಕೋಟಿ ಬೆಲೆಬಾಳುವ ಆಸ್ತಿ. ಜೊತೆಗೆ ನೆರೆಯ ಆಂಧ್ರಪ್ರದೇಶದಲ್ಲೂ ಕೃಷಿ ಜಮೀನು ಇದೆ.

ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಗುರುವಾರ ನಗರಾಭಿವೃದ್ಧಿ ಪ್ರಾಧಿಕಾರದ ಜಂಟಿ ನಿರ್ದೇಶಕ ಹಾಗೂ ನಗರ ಯೋಜನಾ ಸದಸ್ಯ ಕೆ.ಎನ್.ನಾಗರಾಜ್ ಅವರ ನಗರದ ಸಪ್ತಗಿರಿ ಬಡಾವಣೆಯ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಿದಾಗ ಅಪಾರ ಪ್ರಮಾಣ ಆಸ್ತಿ ಕಂಡುಬಂದಿದೆ.


ತುಮಕೂರಿನ ಸಪ್ತಗಿರಿ ಬಡಾವಣೆಯಲ್ಲಿ ಇರುವ ಕೆ.ಎನ್.ನಾಗರಾಜ್ ಮನೆ


ಕೆ.ಎನ್.ನಾಗರಾಜ್

ನಗರದಲ್ಲಿ ಕೋಟಿ ಬೆಲೆ ಬಾಳುವ ಮನೆ, ₹83 ಲಕ್ಷ ಬೆಲೆ ಬಾಳುವ ಆರು ನಿವೇಶನ, ₹20 ಲಕ್ಷದ ವಾಣಿಜ್ಯ ಮಳಿಗೆ, ಕೃಷಿ ಜಮೀನು, ₹25 ಲಕ್ಷ ಮೌಲ್ಯದ 800 ಗ್ರಾಂ ಚಿನ್ನದ ಒಡವೆ, 1.50 ಕೆ.ಜಿ ಬೆಳ್ಳಿ ಸಾಮಗ್ರಿಗಳು. ದಾಳಿ ವೇಳೆ ಒಟ್ಟು ₹3.46 ಕೋಟಿ ಮೊತ್ತದ ಆಸ್ತಿ ಪತ್ತೆಯಾಗಿದೆ.

ಇವುಗಳಷ್ಟೇ ಅಲ್ಲ, ನೆರೆಯ ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕು ಬಸವಪಲ್ಲಿ ಗ್ರಾಮದಲ್ಲಿ ಒಂದು ಲಕ್ಷ ಮೌಲ್ಯದ ಒಂದು ಎಕರೆ ಜಮೀನು ಹೊಂದಿದ್ದಾರೆ.

ತುಮಕೂರು ತಾಲ್ಲೂಕು ಮೂಡಲಕೋಡಿ ಗ್ರಾಮದಲ್ಲಿ ₹48.80 ಲಕ್ಷ ಮೌಲ್ಯದ 5.35 ಎಕರೆ ಕೃಷಿ ಜಮೀನು, ಪಾವಗಡ ತಾಲ್ಲೂಕು ಜಂಗಮರಹಳ್ಳಿಯಲ್ಲಿ ₹35 ಲಕ್ಷದ ಮನೆ, ಪಾವಗಡ ತಾಲ್ಲೂಕು ಜಂಗಮರಹಳ್ಳಿಯಲ್ಲಿ ₹15.55 ಲಕ್ಷ ಬೆಲೆ ಬಾಳುವ ಕೃಷಿ ಜಮೀನು, ₹15 ಲಕ್ಷದ ಹುಂಡೈ ಕಾರು, ₹1.85 ಲಕ್ಷದ ಮೂರು ದ್ವಿಚಕ್ರ ವಾಹನ ಇವಿಷ್ಟು ನಾಗರಾಜ್ ಕ್ರೋಡೀಕರಿಸಿದ ಸಂಪತ್ತು.

ಗ್ರಾನೈಟ್ ವಹಿವಾಟು!


ನಟರಾಜ್

ರಾಮನಗರ: ವೃತ್ತಿಯಲ್ಲಿ ಬಿಬಿಎಂಪಿ ಮಹದೇವಪುರ ವಲಯದ ಕಂದಾಯ ನಿರೀಕ್ಷಕನಾಗಿರುವ ನಟರಾಜ್ ಬೇನಾಮಿ ಗ್ರಾನೈಟ್ ವಹಿವಾಟು ಕೂಡ ಹೊಂದಿದ್ದಾರೆ ಎನ್ನುವ ಮಾಹಿತಿ ಲೋಕಾಯುಕ್ತರಿಗೆ ಸಿಕ್ಕಿದೆ.

ಲಂಚ ಪ್ರಕರಣದಲ್ಲಿ ಜೈಲು ಸೇರಿರುವ ನಟರಾಜ್ ಸ್ವಂತ ಊರು ಕನಕಪುರ ತಾಲ್ಲೂಕಿನ ಶಿವನಹಳ್ಳಿಯಲ್ಲಿ ತೆಂಗು ಮತ್ತು ಅಡಿಕೆ ಮರಗಳ ಏಳೆಂಟು ಎಕರೆ ತೋಟ ಹೊಂದಿದ್ದು, ಭವ್ಯ ಬಂಗಲೆ ಕಟ್ಟಿಸಿಕೊಂಡಿದ್ದಾರೆ. ತೋಟದ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಂದ ಅಧಿಕಾರಿಗಳು ಮಾಹಿತಿ ಕಲೆ ಹಾಕಿದರು.

ಅಪಾರ್ಟ್‌ಮೆಂಟ್ ಒಂದರಲ್ಲಿನ ಫ್ಲ್ಯಾಟ್‌ಗಳಿಗೆ ಖಾತೆ ಸಂಖ್ಯೆ ನೀಡಲು ಆ. 4ರಂದು ₹5 ಲಕ್ಷ ಲಂಚ ಪಡೆಯುತ್ತಿದ್ದ ನಟರಾಜ್ ಮತ್ತು ಖಾಸಗಿ ವ್ಯಕ್ತಿಯೊಬ್ಬನನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಬಂಗಲೆಯಲ್ಲಿದೆ ಈಜುಕೊಳ : ಶವನಹಳ್ಳಿಯಲ್ಲಿರುವ ನಟರಾಜ್ ಅವರ ಬಂಗಲೆಯಲ್ಲಿ ಈಜುಕೋಳ ಸಹ ಇದೆ. ಆಗಾಗ ಇಲ್ಲಿಗೆ ಕುಟುಂಬ ಮತ್ತು ಸ್ನೇಹಿತರೊಂದಿಗೆ ಬಂದು ಕಾಲ ಕಳೆದು ಹೋಗುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನ ಆವಲಹಳ್ಳಿಯಲ್ಲಿ ನಾಲ್ಕು ಅಂತಸ್ತಿನ ಮನೆ ಹೊಂದಿರುವ ನಟರಾಜ್, ದುಬಾರಿ ಔಡಿ ಕಾರಿನ ಜೊತೆ ಹಲವಾರು ಐಷಾರಾಮಿ ಕಾರುಗಳನ್ನೂ ಹೊಂದಿದ್ದಾರೆ.

ತಹಶೀಲ್ದಾರ್ ಬೇನಾಮಿ ಆಸ್ತಿ?


ಶಿವರಾಜ್

ದೇವನಹಳ್ಳಿ: ದೇವನಹಳ್ಳಿ ತಹಶೀಲ್ದಾರ್ ಶಿವರಾಜ್ ಅವರು ಗ್ರಾಮ ಪಂಚಾಯಿತಿ ಸದಸ್ಯರೊಬ್ಬರ ಹೆಸರಿನಲ್ಲಿ ಬೇನಾಮಿ ಆಸ್ತಿ ಹೊಂದಿರುವ ಬಗ್ಗೆ ದಾಳಿಯಲ್ಲಿ ದೊರೆತ ಕೆಲವು ದಾಖಲೆ ಪತ್ರಗಳನ್ನು ನೋಡಿದ ನಂತರ ಲೋಕಾಯುಕ್ತ ಪೊಲೀಸರಿಗೆ ಅನುಮಾನ ಶುರುವಾಗಿದೆ.

ಈ ಹಿನ್ನೆಲೆಯಲ್ಲಿ ತಹಶೀಲ್ದಾರ್ ಆಪ್ತರೆಂದು ಹೇಳಲಾದ ಹರೀಶ್ ಮತ್ತು ದಯಾನಂದ್ ಎಂಬುವರನ್ನು ಲೋಕಾಯುಕ್ತ ಪೊಲೀಸರು ವಿಚಾರಣೆ ನಡೆಸಿದ್ದಾರೆ. ಇನ್ನೂ ಹಲವು ಆಪ್ತರು ಮತ್ತು ವ್ಯಕ್ತಿಗಳ ಮೇಲೆ ಅನುಮಾನ ಇದ್ದು, ಅವರನ್ನೂ ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಇತ್ತೀಚೆಗಷ್ಟೇ ದೇವನಹಳ್ಳಿ ತಹಶೀಲ್ದಾರ್ ಹುದ್ದೆಯಿಂದ ವರ್ಗಾವಣೆಗೊಂಡಿದ್ದ ಶಿವರಾಜ್, ಸರ್ಕಾರದ ಆದೇಶ ಪ್ರಶ್ನಿಸಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಕರಣ ದಾಖಲಿಸಿ ತಡೆಯಾಜ್ಞೆ ತಂದಿದ್ದರು. ಇನ್ನೂ ಕೆಲವೇ ತಿಂಗಳು ಅವರು ಸೇವೆ ಬಾಕಿ ಇದ್ದು, ನಿವೃತ್ತಿಯ ಹೊಸ್ತಿನಲ್ಲಿದ್ದಾರೆ.

ದಾಳಿಗೊಳಗಾದ ಅಧಿಕಾರಿಗಳ ಆಸ್ತಿಗಳ ವಿವರ

ಎಸ್. ನಟರಾಜ್ (ಆರ್‌ಐ, ಮಹದೇವಪುರ ವಲಯ, ಬಿಬಿಎಂಪಿ)	
ಪತ್ತೆಯಾಗಿರುವ ಆಸ್ತಿ	₹ 4.91 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	391%
ಕೆ.ಎನ್. ನಾಗರಾಜು (ಜಂಟಿ ನಿರ್ದೇಶಕ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ)	
ಪತ್ತೆಯಾಗಿರುವ ಆಸ್ತಿ	₹ 3.41 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	138.19%
ಕೆ.ಕೆ. ರಘುಪತಿ (ಸೂಪರಿಂಟೆಂಡಿಂಗ್ ಎಂಜನಿಯರ್, ಹಾರಂಗಿ ಯೋಜನೆ)	
ಪತ್ತೆಯಾಗಿರುವ ಆಸ್ತಿ	₹ 3.66 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	205%
ಎಸ್. ಸತೀಶ್ (ವಲಯ ಅರಣ್ಯಾಧಿಕಾರಿ, ಚನ್ನಗಿರಿ)	
ಪತ್ತೆಯಾಗಿರುವ ಆಸ್ತಿ	₹ 1.62 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	146%
ಮಂಜುನಾಥ (ವ್ಯವಸ್ಥಾಪಕ, ನಿರ್ಮಿತಿ ಕೇಂದ್ರ, ಕೊಪ್ಪಳ)	
ಪತ್ತೆಯಾಗಿರುವ ಆಸ್ತಿ	₹ 2.79 ಕೋಟಿ
ಅಕ್ರಮ ಆಸ್ತಿಯ ಪ್ರಮಾಣ	136%
ಮುಂದುವರಿದ ಶೋಧ	
ಭುವನಹಳ್ಳಿ ನಾಗರಾಜ್ (ಕುಂದುಕೊರತೆ ನಿವಾರಣಾ ಘಟಕದ ಮುಖ್ಯಸ್ಥ, ತುಮಕೂರು ಜಿ.ಪಂ.)	
ಸಂತೋಷ್ ಶರಣಪ್ಪ ಅನಿಸೆಟ್ಟಿ (ಆರ್‌ಐ, ಬೆಳಗಾವಿ ಮಹಾನಗರ ಪಾಲಿಕೆ)	
ಶಿವಾನಂದ ಮಾನಕರ್ (ಕಾನ್‌ಸ್ಟೆಬಲ್, ಧಾರವಾಡ ಟೌನ್ ಪೊಲೀಸ್ ಠಾಣೆ)	

ವಿದೇಶಿ ಬೂಟು, ಬೆಲ್ಟ್ ಪತ್ತೆ

ಬೆಳಗಾವಿ/ಧಾರವಾಡ/ಹಾವೇರಿ: ಬೆಳಗಾವಿ ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ ಸಂತೋಷ ಆನಿಶೆಟ್ಟರ ಅವರ ಕಚೇರಿ, ವಾಸ ಇದ್ದ ಬಾಡಿಗೆ ಮನೆಗೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರಿಗೆ ವಿದೇಶಿ ಬ್ರ್ಯಾಂಡ್‌ನ ಬೂಟು, ಬೆಲ್ಟ್, ಮದ್ಯದ ಬಾಟ್ಲಿ, ಬೆಲೆಬಾಳುವ ವಸ್ತುಗಳು ಮತ್ತು ಪಾಲಿಕೆಯ ಕೆಲ ದಾಖಲೆಪತ್ರಗಳು ಸಿಕ್ಕಿವೆ.

ಸಂತೋಷ ಆನಿಶೆಟ್ಟರ ಅವರನ್ನು ಲೋಕಾಯುಕ್ತ ಪೊಲೀಸರು ಬೆಳಗಾವಿಯ ಮಹಾನಗರ ಪಾಲಿಕೆಯ ಕಚೇರಿಗೂ ಕರೆತಂದು ಪರಿಶೀಲಿಸಿದರು. ಧಾರವಾಡದ ಸಪ್ತಾಪುರದ ಶರಣ ಸುವರ್ಣ ನಿವಾಸ, ವೆಂಕಟಾಪುರ ಕ್ರಾಸ್‌ನಲ್ಲಿನ ಫಾರಂನಲ್ಲಿ ಪರಿಶೀಲನೆ ನಡೆಸಿದ್ದಾರೆ. ಸಂಪಿಗೆನಗರ ಹಾಗೂ ಹಾವೇರಿ ಜಿಲ್ಲೆಯ ಆಲದಕಟ್ಟಿ ಗ್ರಾಮದಲ್ಲಿರುವ ಅವರ ಸಹೋದರರ ಮನೆಗಳಲ್ಲೂ ಪರಿಶೀಲಿಸಿದರು.

₹1.08 ಕೋಟಿ ಮೌಲ್ಯದ ಆಸ್ತಿ

ಚಿತ್ರದುರ್ಗ: ಸಣ್ಣ ನೀರಾವರಿ ಇಲಾಖೆಯ ಸಹಾಯಕ ಎಂಜಿನಿಯರ್ ಕೆ. ಮಹೇಶ್ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಕಾರ್ಯನಿರ್ವಾಹಕ ಎಂಜಿನಿಯರ್ ಎಸ್. ಭಾರತಿ ದಂಪತಿಯ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ₹1.08 ಕೋಟಿ ಮೌಲ್ಯದ ಆಸ್ತಿ ಪತ್ತೆ ಹಚ್ಚಿದ್ದಾರೆ.

ಈ ದಂಪತಿಗೆ ಸೇರಿರುವ ದಾವಣಗೆರೆಯ ಜಯನಗರದಲ್ಲಿರುವ ಮನೆಯ ಮೇಲೆ ಗುರುವಾರ ಬೆಳಿಗ್ಗೆ 6ಕ್ಕೆ ದಾಳಿ ನಡೆಸಿದ್ದು, ಈ ವೇಳೆ ₹ 15 ಲಕ್ಷ ನಗದು ಹಾಗೂ 900 ಗ್ರಾಂ ಚಿನ್ನಾಭರಣ ಪತ್ತೆಯಾಗಿದೆ. ಹೊಳಲ್ಕೆರೆಯ ಮಹೇಶ್ ಅವರ ಕಚೇರಿ ಮತ್ತು ಭಾರತಿ ಅವರ ಬೆಂಗಳೂರಿನ ಬಿಬಿಎಂಪಿ ಕಚೇರಿಯ ಮೇಲೆಯೂ ದಾಳಿ ನಡೆಸಲಾಗಿದೆ.

‘ಅಕ್ರಮ ಆಸ್ತಿ ಗಳಿಕೆಗೆ ಸಂಬಂಧಿಸಿದಂತೆ ದೂರು ಬಂದಿತ್ತು. ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿ ಪರಿಶೀಲಿಸಲಾಗಿದೆ. ಜಮೀನು, ತೋಟ ಸೇರಿ ಇತರ ಆಸ್ತಿ ಇರುವುದು ಗೊತ್ತಾಗಿದೆ. ದಾಳಿ ಮುಂದುವರಿದಿದೆ’ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎನ್. ವಾಸುದೇವರಾಮ ಮಾಹಿತಿ ನೀಡಿದರು.


ಭಾರತಿ–ಮಹೇಶ್ ದಂಪತಿ

₹ 46 ಲಕ್ಷ ಜಪ್ತಿ (ಚನ್ನಗಿರಿ ವರದಿ): ಭದ್ರಾವತಿ ವಿಭಾಗದ ಚನ್ನಗಿರಿ ವಲಯದ ವಲಯ ಅರಣ್ಯಾಧಿಕಾರಿ ಎಸ್.ಸತೀಶ್ ಅವರ ಕಚೇರಿ ಹಾಗೂ ಶಿವಮೊಗ್ಗದ ಡಾಲರ್ಸ್ ಕಾಲೊನಿಯಲ್ಲಿರುವ ಅವರ ‘ವೃಷಭಾದ್ರಿ’ ನಿವಾಸದ ಮೇಲೂ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ₹ 46 ಲಕ್ಷ ನಗದು ಜಪ್ತಿ ಮಾಡಿದ್ದಾರೆ. ಅವರ ಐಷಾರಾಮಿ ಮನೆಯ ಮೌಲ್ಯ ₹1.16 ಕೋಟಿ. ಸತೀಶ್ ಅವರು ಕೆಲದಿನಗಳ ಹಿಂದೆ ಚನ್ನಗಿರಿಯಿಂದ ಬೇರೆಡೆಗೆ ವರ್ಗಾವಣೆಯಾಗಿದ್ದರು. ಆದರೆ ಸೇವೆಯಿಂದ ಬಿಡುಗಡೆಯಾಗಿರಲಿಲ್ಲ.

ಐಷಾರಾಮಿ ಒಳಾಂಗಣ ವಿನ್ಯಾಸ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಮೈಸೂರು: ಹಾರಂಗಿ ಜಲಾಶಯದ ಅಧೀಕ್ಷಕ ಎಂಜಿನಿಯರ್ ರಘುಪತಿ ಅವರ ಮೈಸೂರಿನ ನಿವಾಸದಲ್ಲಿ ಗುರುವಾರ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರಿಗೆ ಐಷಾರಾಮಿ ಒಳಾಂಗಣ ವಿನ್ಯಾಸ ಪತ್ತೆಯಾಗಿದೆ.

‘ಬೃಹತ್ ಗಾತ್ರದ ಟಿ.ವಿ, ಅದರ ಹಿಂಬದಿಯಲ್ಲಿ ಚಾವಣಿಯವರೆಗೂ ಚಾಚಿದಂತಿರುವ ಮರದ ಕೆತ್ತನೆಯ ಗೋಡೆ ಸೇರಿದಂತೆ ದುಬಾರಿ ಬೆಲೆಯ ಐಷಾರಾಮಿ ಮರದ ಪೀಠೋಪಕರಣಗಳು ಸಿಕ್ಕಿವೆ. ಇದು ಮೇಲ್ನೋಟಕ್ಕೆ ದುಬಾರಿ ಬೆಲೆಯ ಮರದಂತೆ ಕಾಣುತ್ತಿದ್ದು, ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಮರದ ಮೌಲ್ಯವನ್ನು ಅಂದಾಜು ಮಾಡಲಾಗುವುದು’ ಎಂದು ಮೈಸೂರು ವಿಭಾಗದ ಲೋಕಾಯುಕ್ತ ಎಸ್.ಪಿ.ಸುರೇಶ್‌ಬಾಬು ‘ಪ್ರಜಾವಾಣಿ’ಗೆ ತಿಳಿಸಿದರು.

‘ಅವರಿಗೆ ಸಂಬಂಧಿಸಿದ 2 ಸ್ಥಳದಲ್ಲಿ ಒಟ್ಟು ₹ 3.4 ಕೋಟಿ ಮೊತ್ತದ ಆಸ್ತಿ ಪತ್ತೆಯಾಗಿದ್ದು, ಶೋಧ ಕಾರ್ಯ ಮುಂದುವರಿದಿದೆ’ ಎಂದು ಹೇಳಿದರು.


ಹಾರಂಗಿ ಜಲಾಶಯದ ಅಧೀಕ್ಷಕ ಎಂಜಿನಿಯರ್ ರಘುಪತಿ ಅವರ ಐಷಾರಾಮಿ ಹೋಂ ಥಿಯೇಟರ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

‘ಭೂಮಿಯ ಮೇಲೆ ಎಡಿಸಿಗೆ ಆಸೆ!’: ಕೊಡಗು ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ನಂಜುಂಡೇಗೌಡ ಅವರಿಗೆ ಸೇರಿದ, ಮಡಿಕೇರಿ, ಮೈಸೂರು, ಪಿರಿಯಾಪಟ್ಟಣ ಸೇರಿದಂತೆ 5 ಸ್ಥಳಗಳ ಮೇಲೆ ಮಡಿಕೇರಿ ಲೋಕಾಯುಕ್ತ ಡಿವೈಎಸ್‌ಪಿ ಪವನ್‌ಕುಮಾರ್ ನೇತೃತ್ವದಲ್ಲಿ ದಾಳಿ ನಡೆಸಿದಾಗ ಪೊಲೀಸರಿಗೆ ಭೂದಾಖಲೆಗಳ ರಾಶಿ ಪತ್ತೆಯಾಯಿತು.

‘ಚಿನ್ನಾಭರಣ, ವಾಹನಗಳಿಗಿಂತ ಹೆಚ್ಚಾಗಿ ಭೂಮಿಯ ಮೇಲೆಯೇ ಅವರಿಗೆ ಆಸೆ ಇದ್ದಂತೆ ತೋರುತ್ತದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಈ ವೇಳೆ ಕೊಳ್ಳೇಗಾಲದಲ್ಲಿ ₹ 83 ಲಕ್ಷ ಮೌಲ್ಯದ 1.23 ಎಕರೆ ತೋಟ, ಪಿರಿಯಾಪಟ್ಟಣದಲ್ಲಿ ₹ 35.50 ಲಕ್ಷ ಮೌಲ್ಯದ 8 ಎಕರೆ ತೋಟ, ₹ 16 ಲಕ್ಷ ಮೌಲ್ಯದ 11 ಎಕರೆ ತೋಟ, ₹ 20 ಲಕ್ಷ ಮೌಲ್ಯದ ತೋಟದ ಮನೆ, ಸುಂಟಿಕೊಪ್ಪದಲ್ಲಿ ₹ 10 ಲಕ್ಷ ಮೌಲ್ಯದ ನಿವೇಶನ, ಮೈಸೂರು ನಗರದಲ್ಲಿ ₹ 18.50 ಲಕ್ಷ ಹಾಗೂ ₹ 17 ಲಕ್ಷ ಮೌಲ್ಯದ 2 ನಿವೇಶನಗಳು, ಮೈಸೂರು ತಾಲ್ಲೂಕಿನಲ್ಲಿ ₹ 14.70 ಲಕ್ಷ ಮೌಲ್ಯದ 1.9 ಎಕರೆ ತೋಟ, ಕೊಡಗಿನ ಭಾಗಮಂಡಲದಲ್ಲಿ ₹ 40.30 ಲಕ್ಷ ಮೌಲ್ಯದ 6.80 ಎಕರೆ ತೋಟ ಸೇರಿದಂತೆ ಒಟ್ಟು ₹ 2.55 ಕೋಟಿ ಮೌಲ್ಯದ ಭೂ ದಾಖಲೆಗಳು ಪತ್ತೆಯಾಗಿವೆ’ ಎಂದು ಪೊಲೀಸರು ಹೇಳಿದ್ದಾರೆ.

ಕೋಟಿ ಕುಳಗಳು ಬಲೆಗೆ

ಒಂದನೇ ಪುಟದಿಂದ

‘ಆರೋಪಿಯ ಮನೆಯಲ್ಲಿ ಸ್ಥಿರಾಸ್ತಿ ಒಡೆತನಕ್ಕೆ ಸಂಬಂಧಿಸಿದ ಅಪಾರ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಅಧಿಕಾರಿಯು ದೇವನಹಳ್ಳಿ ಹಾಗೂ ಸುತ್ತಮುತ್ತಲಿನ ಪಟ್ಟಣಗಳಲ್ಲಿ ವಾಣಿಜ್ಯ ಕಟ್ಟಡಗಳು ಸೇರಿದಂತೆ ಹಲವು ಸ್ಥಿರಾಸ್ತಿಗಳನ್ನು ಹೊಂದಿರುವುದು ಕಂಡುಬಂದಿದೆ’ ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

ನಟರಾಜ್ ಕನಕಪುರ ತಾಲ್ಲೂಕಿನ ಶಿವನಹಳ್ಳಿಯಲ್ಲಿ 11 ಎಕರೆ ವಿಸ್ತೀರ್ಣದ ಫಾರ್ಮ್ ಹೌಸ್ ಹೊಂದಿರುವುದು ಪತ್ತೆಯಾಗಿದೆ. ಅಲ್ಲಿ ಐಷಾರಾಮಿ ಸೌಲಭ್ಯಗಳಿರುವುದು ಶೋಧದ ವೇಳೆ ಕಂಡುಬಂದಿದೆ.

ಒಂದೇ ಪ್ರಕರಣದಲ್ಲಿ ದಂಪತಿ: ಬಿಬಿಎಂಪಿ ಕೆರೆ ನಿರ್ವಹಣಾ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಎಸ್. ಭಾರತಿ ಮತ್ತು ಹೊಳಲ್ಕೆರೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಎಂಜಿನಿಯರ್ ಹುದ್ದೆಯಲ್ಲಿರುವ ಅವರ ಪತಿ ಕೆ. ಮಹೇಶ್ ವಿರುದ್ಧ ಒಟ್ಟಾಗಿ ಒಂದೇ ಪ್ರಕರಣ ದಾಖಲಿಸಲಾಗಿದೆ. ದಂಪತಿ ಬಳಿಯಿದ್ದ ₹ 15 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ.

ವಾಸ್ತು ಪ್ರಕಾರ ಕೆಲಸ ಮಾಡಿ: ರೇವಣ್ಣ

ಪ್ರಜಾವಾಣಿ ವಾರ್ತೆ

ಹಾಸನ: ‘ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ವಿದ್ಯುತ್ ಪೂರೈಕೆ ಕೇಂದ್ರವನ್ನು ವಾಸ್ತು ಪ್ರಕಾರ ಅಳವಡಿಸಿ. ಹತ್ತಾರು ಜನ ಆಸ್ಪತ್ರೆಯಲ್ಲಿ ಉಳಿಯುವುದರಿಂದ ವಾಸ್ತು ಪ್ರಕಾರವೇ ಕೆಲಸ ಮಾಡಿ’ ಎಂದು ಶಾಸಕ ಎಚ್.ಡಿ. ರೇವಣ್ಣ ಅಧಿಕಾರಿಗಳಿಗೆ ಸಲಹೆ ನೀಡಿದರು.

ನಗರದಲ್ಲಿ ಗುರುವಾರ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ‘ನಾನು ವಾಸ್ತು ಪ್ರಕಾರ ₹ 200 ಕೋಟಿ ವೆಚ್ಚದಲ್ಲಿ ಎಲ್ಲ ಚಿಕಿತ್ಸಾ ಸೌಲಭ್ಯ ಸಿಗುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಾಣ ಮಾಡಿಸಿದ್ದೇನೆ. ಎಲ್ಲ ಸಿದ್ಧವಿದೆ. ವಿದ್ಯುತ್ ಕೇಂದ್ರವನ್ನು ವಾಸ್ತು ಪ್ರಕಾರ ದಕ್ಷಿಣ ಅಥವಾ ಉತ್ತರ ದಿಕ್ಕಿನಲ್ಲಿ ಹಾಕಬೇಕಾ ನೋಡಿ’ ಎಂದು ಸಲಹೆ ನೀಡಿದರು.


‘ವಿದ್ಯುತ್ ಕೇಂದ್ರಕ್ಕಾಗಿ ಸುಮ್ಮನೆ ಅರ್ಧ ಎಕರೆ ಪ್ರದೇಶ ಬಳಸಬೇಡಿ. 10 ಗುಂಟೆ ಜಾಗ ಸಾಕು. ಒಂದೇ ಕಂಬದಲ್ಲಿ ನಿರ್ಮಿಸಬಹುದೇ ಎಂಬುದನ್ನೂ ನೋಡಿ’ ಎಂದರು.

ಮಾದಾರಶ್ರೀಗೆ ಮಾತೃ ವಿಯೋಗ



ಚಿತ್ರದುರ್ಗ: ಇಲ್ಲಿನ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಗಂಗಮ್ಮ ಅವರ ಪೂರ್ವಾಶ್ರಮದ ತಾಯಿ ಗಂಗಮ್ಮ (88) ವಯೋಸಹಜ ಅನಾರೋಗ್ಯದಿಂದ ಬುಧವಾರ ರಾತ್ರಿ ನಿಧನರಾದರು.

ಅವರಿಗೆ ಮೂವರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಆರು ಜನ ಮಕ್ಕಳಲ್ಲಿ ಸ್ವಾಮೀಜಿ ಕೊನೆಯವರು. ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಚಿಕಿತ್ಸೆಗಾಗಿ ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೊಳಲ್ಕೆರೆ ತಾಲ್ಲೂಕಿನ ಹಿರೇಕಂದವಾಡಿ ಗ್ರಾಮದ ಜಮೀನಿನಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಿನಗೆ ಸಂಪೂರ್ಣ ಭದ್ರತೆ ಬೇಕಿದ್ದರೆ ಜೈಲಿಗೆ ಹೋಗು. ಅಲ್ಲಿ ಊಟ, ಬಟ್ಟೆ, ವೈದ್ಯಕೀಯ ಸೌಲಭ್ಯ ಎಲ್ಲವೂ ಸಿಗುತ್ತವೆ. ಸಿಗದಿರುವುದು ಒಂದೇ ಒಂದು. ಅದೇಂದರೆ... ಸ್ವಾತಂತ್ರ್ಯ.

-ಡ್ವೈಟ್ ಡಿ. ಐಸನ್‌ಹೋವರ್

ಚುನಾವಣಾ ಆಯೋಗವನ್ನು ದುರ್ಬಲಗೊಳಿಸುವ ಪ್ರಯತ್ನ ಬೇಡ

ಚುನಾವಣಾ ಆಯೋಗಕ್ಕೆ (ಇ.ಸಿ) ಆಯುಕ್ತರನ್ನು ನೇಮಕ ಮಾಡಲು ಕೇಂದ್ರ ಸರ್ಕಾರದಿಂದ ಪ್ರಸ್ತಾಪಿತವಾದ ಹೊಸ ವ್ಯವಸ್ಥೆಯು ಏಕಪಕ್ಷೀಯವಾಗಿರುವುದು ದುರದೃಷ್ಟಕರ. ಈ ವಿಷಯದಲ್ಲಿ, ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆಯೇ ನಡೆಯುತ್ತಿರುವುದಾಗಿ ಸರ್ಕಾರ ಪ್ರತಿಪಾದನೆ ಮಾಡುತ್ತಿರುವುದು ಜನರ ದಿಕ್ಕು ತಪ್ಪಿಸುವ ತಂತ್ರವಲ್ಲದೆ ಬೇರೇನಲ್ಲ. ಮುಖ್ಯ ಚುನಾವಣಾ ಆಯುಕ್ತ ಮತ್ತು ಚುನಾವಣಾ ಆಯುಕ್ತರ ನೇಮಕಕ್ಕೆ ಶಿಫಾರಸುಗಳನ್ನು ಮಾಡಲು ಪ್ರಧಾನಿ, ಲೋಕಸಭೆಯ ವಿರೋಧಪಕ್ಷದ ನಾಯಕ ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿ ಅವರನ್ನೊಳಗೊಂಡ ಸಮಿತಿಯನ್ನು ರಚಿಸುವಂತೆ ಸುಪ್ರೀಂ ಕೋರ್ಟ್, ಕೆಲವು ತಿಂಗಳ ಹಿಂದೆ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಆದರೆ, ರಾಜ್ಯಸಭೆಯಲ್ಲಿ ಮಂಡಿಸಿರುವ 'ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಆಯುಕ್ತರು (ನೇಮಕಾತಿ, ಕರ್ತವ್ಯದ ನಿಬಂಧನೆಗಳು ಮತ್ತು ಅಧಿಕಾರಾವಧಿ) ಮಸೂದೆ-2023' ಪ್ರಕಾರ, ಆಯ್ಕೆ ಸಮಿತಿಯಲ್ಲಿ ಪ್ರಧಾನಿ ಮತ್ತು ವಿರೋಧಪಕ್ಷದ ನಾಯಕರ ಜತೆ ಇರಬೇಕಾಗಿದ್ದ ಮುಖ್ಯ ನ್ಯಾಯಮೂರ್ತಿಯವರ ಬದಲು ಸಂಪುಟ ದರ್ಜೆಯ ಸಚಿವರೊಬ್ಬರು ಸದಸ್ಯರಾಗಿರುತ್ತಾರೆ. ಅಂದರೆ ಮುಖ್ಯ ನ್ಯಾಯಮೂರ್ತಿ ಅವರನ್ನೇ ಸಮಿತಿಯಿಂದ ಹೊರಗಿಡಲು ನಿರ್ಧರಿಸಲಾಗಿದೆ. 'ದೆಹಲಿ ರಾಷ್ಟ್ರ ರಾಜಧಾನಿ ಪ್ರದೇಶ (ತಿದ್ದುಪಡಿ) ಮಸೂದೆ'ಯ ವಿಷಯದಲ್ಲಿ ನಡೆದುಕೊಂಡಂತೆಯೇ ಈ ಮಸೂದೆಯ ವಿಷಯದಲ್ಲೂ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನ ನಿಜ ಉದ್ದೇಶಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಿದೆ. ಸರ್ಕಾರದ ನಡೆ, ಕೋರ್ಟ್‌ನ ತೀರ್ಪನ್ನೂ ಗೌಣವಾಗಿಸಿದೆ. ವಾಸ್ತವವಾಗಿ, ದೆಹಲಿ ಮಸೂದೆಗಿಂತ ಈ ಮಸೂದೆಯು ಹೆಚ್ಚಿನ ಮತ್ತು ವ್ಯಾಪಕವಾದ ಪರಿಣಾಮಗಳನ್ನು ಬೀರುವಂಥದ್ದು.



ಸ್ವಾಯತ್ತ ಸಂಸ್ಥೆಗಳನ್ನು ಉದ್ದೇಶಪೂರ್ವಕವಾಗಿಯೇ ದುರ್ಬಲಗೊಳಿಸುವ ಇಂದಿನ ಪ್ರವೃತ್ತಿ ಹಾಗೂ ನೀತಿಯು ಈ ಮಸೂದೆಯನ್ನು ರೂಪಿಸುವಲ್ಲಿಯೂ ವ್ಯಕ್ತವಾಗಿದೆ

ಕೇಂದ್ರ ಸರ್ಕಾರದ ಪ್ರತಿನಿಧಿಗಳೇ ಹೆಚ್ಚಿಗೆ ಇರುವ ಆಯ್ಕೆ ಸಮಿತಿಯನ್ನು ಸರ್ಕಾರದ ಸಮಿತಿ ಎಂದು ಕರೆಯಬಹುದೇ ಹೊರತು ಅದನ್ನು ಸ್ವತಂತ್ರ ಮತ್ತು ಸಂವಿಧಾನಾತ್ಮಕ ವ್ಯವಸ್ಥೆ ಎಂದು ಪರಿಭಾವಿಸಲಾಗದು. ಸಮಿತಿಯಲ್ಲಿ ಮುಖ್ಯ ನ್ಯಾಯಮೂರ್ತಿ ಇದ್ದರೆ ಸರ್ಕಾರ ಅಥವಾ ವಿರೋಧಪಕ್ಷ ಯಾವುದರ ಕೈಯೂ ಮೇಲಾಗದಂತೆ ನೋಡಿಕೊಳ್ಳಲು ಸಾಧ್ಯ. ಅಂತಹ ನೇಮಕಗಳಿಗೆ ವಿಶ್ವಾಸಾರ್ಹತೆ ಹೆಚ್ಚು ಮತ್ತು ಎಲ್ಲರೂ ಅಂತಹ ನೇಮಕಗಳನ್ನು ಒಪ್ಪಿಕೊಳ್ಳುವರು ಕೂಡ. ದೇಶದಲ್ಲಿ ಚುನಾವಣೆಗಳನ್ನು ನಡೆಸುವ ಶಕ್ತಿ ಮತ್ತು ಹೊಣೆಗಾರಿಕೆ ಎರಡನ್ನೂ ಹೊಂದಿರುವ ಚುನಾವಣಾ ಆಯೋಗಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುದೊಡ್ಡ ಪಾತ್ರವಿದೆ. ಲಾಗಾಯ್ತಿನಿಂದಲೂ ಮುಕ್ತವಾಗಿ ಹಾಗೂ ನ್ಯಾಯಸಮ್ಮತವಾಗಿ ನಡೆದುಕೊಂಡು ಬಂದಿದ್ದ ಚುನಾವಣಾ ಆಯೋಗವು ರಾಷ್ಟ್ರದಲ್ಲಿ ಮಾತ್ರವಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲೂ ಒಳ್ಳೆಯ ಹೆಸರನ್ನು ಸಂಪಾದಿಸಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಅದರ ಸ್ವಾಯತ್ತತೆಗೆ ಧಕ್ಕೆ ಉಂಟಾಗಿರುವುದನ್ನು ದೇಶದ ಜನ ಗುರುತಿಸಿದ್ದಾರೆ. ಚುನಾವಣಾ ಆಯೋಗದ ಸ್ವಾಯತ್ತತೆಗೆ ಧಕ್ಕೆ ಉಂಟಾದಷ್ಟೂ ಮತ್ತು ಅದು ವಿಶ್ವಾಸ ಕಳೆದುಕೊಳ್ಳುತ್ತಾ ಹೋದಷ್ಟೂ ಚುನಾವಣೆಗಳು ಸಹ ವಿಶ್ವಾಸ ಕಳೆದುಕೊಳ್ಳುತ್ತವೆ. ಚುನಾವಣೆಗಳು ನ್ಯಾಯಸಮ್ಮತವಾಗಿ ನಡೆಯುತ್ತಿಲ್ಲ ಎಂಬ ಅಭಿಪ್ರಾಯ ಬಲಗೊಂಡರೆ ಪ್ರಜಾಪ್ರಭುತ್ವ ದುರ್ಬಲಗೊಳ್ಳುತ್ತಾ ಸಾಗುತ್ತದೆ. ತನಗೆ ಹತ್ತಿರವಾದವರನ್ನು ಚುನಾವಣಾ ಆಯೋಗಕ್ಕೆ ನೇಮಕ ಮಾಡಲು ಸರ್ಕಾರ ಇದುವರೆಗೆ ಒಳ ಮಸಲತ್ತುಗಳನ್ನು ಮಾಡುತ್ತಿತ್ತು. ಆದರೆ, ಮಂಡನೆಯಾದ ಮಸೂದೆಯ ಪ್ರಕಾರ, ಇನ್ನುಮುಂದೆ ಸರ್ಕಾರ ತನಗೆ ಬೇಕಾದವರನ್ನು ಯಾವ ಅಂಕುಶವೂ ಇಲ್ಲದಂತೆ ರಾಜಾರೋಷವಾಗಿ ನೇಮಕ ಮಾಡಬಹುದು.

ಸರ್ಕಾರದ ನಡೆ, ಸುಪ್ರೀಂ ಕೋರ್ಟ್‌ನ ಆಶಯದ ಸ್ಪಷ್ಟ ಉಲ್ಲಂಘನೆ ಎನ್ನುವುದು ಎದ್ದು ಕಾಣುವಂತಹ ಸತ್ಯ. ಕಾರ್ಯಾಂಗದ ಹಸ್ತಕ್ಷೇಪದಿಂದ ಚುನಾವಣಾ ಆಯೋಗ ಮುಕ್ತವಾಗಿರಬೇಕು ಎಂದು ಕೋರ್ಟ್ ಸ್ಪಷ್ಟವಾಗಿ ಹೇಳಿತ್ತು. ಹೊಸ ಕಾನೂನು ರೂಪುಗೊಳ್ಳುವವರೆಗೆ ಮುಖ್ಯ ನ್ಯಾಯಮೂರ್ತಿ ಅವರನ್ನೊಳಗೊಂಡ ಆಯ್ಕೆ ಸಮಿತಿ ಇರುವುದು ಒಳ್ಳೆಯದು ಎಂದೂ ಅಭಿಪ್ರಾಯಪಟ್ಟಿತ್ತು. ಕೋರ್ಟ್‌ನ ಆಶಯದಂತೆಯೇ ಮಸೂದೆಯನ್ನು ರೂಪಿಸಲಾಗಿದೆ ಎಂದು ಸರ್ಕಾರ ಸುಳ್ಳು ಹೇಳುತ್ತಿದೆ ಮತ್ತು ಉದ್ದೇಶಪೂರ್ವಕವಾಗಿಯೇ ಕೋರ್ಟ್‌ನ ಆಶಯವನ್ನೂ ಕಡೆಗಣಿಸಿದೆ. ಸ್ವಾಯತ್ತ ಸಂಸ್ಥೆಗಳನ್ನು ಉದ್ದೇಶಪೂರ್ವಕವಾಗಿಯೇ ದುರ್ಬಲಗೊಳಿಸುವ ಇಂದಿನ ಪ್ರವೃತ್ತಿ ಹಾಗೂ ನೀತಿಯು ಈ ಮಸೂದೆಯನ್ನು ರೂಪಿಸುವಲ್ಲಿಯೂ ವ್ಯಕ್ತವಾಗಿದೆ. ಹೀಗಾಗಿ ಚುನಾವಣೆ ಆಯೋಗವು ಸರ್ಕಾರದ ಕೈಗೊಂಬೆಯಾಗಲಿದೆ ಎಂದು ವಿರೋಧಪಕ್ಷಗಳು ದೂರುತ್ತಿರುವುದರಲ್ಲಿ ತಥ್ಯವಿದೆ. ತನ್ನ ತೀರ್ಪನ್ನು ತಪ್ಪಾಗಿ ಅರ್ಥೈಸಿ, ದುರ್ಬಲಗೊಳಿಸುವ ಪ್ರವೃತ್ತಿಗೆ ಸುಪ್ರೀಂ ಕೋರ್ಟ್ ತಡೆಯೊಡ್ಡಬಹುದು ಎಂಬುದೊಂದೇ ಈಗಿರುವ ಆಶಾವಾದವಾಗಿದೆ.

ದಿನದ ಟ್ವೀಟ್

ವಿಕೇಂದ್ರೀಕರಣಕ್ಕೆ ಪೂರಕ



ರಾಜ್ಯಗಳು ಹೊಸ ಜಿಲ್ಲೆಗಳ ರಚನೆಯತ್ತ ದಾಂಗುಡಿ ಇಟ್ಟಿವೆ. ರಾಜಸ್ಥಾನ ಮತ್ತು ಮಧ್ಯಪ್ರದೇಶ ಕ್ರಮವಾಗಿ 17 ಮತ್ತು 3 ಹೊಸ ಜಿಲ್ಲೆಗಳನ್ನು ರಚಿಸಲಿವೆ. ಆಂಧ್ರಪ್ರದೇಶವು 2022ರಲ್ಲಿ 13 ಹೊಸ ಜಿಲ್ಲೆಗಳನ್ನು ರಚಿಸಿದೆ. ಕೆಲವು ದಶಕಗಳಿಂದೀಚೆಗೆ ಈ ವಿದ್ಯಮಾನ ಹೆಚ್ಚು ಬಿರುಸು ಪಡೆದುಕೊಂಡಿದೆ. ಈ ಕಾರ್ಯವನ್ನು ಸರಿಯಾದ ಉದ್ದೇಶದಿಂದ ಸರಿಯಾಗಿ ಜಾರಿಗೆ ತಂದರೆ, ಈ ಹೊಸ ಅಭಿವೃದ್ಧಿ ಕೇಂದ್ರಗಳ ಮೂಲಕ ಬೆಳವಣಿಗೆಯನ್ನು ಉತ್ತೇಜಿಸಬಹುದು, ಅಧಿಕಾರ ವಿಕೇಂದ್ರೀಕರಿಸಬಹುದು ಮತ್ತು ಆಡಳಿತವನ್ನು ಉತ್ತಮಗೊಳಿಸಬಹುದು.

ಸಚ್ಚಿದಾನಂದ್ ಶುಕ್ಲ, ಆರ್ಥಿಕ ತಜ್ಞ

ಕಿಡಿನುಡಿ



ದನಿಯಾವನ್ನು ನೀವು ಆನ್‌ಲೈನ್ ಮೂಲಕ ಕೊಂಡರೆ 100 ಗ್ರಾಂಗೆ ₹ 35 ಅಥವಾ ಅದಕ್ಕಿಂತ ಹೆಚ್ಚಿನ ಹಣ ಕೊಡಬೇಕಾಗುತ್ತದೆ. ಆದರೆ ಮಹಾರಾಷ್ಟ್ರದ ನಾಸಿಕ್ ಪ್ರದೇಶದ ರೈತರು 1.5 ಎಕರೆಯಲ್ಲಿ ಬೆಳೆದ ಕೊತ್ತಂಬರಿ ಬೆಳೆಗೆ ಪಡೆಯುತ್ತಿರುವುದು ₹ 500ರಷ್ಟು ಕನಿಷ್ಠ ಮೊತ್ತ. ಬೆಳೆ ಮೇಲೆ ನೇಗಿಲು ಹೊಡೆಯುವುದು ಬಿಟ್ಟರೆ ಅವರಿಗೆ ಅನ್ಯಮಾರ್ಗವಿಲ್ಲ. ಕಣ್ಣೀರು ಬತ್ತಿಹೋಗಿದೆ.

ದೇವಿಂದರ್ ಶರ್ಮಾ, ಲೇಖಕ

25 ವರ್ಷಗಳ ಹಿಂದೆ

ಮಂಗಳವಾರ, 18-8-1998

- **ಕರ್ನಾಟಕ- ತಮಿಳುನಾಡು ಕಾನೂನು ಕಲಹಕ್ಕೆ ತೆರೆ**

ನವದೆಹಲಿ, ಆಗಸ್ಟ್ 17- ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆಜ್ಞೆಯ ಜಾರಿ ವಿಷಯದಲ್ಲಿ ತಮಿಳುನಾಡು ಸರ್ಕಾರ ಕರ್ನಾಟಕದ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ವಿಲೇವಾರಿ ಮಾಡುವ ಮೂಲಕ ಕಳೆದ ಆರು ವರ್ಷಗಳಿಂದ ಸುಪ್ರೀಂ ಕೋರ್ಟ್‌ನಲ್ಲಿ ನಡೆದ ಉಭಯ ರಾಜ್ಯಗಳ ಕಾನೂನು ಸಮರ ಇಂದು ಮುಕ್ತಾಯವಾಯಿತು.

ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆಜ್ಞೆಯಂತೆ ಕರ್ನಾಟಕವು ತಮಿಳುನಾಡಿಗೆ 205 ಟಿಎಂಸಿ ಅಡಿ ನೀರನ್ನು ಬಿಡುವ ಬಗೆಗೆ ಪ್ರಧಾನ ಮಂತ್ರಿ ನೇತೃತ್ವದಲ್ಲಿ ಕಾವೇರಿ ನದಿ ಪ್ರಾಧಿಕಾರ ಮತ್ತು ಅದಕ್ಕೆ ಸಹಾಯಕವಾಗಿ ಉಸ್ತುವಾರಿ ಸಮಿತಿಯನ್ನು ರಚಿಸಿದ ಸಂಬಂಧ ಕೇಂದ್ರ ಸರ್ಕಾರ ಈ ತಿಂಗಳ 11ರಂದು ಅಧಿಸೂಚನೆ ಹೊರಡಿಸಿದ ಹಿನ್ನೆಲೆಯಲ್ಲಿ ತಮಿಳುನಾಡು ಮತ್ತು ಕರ್ನಾಟಕ ಯಾವುದೇ ಆಕ್ಷೇಪಗಳನ್ನು ಎತ್ತಲಿಲ್ಲ.

- **ಬಾಗೂರು ನವಿಲೆ ದೌರ್ಜನ್ಯ: ನ್ಯಾಯಾಂಗ ತನಿಖೆಗೆ ಆಗ್ರಹ**

ಬೆಂಗಳೂರು, ಆಗಸ್ಟ್ 17- ಬಾಗೂರು-ನವಿಲೆ ಸುರಂಗ ಮಾರ್ಗದ ಸಂತ್ರಸ್ತರ ಚಳವಳಿಯನ್ನು ಹತ್ತಿಕ್ಕಲು ಸ್ಥಳೀಯ ಪೊಲೀಸರು ನಡೆಸಿದ್ದಾರೆನ್ನಲಾದ ದೌರ್ಜನ್ಯದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಚ್.ಕೆ. ಪಾಟೀಲ್ ಇಂದು ಇಲ್ಲಿ ಆಗ್ರಹಪಡಿಸಿದರು.

50 ವರ್ಷಗಳ ಹಿಂದೆ

ಶನಿವಾರ, 18-8-1973

- **ಇಂದು ದೆಹಲಿ ಮಾತುಕತೆ: ಪಾಕಿಸ್ತಾನವೂ ರಚನಾತ್ಮಕ ಧೋರಣೆ ತಳೆದರೆ ಶೀಘ್ರ ಇತ್ಯರ್ಥ**

ನವದೆಹಲಿ, ಆಗಸ್ಟ್ 17- ಭಾರತ-ಪಾಕಿಸ್ತಾನದ ನಡುವೆ ನಾಳೆ ಇಲ್ಲಿ ಆರಂಭವಾಗುವ ಮಾತುಕತೆಯಲ್ಲಿ ತಲೆದೋರಬಹುದಾದ ಪ್ರಶ್ನೆಗಳ ಬಗ್ಗೆ 'ಸಂಪೂರ್ಣ ಅರಿವು ಮತ್ತು ಒಪ್ಪಂದ'ದೊಂದಿಗೆ ತಾವು ಬಾಂಗ್ಲಾದೇಶದಿಂದ ಹಿಂತಿರುಗಿರುವುದಾಗಿ ಪ್ರಧಾನಿಯವರ ವಿಶೇಷ ಪ್ರತಿನಿಧಿ ಪಿ.ಎನ್. ಹಕ್ಸರ್ ತಿಳಿಸಿದ್ದಾರೆ.

ಢಾಕಾದಿಂದ ಇಂದು ಇಲ್ಲಿಗೆ ಹಿಂತಿರುಗಿದ ಹಕ್ಸರ್ ಅವರು 'ಪಾಕಿಸ್ತಾನವೂ ರಚನಾತ್ಮಕ ಮನೋಭಾವ ತಳೆದಿದ್ದರೆ ಮಾತ್ರ ಮಾನವೀಯ ಸಮಸ್ಯೆಗಳ ಪರಿಹಾರ ಸಾಧ್ಯ' ಎಂದೂ ನುಡಿದರು.

- **ಭೋಪಾಲ್‌ನಲ್ಲಿ ಗೋಲಿಬಾರ್ ಏಳು ಜನರ ಸಾವು**

ಭೋಪಾಲ್, ಆಗಸ್ಟ್ 17- ಬೆಲೆ ಏರಿಕೆ ವಿರುದ್ಧದ ಚಳವಳಿಗಾರರ ಉದ್ರಿಕ್ತ ಗುಂಪಿನ ಮೇಲೆ ಇಂದು ಪೊಲೀಸರು ಗುಂಡು ಹಾರಿಸಿದಾಗ ಏಳು ಮಂದಿ ಸತ್ತರೆಂದು ಅಧಿಕೃತ ಮೂಲಗಳು ಹೇಳಿವೆ. ವಿದ್ಯಾರ್ಥಿ ನಾಯಕರ ಪ್ರಕಾರ ಹತ್ತು ಮಂದಿ ಸತ್ತಿದ್ದಾರೆ.

ಸಂಸತ್ತಿನಲ್ಲಿ ನಡೆದ ಚರ್ಚೆಯಲ್ಲಿ ಆವೇಶ ಹೆಚ್ಚಾಗಿತ್ತು, ಗಟ್ಟಿತನ ಕಡಿಮೆ ಇತ್ತು

ಅವಿಶ್ವಾಸ: ಕಳೆದುಹೋದ ಅವಕಾಶ?



ವಿಶ್ಲೇಷಣೆ

ಪ್ರೊ. ಸಂದೀಪ್ ಶಾಸ್ತ್ರಿ

2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಗೆ ದಿನಗಣನೆ ಶುರುವಾಗಿದೆ. ಚುನಾವಣಾ ಪ್ರಚಾರವು ಕಿವಿ-ಗಡಚಿಕ್ಕುವಂತೆ ಇರಲಿದೆ, ರಾಜಕೀಯ ವಿರೋಧಿಗಳ ನಡುವಿನ ದೋಷಾರೋಪಗಳೇ ಚುನಾವಣೆಯ ಕೇಂದ್ರಬಿಂದು ಆಗಿರಲಿವೆ ಎಂಬುದು ಈಗ ಸ್ಪಷ್ಟವಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಲೋಕಸಭೆಯಲ್ಲಿ ಮಂಡಿಸಿದ್ದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಇದು ಖಚಿತವಾಗಿದೆ. ಅವಿಶ್ವಾಸ ನಿರ್ಣಯಕ್ಕೆ ಸೋಲಾಗಲಿದೆ ಎಂಬುದು ಅದರ ಮೇಲಿನ ಚರ್ಚೆ ಆರಂಭವಾಗುವುದಕ್ಕೂ ಮೊದಲೇ ಖಚಿತವಾಗಿತ್ತು. ಲೋಕಸಭೆಯಲ್ಲಿ ಇದುವರೆಗೆ ಅವಿಶ್ವಾಸ ನಿರ್ಣಯಕ್ಕೆ ಜಯ ಸಿಕ್ಕ ನಿದರ್ಶನಗಳೇ ಇಲ್ಲ. ಹೀಗಿದ್ದರೂ, ಪ್ರಕ್ರಿಯೆಯು (ಅಂದರೆ ಚರ್ಚೆಯು) ಅಂತಿಮ ಫಲಿತಾಂಶಕ್ಕಿಂತ ಹೆಚ್ಚಿನ ಮಹತ್ವ ಪಡೆಯಲಿದೆ ಎಂಬುದು ಸ್ಪಷ್ಟವಾಗಿತ್ತು.

ಅವಿಶ್ವಾಸ ನಿರ್ಣಯ ಮಂಡನೆ ಹಾಗೂ ಚರ್ಚೆಯಲ್ಲಿ ವಾಸ್ತವಕ್ಕಿಂತ ಆರ್ಭಟವೇ ಜೋರಾಗಿತ್ತು. ಅವಿಶ್ವಾಸ ಮಂಡನೆಯ ಒಂದು ಪ್ರಮುಖ ಉದ್ದೇಶ, ಪ್ರಧಾನಿಯವರನ್ನು ಸಂಸತ್ತಿನಲ್ಲಿ ಮಾತನಾಡುವಂತೆ ಮಾಡುವುದು, ಅದರಲ್ಲೂ ಮುಖ್ಯವಾಗಿ ಮಣಿಪುರದಲ್ಲಿನ ಸ್ಥಿತಿಯ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಮಾಡುವುದು ಎಂದು ವಿರೋಧ ಪಕ್ಷಗಳು ಸ್ಪಷ್ಟಪಡಿಸಿದ್ದವು. ತಮ್ಮ ಸರ್ಕಾರವನ್ನು ಸಮರ್ಥಿಸಿಕೊಂಡು, ವಿರೋಧ ಪಕ್ಷಗಳ ಮೇಲೆ ಆಕ್ರಮಣಕಾರಿಯಾಗಿ ಪ್ರಧಾನಿ ಸದನದಲ್ಲಿ ಮಾತನಾಡಿದರಾದರೂ, ಮಣಿಪುರದ ಬಗ್ಗೆ ಅವರು ಮಾತನಾಡಲಿಲ್ಲ ಎಂದು ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ನಡೆಸಿದರು. ವಿರೋಧ ಪಕ್ಷಗಳ ಒಕ್ಕೂಟದ ಭಾಗವಾಗಿರುವ ರಾಜ್ಯ ಮಟ್ಟದ ಪಕ್ಷಗಳು ತಮ್ಮ ರಾಜ್ಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಈ ಚರ್ಚೆಯ ವೇಳೆ ಪ್ರಸ್ತಾಪಿಸಿದವು. ಇಡೀ ಚರ್ಚೆಯು ವಿರೋಧಿ ಗುಂಪಿನ ಮೇಲೆ (ಎರಡೂ ಕಡೆಗಳಿಂದ) ವಾಗ್ದಾಳಿ ನಡೆಯುವುದಕ್ಕೆ ಹೆಚ್ಚು ಬಳಕೆಯಾಯಿತು. ವಿರೋಧ ಪಕ್ಷಗಳು ಪರ್ಯಾಯಗಳ ಬಗ್ಗೆ ಮಾತನಾಡಲು ಈ ವೇದಿಕೆಯನ್ನು ಬಳಸಬಹುದು ಎಂದು ನಿರೀಕ್ಷಿಸಲಾಗಿತ್ತು. ಹಾಗೆಯೇ, ಆಡಳಿತ ಪಕ್ಷವು ಸರ್ಕಾರವನ್ನು ಸಮರ್ಥಿಸಿಕೊಳ್ಳಲು ಹಾಗೂ ಸಾಧನೆಗಳನ್ನು ತಿಳಿಸಲು ಇದನ್ನು ಬಳಸಿಕೊಳ್ಳಬಹುದು ಎಂದು ಭಾವಿಸಲಾಗಿತ್ತು.

ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳು ರಾಜಕೀಯವಾಗಿ ಒಳ್ಳೆಯ ಹೆಸರು ಸಂಪಾದಿಸಲು ಪ್ರಯತ್ನಿಸುತ್ತಿವೆ ಎಂಬುದಕ್ಕೆ ಚರ್ಚೆಯ ಸಂದರ್ಭದಲ್ಲಿನ ವಾತಾವರಣ ಆಧಾರ ಒದಗಿಸಿತು. ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಕಂಡುಬಂದ ಘೋಷಣೆ ಕೂಗುವಿಕೆಯು ಈಚಿನ ದಿನಗಳಲ್ಲಿ ನಡೆದಿರಲಿಲ್ಲ. ಘೋಷಣೆ ಕೂಗುವಿಕೆ ಬೇಡ ಎಂದು ಸ್ಪೀಕರ್, ಎರಡೂ ಕಡೆಯವರಿಗೆ ಮನವಿ ಮಾಡಿದರಾದರೂ, ತಾವು ಸಿದ್ಧತೆ ನಡೆಸಿಕೊಂಡು ಬಂದಿದ್ದನ್ನು ಮಾಡಿಯೇತೀರಲು ಪರಸ್ಪರ ಸ್ಪರ್ಧೆಗೆ ಇಳಿದವರಂತೆ ಎರಡೂ ಕಡೆಯವರು ವರ್ತಿಸಿದರು. ಅವರು ಹೆಚ್ಚು ಗಮನ ಸೆಳೆಯುವ ಉದ್ದೇಶದಿಂದ ಮೊದಲೇ ಎಲ್ಲವನ್ನೂ ಆಲೋಚಿಸಿಕೊಂಡು ಬಂದು ವರ್ತಿಸಿದಂತಿತ್ತು. ಸದನದಲ್ಲಿ ಅರ್ಥಪೂರ್ಣವಾದ ಹಾಗೂ ತಾರ್ಕಿಕವಾದ ಚರ್ಚೆ ನಡೆಯಬೇಕು. ಆದರೆ ಅದು ಬಹಳ ಅಪರೂಪವಾಗಿದೆ.

ಸಂಸದೀಯ ವೇದಿಕೆಗಳಲ್ಲಿ ಈಚೆಗೆ ಚರ್ಚೆಗಳು, ಸಾರ್ವಜನಿಕವಾಗಿ ನಡೆಯುವ ಕೆಸರೆರಚಾಟದ ಮಾದರಿಗೆ ತಿರುಗಿವೆ. ಟಿ.ವಿ. ವಾಹಿನಿಗಳು ಕೂಡ ಇದನ್ನು ಎತ್ತಿ ತೋರಿಸಿವೆ. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳಿಂದ ಬರುವ ಪ್ರತಿಕ್ರಿಯೆಗಳನ್ನು ಮೊದಲೇ ಊಹಿಸಬಹುದು, ಚರ್ಚೆಯ ನಂತರ ಆಗಬೇಕಿರುವ ತೀರ್ಮಾನವು ಮೊದಲೇ ಅಂತಿಮವಾದಂತೆ ಇರುತ್ತದೆ, ಚರ್ಚೆಯ ಸಂದರ್ಭದಲ್ಲಿ ಒಂದು ವಾದವನ್ನು ಸಮರ್ಥಿಸುವ ಒಂದೇ ಉದ್ದೇಶದಿಂದ ಸತ್ಯಸಂಗತಿಗಳನ್ನು ಒಂದೆಡೆ ಪೋಣಿಸಿ ಹೇಳಲಾಗುತ್ತದೆ.

ಅವಿಶ್ವಾಸ ನಿರ್ಣಯ ಮಂಡಿಸಿದ ವಿರೋಧ ಪಕ್ಷಗಳ ನಡೆಯ ಮೇಲೆ ಒಂದು ಗಮನ ಹರಿಸೋಣ. ಗೌರವ್ ಗೊಗೊಯ್ ಅವರಿಂದ ಅಧೀರ್ ರಂಜನ್ ಚೌಧರಿವರೆಗೆ ಕಾಂಗ್ರೆಸ್ಸಿನ ನಾಯಕರು, ಮಣಿಪುರದ ವಿಚಾರವಾಗಿ ಪ್ರಧಾನಿಯವರನ್ನು ಮಾತನಾಡುವಂತೆ ಮಾಡುವ ಉದ್ದೇಶದಿಂದ ಈ ನಿರ್ಣಯ ಮಂಡಿಸ-ಲಾಗುತ್ತಿದೆ ಎಂಬುದನ್ನು ಸ್ಪಷ್ಟಪಡಿಸಿದರು. ಕಾಂಗ್ರೆಸ್ ಪಾಳಯದಿಂದ ಮಾತನಾಡಿದವರ ಪೈಕಿ ಗೊಗೊಯ್ ಹೆಚ್ಚು ಸಿದ್ಧತೆಯೊಂದಿಗೆ ಬಂದಿದ್ದರು. ಅವರು ತಮ್ಮ ವಾದಗಳನ್ನು ಕ್ರಮಬದ್ಧವಾಗಿ, ಬಹಳ ಸೂಕ್ತವಾದ ಗತಿಯಲ್ಲಿ ಮಂಡಿಸಿದರು. ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವವು ಮರುಸ್ಥಾಪನೆ ಆಗಿರುವ ಕಾರಣ, ಅವರ ಮೇಲೆ ಎಲ್ಲರ ಗಮನ ಇತ್ತು. ಆದರೆ ಅವರ ಮಾತುಗಳಲ್ಲಿ ಗಟ್ಟಿತನ ಇರಲಿಲ್ಲ, ಆರ್ಭಟದ ಶೈಲಿ ಮಾತ್ರ ಇತ್ತು. ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಅವಕಾಶವೊಂದನ್ನು ಕಳೆದುಕೊಂಡಂತೆ ಆಯಿತು ಎಂದು ಕೆಲವರು ಭಾವಿಸಿದರು. ಮಾತಿನ ಸಂದರ್ಭದಲ್ಲಿ ಬಳಕೆಯಾದ ಭಾಷೆಯು ಇನ್ನಷ್ಟು ಪರಿಣಾಮಕಾರಿ ಆಗಿರಬಹುದಿತ್ತು, ಅದು ಮನವೊಲಿಕೆಯ ಧಾಟಿಯಲ್ಲಿ ಇರಬಹುದಿತ್ತು ಎಂದು ಕೆಲವರು ಭಾವಿಸಿದರು.

ಅಧೀರ್ ರಂಜನ್ ಚೌಧರಿ ಅವರು ತಮಗಿದ್ದ ಅವಕಾಶವನ್ನು ಇನ್ನಷ್ಟು ಉತ್ತಮವಾಗಿ ಬಳಸಿಕೊಳ್ಳಬಹುದಿತ್ತು. ಏಕೆಂದರೆ, ಚೌಧರಿ ಅವರು ಮಾತನಾಡಿದ ಸಂದರ್ಭದಲ್ಲಿ ಪ್ರಧಾನಿ ಹಾಜರಿದ್ದರು. ಚೌಧರಿ ಅವರ ಮಾತುಗಳು ವಿವಾದಕ್ಕೆ ಸಿಲುಕಿದವು. ಆಡಳಿತ ಪಕ್ಷವು ಅದನ್ನು ಬಹಳ ಚೆನ್ನಾಗಿ ಬಳಸಿಕೊಂಡಿತು. ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ, ವಿರೋಧ ಪಕ್ಷಗಳ ಇತರ ನಾಯಕರು ಹಲವು ಸಂಗತಿಗಳನ್ನು ಪ್ರಸ್ತಾಪಿಸಿದರು. ಆದರೆ ಅವರ ಮಾತುಗಳು, ಅವರು ಪ್ರತಿನಿಧಿಸುವ ರಾಜ್ಯಗಳಿಗೆ ಸಂಬಂಧಿಸಿದ್ದವು. ಅಸಾದುದ್ದೀನ್ ಒವೈಸಿ ಅವರು ಅಲ್ಪಸಂಖ್ಯಾತ ಸಮುದಾಯಕ್ಕೆ ಸಂಬಂಧಿಸಿದ ವಿಷಯವನ್ನು ಪ್ರಸ್ತಾಪಿಸಿದರು. 2024ರ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವನ್ನು ಎದುರಿಸಲು ಸಿದ್ಧವಾಗುತ್ತಿರುವ ವಿರೋಧ ಪಕ್ಷಗಳು ಒಂದು ಒಕ್ಕೂಟವಾಗಿ ಯಾವ ಕಾರ್ಯತಂತ್ರವನ್ನು ನೆಚ್ಚಿಕೊಂಡಿವೆ ಎಂಬುದು ಖಚಿತವಾಗಲಿಲ್ಲ. ಆಡಳಿತಾರೂಢರ ಕಾರ್ಯತಂತ್ರ ಹಾಗೂ ನೀತಿಗಳಿಗೆ ಪರ್ಯಾಯವಾದ ಕಾರ್ಯತಂತ್ರ ಮತ್ತು ನೀತಿಯನ್ನು ಜನರ ಮುಂದಿಡಲು ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯ ಸಂದರ್ಭವು ಒಂದು ಅವಕಾಶ ಒದಗಿಸಿತ್ತು. ಆದರೆ ಇದು ಸರಿಯಾಗಿ ಬಳಕೆಯಾಗಲಿಲ್ಲ.



ಆಡಳಿತ ಪಕ್ಷದ ಕಡೆಯಲ್ಲಿ, ಪ್ರಮುಖ ಸಚಿವರು ಮತ್ತು ಸಂಸದೀಯ ಪಟುಗಳು ಅಖಾಡಕ್ಕೆ ಇಳಿದಿದ್ದರು. ಎರಡು ಅಂಶಗಳನ್ನು ಮುಂದಿರಿಸಿಕೊಂಡು ಕಾಂಗ್ರೆಸ್‌ಗೆ ಮುಜುಗರ ಉಂಟುಮಾಡಲು ಯತ್ನಿಸಿದರು. ರಾಹುಲ್ ಅವರು ಚರ್ಚೆ ಆರಂಭಿಸದಿದ್ದಾಗ, ಹಿರಿಯ ಸಚಿವರು ಹಾಗೂ ಆಡಳಿತ ಪಕ್ಷದ ಹಿರಿಯ ನಾಯಕರು ಮಂದಹಾಸದೊಂದಿಗೆ, 'ವಾಗ್ದಾಳಿಯನ್ನು ರಾಹುಲ್ ಅವರೇ ಆರಂಭಿಸುತ್ತಾರೆ ಎಂದು ನಾವು ಭಾವಿಸಿದ್ದೆವು' ಎಂದರು. ಎರಡನೆಯದಾಗಿ, ಅಧೀರ್ ರಂಜನ್ ಚೌಧರಿ ಅವರು ಕಾಂಗ್ರೆಸ್ ಕಡೆಯಿಂದ ಮಾತನಾಡುವವರ ಪಟ್ಟಿಯಲ್ಲಿ ಇಲ್ಲದಿದ್ದಾಗ, ಅವರನ್ನು ಪಕ್ಷದಲ್ಲಿ ಮೂಲೆಗುಂಪು ಮಾಡಲಾಗುತ್ತಿದೆ ಎಂದರು. ಪ್ರಧಾನಿಯವರು ಕೂಡ ತಮ್ಮ ಮಾತಿನ ಆರಂಭದಲ್ಲಿ ಈ ಬಗ್ಗೆ ಉಲ್ಲೇಖಿಸಿದರು. ಪ್ರಧಾನಿಯವರು ಮಾತನಾಡುತ್ತಾರೆ ಎಂದು ವಿರೋಧ ಪಕ್ಷದವರು ಭಾವಿಸಿದ್ದ ವಿಷಯಗಳ ವಿಚಾರವಾಗಿ ಗೃಹ ಸಚಿವ ಅಮಿತ್ ಶಾ ಅವರೇ ಹೆಚ್ಚು ಮಾತನಾಡಿದರು. ಆಡಳಿತ ಪಕ್ಷವು ಹಿಂದಿನ ಯುಪಿಎ ಆಡಳಿತವನ್ನು ಟೀಕಿಸಲು ಅವಕಾಶ ನೋಡುತ್ತಿತ್ತು. ಯುಪಿಎ ಅವಧಿಯಲ್ಲಿ ಸಚಿವರಾಗಿದ್ದ, ಪ್ರಮುಖ ಖಾತೆ ಹೊಂದಿದ್ದ, ಈಗಲೂ ಸಚಿವರಾಗಿರು-ವವರೊಬ್ಬರು ಹಿಂದಿನ ಯುಪಿಎ ಸರ್ಕಾರದ ಬಗ್ಗೆ ಟೀಕೆ ಮಾಡುತ್ತಿದ್ದುದು ಕುತೂಹಲಕರವಾಗಿತ್ತು.

ಒಟ್ಟಾರೆಯಾಗಿ ಹೇಳುವುದಾದರೆ, ಅವಿಶ್ವಾಸ ನಿರ್ಣಯ ಕುರಿತ ಚರ್ಚೆಯು ನಿರೀಕ್ಷಿಸಿದ ರೀತಿಯಲ್ಲಿಯೇ ನಡೆಯಿತು. ವಿರೋಧ ಪಕ್ಷಗಳ ಒಕ್ಕೂಟದಿಂದಾಗಲಿ, ಆಡಳಿತ ಪಕ್ಷದ ಕಡೆಯಿಂದಾಗಲಿ ಹೊಸದಾಗಿ ಏನೂ ಪ್ರಸ್ತಾಪವಾಗಲಿಲ್ಲ. ಚರ್ಚೆಯ ಮೂಲಕ ಎದುರಾಳಿ ಪಕ್ಷದವರನ್ನು ಸೋಲಿಸಬೇಕು ಎಂಬುದೇ ಎರಡೂ ಕಡೆಯವರ ಗುರಿಯಾಗಿತ್ತು. ಆದರೆ ಇಬ್ಬರೂ ಪೂರ್ತಿ ಯಶಸ್ಸು ಕಾಣಲಿಲ್ಲ. ಇಡೀ ಚರ್ಚೆಯಲ್ಲಿ ಆವೇಶ ಹೆಚ್ಚಾಗಿತ್ತು, ಗಟ್ಟಿತನ ಕಡಿಮೆ ಇತ್ತು. ವಿಚಾರವೊಂದರ ಸಮರ್ಥನೆಗೆ ಮನವೊಲಿಕೆಯ ಧಾಟಿಯಲ್ಲಿ ವಾದ ಮಂಡಿಸುವ ಬದಲಿಗೆ, ವಿರೋಧಿಗಳನ್ನು ಹಾಸ್ಯ ಮಾಡುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು.

ಚುರುಮುರಿ



ಒನ್ ಲೈನ್ ಸ್ಟೋರಿ!

• ಬಿ.ಎನ್.ಮಲ್ಲೇಶ್

ಹೊಸ ನ್ಯೂಸ್ ಚಾನೆಲ್ ವರದಿಗಾರನಾಗಲು ಸಂದರ್ಶನಕ್ಕೆ ಹೋಗಿದ್ದ ತೆಪರೇಸಿ. ಸಂದರ್ಶಕರು ಫಟಾಫಟ್ ಪ್ರಶ್ನೆಗಳನ್ನು ಕೇಳಿದರು.

'ಮುಂದಿನ ವರ್ಷ ಮತ್ತೆ ಬರ್ತೀನಿ... ಇದು ಯಾರ ಮಾತು?'

'ಮೌನವ್ರತ ಹಿಡಿದವರ ಮಾತು ಸರ್' ತೆಪರೇಸಿ ಉತ್ತರಕ್ಕೆ ಸಂದರ್ಶಕರು ನಕ್ಕು ತಲೆದೂಗಿದರು.

'ನಾವು ಐದು ಕೊಡ್ತೀವಿ, ನೀವು ಒಂದು ಕೊಡಿ... ಹೀಗೆಂದರೆ ಏನು?'

'ಗ್ಯಾರಂಟಿಗಳು. ನಾವು 5 ಗ್ಯಾರಂಟಿ ಕೊಡ್ತೀವಿ, ನೀವು ಒಂದು ವೋಟು ಕೊಡಿ ಅಂತ ಅರ್ಥ'.

'ಖುಷಿಯಿಂದ ಮಾಡಿಸ್ಕೊಳ್ಳೋ ಆಪರೇಷನ್ ಯಾವುದು?'

'ರಾಜಕಾರಣಿಗಳು ಮಾಡೋ ಆಪರೇಷನ್ ಸರ್, ಆಪರೇಷನ್ನೂ ಮಾಡಿ ದುಡ್ಡೂ ಕೊಡ್ತಾರೆ'.

'ಓಕೆ, ಬಂಡೆ ಮತ್ತು ಬ್ರದರ್ ನಡುವಿನ ಗುದ್ದಾಟ ಒನ್‌ಲೈನ್‌ನಲ್ಲಿ ಹೇಳಿ'.

'ನೀನು ಡಿ.ಕೆ. ಆದ್ರೆ ನಾನು ಎಚ್.ಡಿ.ಕೆ.!'

'ಗುಡ್, ನಮ್ಮಿಂದಾನೇ ಸರ್ಕಾರ ನಡೀತಿರೋದು ಅಂತ ಹೇಳೋ ಧೈರ್ಯ ಯಾರಿಗಿದೆ?'

'ಕುಡುಕರಿಗೆ ಸರ್'.

'ವೆರಿ ಗುಡ್, ಇದು ನನ್ನ ಕೊನೇ ಚುನಾವಣೆ ಅಂದ್ರೆ ಏನರ್ಥ?'

'ಮುಂದಿನ ಚುನಾವಣೆಗೂ ನಿಲ್ತೀನಿ ಅಂತ ಅರ್ಥ'.

'ಯಾರಿಗೋ ಕೊಡ್ತೀವಿ, ಅದು ಇನ್ಯಾರಿಗೋ ತಲುಪುತ್ತೆ... ಏನದು?'

'ಫ್ಲೈಯಿಂಗ್ ಕಿಸ್ ಸರ್'.

'ಗುಡ್ ಆನ್ಸರ್. ಈಗ ತೆನೆಗೂ ಹೂವಿಗೂ ಏನು ವ್ಯತ್ಯಾಸ?'

'ಹೂವೇ ತೆನೆಯಾಗೋದು ಸರ್, ಅಂಥ ವ್ಯತ್ಯಾಸ ಏನಿಲ್ಲ'.

'ಅರ್ಥವಾಯ್ತು, 'ಸರ್ಕಾರದ ಕೆಲಸ ದೇವರ ಕೆಲಸ' ಅಂತ ಎಲ್ಲಿ ಬರೆದಿದೆ?'

'ವಿಧಾನಸೌಧದ ಮೇಲೆ ಸರ್, ಆದ್ರೆ ಆ ದೇವರು ಯಾರೂಂತ ಗೊತ್ತಿಲ್ಲ'.

'ಇರ್ಲಿ, ಅದೇ ತರ ನಮ್ ಟಿ.ವಿಗೂ ಒಂದು ಟ್ಯಾಗ್‌ಲೈನ್ ಹೇಳಿ'.

'ಸುದ್ದಿ ಉಚಿತ, ತಲೆ ಕೆಡೋದು ಖಚಿತ...' ಹೇಗಿದೆ ಸರ್?'

'ಯೂ ಆರ್ ಅಪಾಯಿಂಟೆಡ್!'

ಸಂಗತ

ವ್ಯಕ್ತಿತ್ವ ನಿರ್ಧರಿಸೀತೇ ಮೈಬಣ್ಣ?

ದೇಶದಲ್ಲಿ ಬಿಳಿ ಮೈಬಣ್ಣದ ಅಹಂಕಾರ ಹೇಗಿದೆಯೆಂದರೆ, ಒಬ್ಬ ಚುನಾಯಿತ ಪ್ರತಿನಿಧಿಯೇ ಇನ್ನೊಬ್ಬ ಜನಪ್ರತಿನಿಧಿಯ ಬಣ್ಣದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಾರೆ

• ದೀಪಾ ಹಿರೇಗುತ್ತಿ

ವ್ಯಕ್ತಿಗಳ ಬಣ್ಣ, ಎತ್ತರ, ದೇಹದ ಆಕಾರದಂತಹ ಸಂಗತಿಗಳನ್ನು ಮುಂದಿಟ್ಟುಕೊಂಡು ಅವರನ್ನು ಅವಮಾನ ಮಾಡುವ ಪ್ರವೃತ್ತಿ ಇಂದು ನಿನ್ನೆಯದಲ್ಲ. ಈ ಅಸಹ್ಯಕರ 'ಬಾಡಿ ಶೇಮಿಂಗ್' ದಿನೇದಿನೇ ಹೆಚ್ಚು-ತ್ತಿರುವುದನ್ನು ಗಮನಿಸುತ್ತಿದ್ದೇವೆ. ಇದು ಖಂಡಿತ ಆಕ್ಷೇಪಾರ್ಹ. ಬ್ರಿಟಿಷರನ್ನು ನಮ್ಮ ದೇಶದಿಂದ ಓಡಿಸಿ ಮುಕ್ಕಾಲು ಶತಮಾನವೇ ಕಳೆದರೂ ಇನ್ನೂ ಅವರ ತೊಗಲಿನ ಬಣ್ಣವನ್ನೇ ನಮ್ಮ ಸೌಂದರ್ಯದ ಮಾನ-ದಂಡವನ್ನಾಗಿ ಮಾಡಿಕೊಂಡಿರುವುದು, ನಾವಿನ್ನೂ ಗುಲಾಮಗಿರಿಯ ಮನಃಸ್ಥಿತಿಯಿಂದ ಹೊರಗೆ ಬಂದಿಲ್ಲ ಎಂಬುದರ ಸ್ಪಷ್ಟ ಉದಾಹರಣೆ.

ನಮ್ಮ ದೇಶದಲ್ಲಂತೂ ಈ ಬಿಳಿ ಬಣ್ಣದ ಅಹಂಕಾರ ಹೇಗಿದೆಯೆಂದರೆ, ದೇಶದ ಪ್ರಥಮ ಪ್ರಜೆಯಾಗಲೀ ರಾಜ್ಯದ ಮಾಜಿ ಮುಖ್ಯಮಂತ್ರಿಯಾಗಲೀ ಕಪ್ಪಗಿದ್ದಾರೆ ಎನ್ನುವ ಒಂದೇ ಕಾರಣಕ್ಕೆ ಅವರನ್ನು ಅತ್ಯಂತ ಅಸಹ್ಯಕರವಾಗಿ ಟೀಕಿಸಲಾಗುತ್ತದೆ, ಟ್ರೋಲ್ ಮಾಡಲಾಗುತ್ತದೆ. ಒಬ್ಬ ಚುನಾಯಿತ ಜನಪ್ರತಿನಿಧಿಯೇ ಇನ್ನೊಬ್ಬ ಜನಪ್ರತಿನಿಧಿಯ ಬಣ್ಣದ ಬಗ್ಗೆ ಅವಹೇಳನ-ಕಾರಿಯಾಗಿ ಮಾತನಾಡುತ್ತಾರೆ.


ಈ ಬಿಳಿಬಣ್ಣದ ಮೋಹ ಜಗತ್ತಿನ ಯಾವ ದೇಶವನ್ನೂ ಬಿಟ್ಟಿಲ್ಲ. ಬಣ್ಣದ ಕಾರಣಕ್ಕಾಗಿ ಜಗತ್ತಿನಲ್ಲಿ ಆದ ಅನ್ಯಾಯಗಳನ್ನು, ಅಮಾನವೀಯ ಸಂಗತಿಗಳನ್ನು ಲೆಕ್ಕ ಹಾಕಲು ಸಾಧ್ಯವೇ? ಮೈಬಣ್ಣ ಕಪ್ಪು ಎನ್ನುವ ಒಂದೇ ಕಾರಣಕ್ಕೆ ನಮ್ಮಂತಹದೇ ಮನುಷ್ಯರು ಶತಶತಮಾನಗಳ ಕಾಲ ಪ್ರಾಣಿಗಳಿಗಿಂತಲೂ ಕನಿಷ್ಠವಾಗಿ ಬದುಕಿ ಇತಿಹಾಸದ ಅದೆಷ್ಟೋ ಪುಟಗಳು ಕ್ರೌರ್ಯ ಮತ್ತು ಕಣ್ಣೀರಿನಿಂದ ಬರೆಯಲ್ಪಟ್ಟಿವೆ. ನಮ್ಮ ದೇಶದಲ್ಲಿ ಜಾತಿ ವ್ಯವಸ್ಥೆಯ ಜತೆ ಹಾಸುಹೊಕ್ಕಾಗಿರುವ ಈ ಬಣ್ಣ ಮಾಡಿರುವ ದುರಂತಗಳು ಒಂದೆರಡಲ್ಲ. ಬಣ್ಣದ ಆಧಾರದ ಮೇಲೆ ಸೌಂದರ್ಯವನ್ನು, ಸ್ವಭಾವವನ್ನು ಅಳೆಯುವುದು ಬಲು ಹಳೆಯ ಸಂಗತಿ. ಕಪ್ಪು ಬಣ್ಣದ ಕೃಷ್ಣನನ್ನು ನೀಲಿ ಬಣ್ಣದಲ್ಲಿ ಚಿತ್ರಿಸುವುದಕ್ಕೂ ಕಾರಣ, ಕಪ್ಪಿನ ಬಗ್ಗೆ ನಮಗೆ ಇರುವ ಅವಜ್ಞೆ, ಅನಾದರ.

ಬೆಳ್ಳಗಿರುವವರ ಬಗ್ಗೆ 'ತೆಳ್ಳಗೆ ಬೆಳ್ಳಗೆ ಚೆನ್ನಾಗಿದ್ದಾಳೆ' ಎಂದು, ಕಪ್ಪಗಿರುವವರಿಗೆ 'ಕಪ್ಪಗಿದ್ದರೂ ಲಕ್ಷಣವಾಗಿದ್ದಾಳೆ' ಎಂಬ ಮಾತನ್ನು ಹೇಳಲಾಗುತ್ತದೆ. ಎರಡು ವರ್ಷದ ಹಿಂದೆ ಬಂಗಾಳಿ ನಟಿ ಶ್ರುತಿ ದಾಸ್ ತಮ್ಮ ಮೈಬಣ್ಣವನ್ನು ಕೆಟ್ಟದಾಗಿ ಟ್ರೋಲ್ ಮಾಡುವವರಿಂದ ಬೇಸತ್ತು ಸೈಬರ್ ಪೊಲೀಸರಿಗೆ ದೂರು ಕೊಟ್ಟಿದ್ದರು. ಕಪ್ಪಗಿರುವುದು ಎಂದರೆ ಒಂದು ನಕಾರಾತ್ಮಕ ಅಂಶ ಎಂಬಂತೆ ಅಭಿಪ್ರಾಯ ರೂಪಿಸಲಾಗುತ್ತಿದೆ. ಇನ್ನು ನಮ್ಮ ಫೇರ್‌ನೆಸ್ ಕ್ರೀಮುಗಳ ಜಾಹೀರಾತುಗಳಂತೂ ಇದಕ್ಕೆ ಮತ್ತಷ್ಟು ಉತ್ತೇಜನ ನೀಡುತ್ತವೆ. ನಾವು ಕಪ್ಪು ಎಂಬ ಕೀಳರಿಮೆಯಿಂದ ನರಳಿದಷ್ಟೂ ಆ ಕಂಪನಿಗಳ ಲಾಭ ಮುಗಿಲುಮುಟ್ಟುತ್ತಲೇ ಇರುತ್ತದೆ!

ಹಾವಾದರೂ ಬೇರೆಯವರು ತೊಂದರೆ ಕೊಟ್ಟಾಗ ವಿಷ ಕಕ್ಕುತ್ತದೆ, ಆದರೆ ಈ ಬಣ್ಣದ ಹಿರಿಮೆಯ ವಿಷ ತುಂಬಿಕೊಂಡ ಜನರಿಗೆ ಅದನ್ನು ಕಕ್ಕಲು ಯಾವ ಸಂಕೋಚವೂ ಇಲ್ಲ. ತಮಾಷೆಯೆಂದರೆ, ಒಂದೇ ಜಾತಿಯ ಜನರೂ ಬಣ್ಣದ ಕಾರಣದಿಂದ ಅವರದ್ದೇ ಜಾತಿಯ ಜನರಿಂದ ತಾರತಮ್ಯ ಅನುಭವಿಸುತ್ತಾರೆ! ಯಾವುದೇ ಜಾತಿಯಿರಬಹುದು. ಅವರವರಲ್ಲೇ ಇರುವ ಒಳಪಂಗಡಗಳಲ್ಲಿ ಕೆಲವರು ಬೆಳ್ಳಗೂ ಕೆಲವರು ಕಪ್ಪಗೂ ಇರುತ್ತಾರೆ. ಕಪ್ಪಗಿರುವ ಪಂಗಡಗಳಿಗೆ ಕಡಿಮೆ ಮರ್ಯಾದೆ, ಬೆಳ್ಳಗಿರುವವ-ರಿಗೆ ಗೌರವ. ಇನ್ನು ಬಣ್ಣದ ಬಗೆಗಿನ ಪೂರ್ವಗ್ರಹವು ವೈದ್ಯರು, ಉಪನ್ಯಾಸಕರು, ಶಿಕ್ಷಕರು, ದೊಡ್ಡ ಹುದ್ದೆಯ ಅಧಿಕಾರಿಗಳು, ಲೇಖಕರು ಎಲ್ಲರಲ್ಲೂ ಇರುವುದು ನೋವಿನ ವಿಚಾರ.

ವ್ಯಕ್ತಿಯೊಬ್ಬರಿಗೆ ಮಾಡುವ ಅವಮಾನ ಒಂದು ಸಮುದಾಯದ ಅಥವಾ ಒಂದು ಭೂಪ್ರದೇಶದ ಅವಹೇಳನವೇ ಆಗಿರುತ್ತದೆ. ಉತ್ತರ ಭಾರತೀಯರಿಗೆ ದಕ್ಷಿಣ ಭಾರತೀಯರ ಬಗ್ಗೆ ಹಗುರ ಭಾವ, ಯುರೋಪಿಯನ್ನರಿಗೆ ಭಾರತೀಯರ ಕುರಿತು ಇದೇ ಭಾವ ಇದೆ. ಈ ಬಣ್ಣದ ಕುರಿತ ಅಹಂ ವಿಶ್ವವ್ಯಾಪಿಯಾದದ್ದು.

ಬಣ್ಣದ ಬಗೆಗಿನ ಅವಹೇಳನದಿಂದ ಅದೆಷ್ಟೋ ಮಕ್ಕಳು ಕೀಳರಿಮೆಗೆ ಒಳಗಾಗುತ್ತಾರೆ. ವೀನಸ್ ವಿಲಿಯಮ್ಸ್ ಮತ್ತು ಸೆರೆನಾ ವಿಲಿಯಮ್ಸ್ ಗ್ರ್ಯಾನ್‌ಸ್ಲಾಮ್‌ಗಳನ್ನು ಗೆಲ್ಲುತ್ತಿದ್ದಾಗಲೂ ಅವರ ಮೇಲೆ ಜನಾಂಗೀಯ ನಿಂದನೆಗಳು ಸಾಮಾನ್ಯವಾಗಿದ್ದವು. ಅವರ ತಂದೆಯ ಬೆಂಬಲದಿಂದ ಆ ಸಹೋದರಿಯರು ಅವನ್ನೆಲ್ಲ ಮೀರಿ ಟೆನಿಸ್ ಜಗತ್ತನ್ನು ಆಳಿದರು. ಇದೇ ರೀತಿ, ಬಣ್ಣದಲ್ಲೇನಿದೆ, ಇರುವುದೆಲ್ಲ ನಮ್ಮ ವ್ಯಕ್ತಿತ್ವದಲ್ಲಿ ಎಂಬ ಸತ್ಯವನ್ನು ನಮ್ಮ ಯುವಜನಾಂಗ ಎದೆಯಲ್ಲಿಟ್ಟುಕೊಂಡು ಮುಂದುವರಿಯಬೇಕು. ಈ ಭಾವನೆಯನ್ನು, ಆತ್ಮವಿಶ್ವಾಸವನ್ನು ಮಕ್ಕಳಲ್ಲಿ ಬೆಳೆಸುವ ಜವಾಬ್ದಾರಿ ಸಮಾಜದ ಪ್ರತಿಯೊಬ್ಬ ನಾಗರಿಕನದ್ದೂ ಹೌದು.



ಜನಪದ ಹಾಡೊಂದರಲ್ಲಿ ಗಂಗೆಗೂ ಗೌರಿಗೂ ಜಗಳ ಆಗುತ್ತದೆ. ಇಲ್ಲಿ ಗಂಗೆ ಬೆಸ್ತರ ಹುಡುಗಿ. ಗೌರಿಯು ಗಂಗೆಗೆ ಆಕೆಯ ಕಪ್ಪು ಮೈಬಣ್ಣವನ್ನು ಮುಂದಿಟ್ಟು ಜರಿಯುತ್ತಾಳೆ. ಅದಕ್ಕೆ ಗಂಗೆಯು ನೀನಿಟ್ಟಿರುವ ತಿಲಕವು ಕಪ್ಪಲ್ಲವೇ, ನೀನುಟ್ಟ ಸೀರೆಯು ಕಪ್ಪಲ್ಲವೇ, ನಿನ್ನ ಜಡೆಮುಡಿ ಕಪ್ಪಲ್ಲವೇ, ನಿನ್ನ ಕಣ್ಣುಬ್ಬು ಕಪ್ಪಲ್ಲವೇ, ಮಳೆ ಕರಿಯೋ ಮೋಡವು ಕಪ್ಪಲ್ಲವೇ, ಘಮ್ಮೆನ್ನುವ ಕಸ್ತೂರಿ ಕಪ್ಪಲ್ಲವೇ, ತಾಕತ್ತು ಕೊಡುವ ರಾಗಿಮುದ್ದೆ ಕಪ್ಪಲ್ಲವೇ, ಹಾಲು ಕೊಡುವ ಕಾಮಧೇನು ಕಪ್ಪಲ್ಲವೇ, ಬಿಳಿಯಾದರೆ ಏನು ಬಂತು, ಕಪ್ಪಾದರೇನಾಯಿತು, ನಾನೇನೂ ಹೆದರುವವಳಲ್ಲ ಮತ್ತು ಬೆದರುವವಳಲ್ಲ ಎಂದು ತಿರುಗೇಟು ನೀಡುತ್ತಾಳೆ.

ಜನಪದರು ಗಂಗೆಯ ಬಾಯಲ್ಲಿ ಹೇಳಿಸಿದ ಈ ವಿವೇಕದ ನುಡಿಗಳು ಬಣ್ಣದ ಆಧಾರದಲ್ಲಿ ವ್ಯಕ್ತಿತ್ವವನ್ನು ನಿರ್ಧರಿಸುವ, ಆಡಿಕೊಳ್ಳುವ ಜನರಿಗೆ ಪಾಠವಾಗಲಿ. ಗಂಗೆಯ ಆತ್ಮವಿಶ್ವಾಸ ಜಗದಗಲ ಹಬ್ಬಲಿ.

ವಾಚಕರ ವಾಣಿ

ಬರ ಪರಿಹಾರ: ಸಮನ್ವಯ ಅಗತ್ಯ

ಬರ ಪರಿಹಾರ ನಿಯಮ, ಮಾನದಂಡಗಳಲ್ಲಿ ಬದಲಾವಣೆ ಮಾಡುವಂತೆ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆದಿರುವುದಾಗಿ ವರದಿಯಾಗಿದೆ. ಬರ ನಿರ್ವಹಣಾ ಕೈಪಿಡಿಯು 2016ರದ್ದು. ಈಗಿನ ಕೆಲ ವರ್ಷಗಳಲ್ಲಿ ಮಳೆ ಯಾವಾಗ ಬರುತ್ತದೆ, ಎಲ್ಲಿ, ಎಷ್ಟು ಎಂದು ಅಂದಾಜಿಸುವುದು ಭಾರತೀಯ ಹವಾಮಾನ ಇಲಾಖೆಗೂ (ಐ.ಎಂ.ಡಿ.) ಕಷ್ಟವಾಗುತ್ತಿದೆ. ದೀರ್ಘಕಾಲದ ಸಾಮಾನ್ಯ ಮಟ್ಟಕ್ಕೆ ಹೋಲಿಸುವುದು ತರ್ಕಬದ್ಧ ಎನಿಸುತ್ತಿಲ್ಲ. ಕರ್ನಾಟಕದಲ್ಲಿ ಈ ಹಂಗಾಮಿನ ಸ್ಥಿತಿ ಅನಿಶ್ಚಿತ ಘಟ್ಟದಲ್ಲಿದೆ. ಮಧ್ಯ, ದಕ್ಷಿಣ ಒಳನಾಡು ಪ್ರದೇಶಗಳಲ್ಲಿ ಮಳೆಯ ನಂತರವೂ ಕೊರತೆ ಉಂಟಾಗಿದೆ. 'ಬಿತ್ತನೆ ಮುಗಿದಿದೆ' ಎಂದು ಪ್ರಮಾಣಪತ್ರ ನೀಡಿದಾಗ ಮಾತ್ರ ಪರಿಹಾರ ಪ್ರಕ್ರಿಯೆ ಆರಂಭವಾಗುವುದಾದರೆ ತಡ ಆಗಬಹುದು. 2006ರಲ್ಲಿ ಆಗಸ್ಟ್ ಕೊನೇ ಹೊತ್ತಿಗೆ ಪ್ರವಾಹ ಪರಿಹಾರದ ಮೊದಲ ಕಂತು ಬಿಡುಗಡೆಯಾದರೆ, 102ಕ್ಕೂ ಹೆಚ್ಚಿನ ತಾಲ್ಲೂಕುಗಳಲ್ಲಿ ಬರಕ್ಕೆ ಸಮೀಪದ ಸ್ಥಿತಿ ಇದ್ದು ಘೋಷಣೆ ಬಾಕಿ ಇತ್ತು. 2009ರಲ್ಲೂ ಆಗಸ್ಟ್ 15ರ ವೇಳೆಗೆ ದಕ್ಷಿಣ ಭಾರತದ ವಾಡಿಕೆ ಮಳೆಯ ಪ್ರಮಾಣದಲ್ಲಿ ಶೇ 68ರಷ್ಟು ಕೊರತೆ ಇದ್ದು, ಇದನ್ನು ಪೂರ್ಣವಾಗಿ ತುಂಬಿಕೊಳ್ಳುವುದು ಅಸಾಧ್ಯ ಎಂದು ಹವಾಮಾನ ಇಲಾಖೆಯೇ ಹೇಳಿತ್ತು.

ರಾಜ್ಯ ಸರ್ಕಾರ ಗಂಭೀರ ಗಮನ ನೀಡುತ್ತಿಲ್ಲ ಎಂದು ವಿರೋಧ ಪಕ್ಷದ ನಾಯಕರು ಆಪಾದಿಸುವುದು, ಬರ ಘೋಷಣೆ ಮಾಡಿ 'ಕೇಂದ್ರ ಸರ್ಕಾರ ತಂಡ ಕಳುಹಿಸಿಲ್ಲ' ಎಂದು ಇಲ್ಲಿನ ಸರ್ಕಾರ ದೂರುವುದು, ಆಮೇಲೆ ಬಿಡುಗಡೆಯಾದ ಮೊತ್ತದ ಬಗೆಗೆ ಟೀಕೆ- ಇದೆಲ್ಲವನ್ನೂ ನೋಡಿದ್ದೇವೆ. ಮಳೆ ಕೊರತೆ ಎಷ್ಟು, ಬೆಳೆ ನಷ್ಟ ಎಷ್ಟು ಎಂಬುದನ್ನು ತಳಮಟ್ಟದಲ್ಲಿ ನಿಷ್ಕರ್ಷಿಸುವುದೇ ಕಷ್ಟ. ಈ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯ ಹಾಗೂ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ ಒಮ್ಮತಕ್ಕೆ ಬರಬೇಕು. ಬರ ನಿರ್ವಹಣಾ ಕೇಂದ್ರ ಹಾಗೂ ರಾಜ್ಯ ಪ್ರಾಧಿಕಾರಗಳ ಸಮನ್ವಯವೂ ಅಗತ್ಯ. ಹಿಂಗಾರು ಆರಂಭದ ಮೊದಲೇ ಪ್ರಕ್ರಿಯೆಗಳು ಮುಗಿಯಲಿ.

ಎಚ್.ಎಸ್.ಮಂಜುನಾಥ, ಬೆಂಗಳೂರು

ನಂದಿನಿ ಮತ್ತು ಗಣಿತ!

ನಂದಿನಿ ಮೊಸರಿನ ದರವನ್ನು ಇತ್ತೀಚೆಗೆ ಲೀಟರ್‌ಗೆ ₹ 47ರಿಂದ ₹ 50ಕ್ಕೆ ಏರಿಸಿರುವುದೇನೊ ಸರಿ. ಆದರೆ ಅರ್ಧ ಲೀಟರ್ ಮೊಸರಿನ ಬೆಲೆ ₹ 26 ಇದೆ. ಅರ್ಧ ಲೀಟರ್ ಪ್ಯಾಕೆಟ್ಟಿನಲ್ಲಿ ಕೊಡುವ ಮೊಸರಿಗೂ ಒಂದು ಲೀಟರ್ ಪ್ಯಾಕೆಟ್ಟಿನಲ್ಲಿ ಬರುವ ಮೊಸರಿಗೂ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಒಂದು ಲೀಟರ್‌ಗೆ ₹ 50ರ ಲೆಕ್ಕದಲ್ಲಿ ಅರ್ಧ ಲೀಟರ್‌ಗೆ ಸರಿಯಾಗಿ 25 ರೂಪಾಯಿ ಪಡೆದರೆ ಕೊಳ್ಳುವವರು ಕೂಡ ಚಿಲ್ಲರೆಗಾಗಿ ಹುಡುಕಾಡದೇ ಕೊಡಬಲ್ಲರು. ಸಾಮಾನ್ಯವಾಗಿ ಅರ್ಧ ಲೀಟರ್ ಮೊಸರಿನ ಪೊಟ್ಟಣಗಳೇ ಹೆಚ್ಚಾಗಿ ಖರ್ಚಾಗುತ್ತವೆ ಎಂದು ಕೇಳಿ ತಿಳಿದಿದ್ದೇನೆ. ಆದರೆ ಅರ್ಧ ಲೀಟರ್ ಮೊಸರು ಕೊಳ್ಳುವ ಪ್ರತಿಯೊಬ್ಬ ಗ್ರಾಹಕನಿಂದ, ಪ್ರತಿ ಲೀಟರ್‌ಗೆ ತಕ್ಕಂತೆ ಏರಿಕೆಯಾಗಿರುವ ಮೊತ್ತದ ಜೊತೆಗೆ ಹೆಚ್ಚುವರಿಯಾಗಿ ಒಂದು ರೂಪಾಯಿ ಪಡೆಯುತ್ತಿರುವುದು ಎಷ್ಟು ಸರಿ?

ಸಿ.ವಿ.ಕೇಶವಮೂರ್ತಿ, ಮೈಸೂರು

ಟೊಮೆಟೊ ಸಂಗ್ರಹ: ಬಳಕೆಯಾಗಲಿ ತಂತ್ರಜ್ಞಾನ

ಕೇಂದ್ರ ಸರ್ಕಾರವು ಟೊಮೆಟೊ ಆಮದು ಮಾಡಿಕೊಳ್ಳುತ್ತಿರುವ ಬೆನ್ನಲ್ಲೇ ಮಾರುಕಟ್ಟೆಯಲ್ಲಿ ಟೊಮೆಟೊ ಬೆಲೆ ಇಳಿಮುಖವಾಗುತ್ತಿದೆ. ಇದರಿಂದ ಗ್ರಾಹಕರಿಗೆ ಖುಷಿಯಾಗುತ್ತಿದೆ. ಇದು ನಿರೀಕ್ಷಿತ! ದುಡಿಮೆಗೆ ತಕ್ಕ ಬೆಲೆ ಸಿಕ್ಕರೆ ಸಾಕು ಎಂದು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಕಷ್ಟಪಟ್ಟು ಟೊಮೆಟೊ ಬೆಳೆಯುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದರ ಬೆಲೆ ತೀವ್ರವಾಗಿ ಇಳಿಮುಖವಾಗದಂತೆ ರೈತರ ಹಿತ ಕಾಪಾಡಲು ಕೇಂದ್ರ ಸರ್ಕಾರದಲ್ಲಿ ಚಿಂತನೆ ನಡೆದಿದೆಯೇ?

ಟೊಮೆಟೊ ಕೆಡದಂತೆ ಮೂರ್ನಾಲ್ಕು ತಿಂಗಳುಗಳ ಕಾಲ ಕೊಠಡಿಯ ತಾಪಮಾನದಲ್ಲಿಯೇ ಸಂಗ್ರಹ ಮಾಡುವ ಸರಳ ತಂತ್ರಜ್ಞಾನವನ್ನು ತಾನು ಅಭಿವೃದ್ಧಿಪಡಿಸಿರುವುದಾಗಿ ಮೈಸೂರಿನಲ್ಲಿರುವ ಸಿಎಫ್‌ಟಿಆರ್‌ಐ ಸಂಸ್ಥೆಯು ಈ ಹಿಂದೆ ಹೇಳಿಕೊಂಡಿತ್ತು. ಇಂಥ ಸಂಶೋಧನೆಯ ಫಲವನ್ನು ಪ್ರಯೋಗಾಲಯದಿಂದ ರೈತರ ತೋಟಗಳಿಗೆ ತರಲು ಕೇಂದ್ರ ಸರ್ಕಾರ ಪ್ರಯತ್ನಪಡುವ ಮೂಲಕ ರೈತರ ನೆರವಿಗೆ ಬರಬಹುದಲ್ಲವೇ?

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಗ್ಯಾರಂಟಿ ಮಂತ್ರ ಜಪಿಸಿದರಷ್ಟೇ ಸಾಲದು

ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ಎಡರುತೊಡರುಗಳನ್ನು ವೈ.ಗ.ಜಗದೀಶ್ ಅವರ ಲೇಖನ (ಪ್ರ.ವಾ., ಆ. 16) ಸಕಾಲಿಕವಾಗಿ ತೆರೆದಿಟ್ಟಿದೆ. ಬಿಜೆಪಿ ನೇತೃತ್ವದ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಲೇ ಅಧಿಕಾರ ಹಿಡಿದ ಕಾಂಗ್ರೆಸ್ ಪಕ್ಷವು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವುದಕ್ಕಷ್ಟೇ ಗಮನ ನೀಡುತ್ತಿದೆಯೇ ವಿನಾ ಜನಸಾಮಾನ್ಯರ ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ಹಿಂದಿನ ಸರ್ಕಾರದ ಅವಧಿಯಲ್ಲಿ ಪೂರ್ಣಗೊಂಡ ಹಾಗೂ ಅರ್ಧಕ್ಕೆ ನಿಂತಿರುವ ರಸ್ತೆ, ಕುಡಿಯುವ ನೀರು, ಒಳಚರಂಡಿ ಸೇರಿದಂತೆ ಮೂಲ ಸೌಕರ್ಯಗಳ ಕಾಮಗಾರಿಗಳಿಗೆ ಬಿಲ್ ಪಾವತಿಸದೆ ರಾಜಕಾರಣದಲ್ಲಿ ತೊಡಗಿರುವುದು ವಿವೇಕದ ಲಕ್ಷಣವಲ್ಲ.

ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು, ಸರ್ಕಾರ ಎಚ್ಚರಿಕೆಯಿಂದ ಹೆಜ್ಜೆ ಇಡದಿದ್ದಲ್ಲಿ ಜನರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ. ಇಂತಹ ಕಾಮಗಾರಿಗಳ ಬಗೆಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ವಾಸ್ತವ ವರದಿ ತರಿಸಿಕೊಂಡು ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ಕೆಲಸವನ್ನು ಮಾಡಬಹುದು. ಇದರ ಜೊತೆಗೆ, ರಾಜ್ಯ ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳನ್ನು ಮಾತು ಕೊಟ್ಟಂತೆ ಹಂತ ಹಂತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಶಾಸಕರು ಬರೀ ಗ್ಯಾರಂಟಿ ಮಂತ್ರಗಳನ್ನು ಜಪಿಸುತ್ತಾ ಕೂರದೆ ಕ್ಷೇತ್ರ ಪ್ರವಾಸ ಕೈಗೊಳ್ಳಬೇಕು. ಜನಸಾಮಾನ್ಯರ ಬವಣೆ ಅರಿತು, ಬದ್ಧತೆಯಿಂದ ಕರ್ತವ್ಯ ನಿರ್ವಹಿಸಲು ಮುಂದಾಗಬೇಕು.

ಪುಟ್ಟದಾಸು, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.




ತೆರಿಗೆ ಕಟ್ಟಿದರೂ ಹೆದ್ದಾರಿ ಬಳಕೆಗೆ ಶುಲ್ಕ

ವಾಹನ ಖರೀದಿ ವೇಳೆ ಅದರ ಎಕ್ಸ್‌ಷೋರೂಂ ಬೆಲೆಯ ಮೇಲೆ ಶೇ 32ರಿಂದ ಶೇ 50ರವರೆಗೂ ತೆರಿಗೆ (ಜಿಎಸ್‌ಟಿ ಮತ್ತು ಸೆಸ್ ಒಳಗೊಂಡು), ನೋಂದಣಿ ವೇಳೆ ರಸ್ತೆ ತೆರಿಗೆ ಕಟ್ಟಲಾಗುತ್ತದೆ. ಇದರ ಜತೆಯಲ್ಲಿ ಡೀಸೆಲ್ ಮತ್ತು ಪೆಟ್ರೋಲ್ ಮೇಲೂ ರಸ್ತೆ ಮತ್ತು ಮೂಲಸೌಕರ್ಯ ಸೆಸ್, ಹೆಚ್ಚುವರಿ ಅಬಕಾರಿ ಸುಂಕಗಳನ್ನು ಕಟ್ಟಲಾಗುತ್ತದೆ. ಇಷ್ಟೆಲ್ಲಾ ಸ್ವರೂಪದ ತೆರಿಗೆ ಕಟ್ಟಿದ್ದರೂ, ರಾಷ್ಟ್ರೀಯ ಹೆದ್ದಾರಿ ಮತ್ತು ಆಯ್ದ ರಾಜ್ಯ ಹೆದ್ದಾರಿಗಳನ್ನು ಬಳಸಲು ಬಳಕೆದಾರರ ಶುಲ್ಕ (ಟೋಲ್) ಕಟ್ಟಬೇಕು. ಹೀಗೆ ಸಂಗ್ರಹಿಸುತ್ತಿರುವ ತೆರಿಗೆಯನ್ನು ಕೇಂದ್ರ ಸರ್ಕಾರವು ಅನ್ಯ ಉದ್ದೇಶಗಳಿಗೆ ಬಳಸುತ್ತಿರುವುದರಿಂದಲೇ ಹೆದ್ದಾರಿಗಳ ನಿರ್ಮಾಣಕ್ಕೆ ಅನುದಾನದ ಕೊರತೆ ಉಂಟಾಗುತ್ತಿದೆ. ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ಕಾನೂನಿನಲ್ಲಿ ಅಗತ್ಯ ತಿದ್ದುಪಡಿಗಳನ್ನು ಸರ್ಕಾರ ಮಾಡಿಕೊಂಡಿದೆಯಾದರೂ, ಅಂತಿಮವಾಗಿ ವಾಹನ ಮಾಲೀಕರು ಮತ್ತು ಬಳಕೆದಾರರು 'ಟೋಲ್' ಹೊರೆಯನ್ನು ಹೊರಬೇಕಾಗಿದೆ

• ಜಯಸಿಂಹ ಆರ್.

ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ರಸ್ತೆ ಸೆಸ್ ಎಂಬ ಹೆಚ್ಚುವರಿ ತೆರಿಗೆಯನ್ನು ಸಂಗ್ರಹಿಸುತ್ತಿತ್ತು. 1989ರಲ್ಲಿ ಜಾರಿಗೆ ಬಂದಿದ್ದ ಈ ತೆರಿಗೆಯ ಮೂಲಕ ಸಂಗ್ರಹಿಸಿದ ಹಣವನ್ನು ರಾಷ್ಟ್ರೀಯ ಹೆದ್ದಾರಿಗಳು ಮತ್ತು ಸೇತುವೆಗಳ ಅಭಿವೃದ್ಧಿಗೆ ಮಾತ್ರ ಬಳಸಬೇಕಿತ್ತು. ಹೀಗೆ ಸಂಗ್ರಹಿಸಿದ ಸೆಸ್ ಅನ್ನು ಸಂಪೂರ್ಣವಾಗಿ ಕೇಂದ್ರ ರಸ್ತೆ ನಿಧಿಗೆ ವರ್ಗಾಯಿಸಲಾಗುತ್ತಿತ್ತು. ಆ ನಿಧಿಯಲ್ಲಿನ ಹಣವನ್ನು ಬಳಸಿಕೊಂಡು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆ ಮಾಡುತ್ತಿತ್ತು. ಹೀಗಿದ್ದೂ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣಕ್ಕೆ ಅಗತ್ಯವಾದ ಅನುದಾನದ ಕೊರತೆಯನ್ನು ಖಾಸಗಿ ವಲಯದ ಭಾಗವಹಿಸುವಿಕೆಯಿಂದ ತುಂಬಿಕೊಳ್ಳಲಾಗುತ್ತಿತ್ತು. ಖಾಸಗಿಯವರ ಪಾಲುದಾರಿಕೆಯಿಂದ ನಿರ್ಮಿಸಿದ ರಾಷ್ಟ್ರೀಯ ಹೆದ್ದಾರಿಗಳಿಗೆ ಬಳಕೆದಾರರ ಶುಲ್ಕ ವಿಧಿಸಲಾಗುತ್ತಿತ್ತು. ಇದಕ್ಕಾಗಿ 2008ರ ಹೆದ್ದಾರಿ ಬಳಕೆದಾರರ ಶುಲ್ಕ ನಿಯಮಗಳನ್ನು ಜಾರಿಗೆ ತರಲಾಗಿತ್ತು. ಆದರೆ ಈಗ ದೇಶದಲ್ಲಿ ನಿರ್ಮಿಸಲಾಗುತ್ತಿರುವ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳಿಗೂ ಶುಲ್ಕ ವಿಧಿಸಲಾಗುತ್ತಿದೆ.

ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸಲಾಗುವ ರಸ್ತೆ ಸೆಸ್ ಅನ್ನು ಅನ್ಯ ಉದ್ದೇಶಗಳಿಗೂ ಬಳಸಿಕೊಳ್ಳಲು ಕೇಂದ್ರ ಸರ್ಕಾರವು 2018ರಲ್ಲಿ ಸಂಬಂಧಿತ ಕಾನೂನುಗಳಿಗೆ ತಿದ್ದುಪಡಿಗಳನ್ನು ಮಾಡಿಕೊಂಡಿತ್ತು. 2018ರಲ್ಲಿ ಜಾರಿಗೆ ತರಲಾದ ಹಣಕಾಸು ಮಸೂದೆಯಲ್ಲಿ 'ರಸ್ತೆ ಸೆಸ್' ನಿಯಮಗಳಿಗೆ ತಿದ್ದುಪಡಿ ತರಲಾಯಿತು. 'ರಸ್ತೆ ಸೆಸ್' ಎಂಬುದನ್ನು 'ರಸ್ತೆ ಮತ್ತು ಮೂಲಸೌಕರ್ಯ ಸೆಸ್' ಎಂದು ಬದಲಿಸಲಾಯಿತು. ಮೊದಲು ಈ ಸೆಸ್ ಅನ್ನು ರಾಷ್ಟ್ರೀಯ ಹೆದ್ದಾರಿ ಮತ್ತು ಸೇತುವೆಗಳ ನಿರ್ಮಾಣ ಮತ್ತು ನಿರ್ವಹಣೆಗಷ್ಟೇ ಬಳಸಲಾಗುತ್ತಿತ್ತು. 2018ರಲ್ಲಿ ತಿದ್ದುಪಡಿ ತರುವ ಮೂಲಕ ರೈಲು ಸೌಕರ್ಯ ಅಭಿವೃದ್ಧಿ, ವಿಮಾನ ನಿಲ್ದಾಣಗಳ ಅಭಿವೃದ್ಧಿ–ನಿರ್ವಹಣೆ, ಬಂದರುಗಳ ನಿರ್ಮಾಣ–ನಿರ್ವಹಣೆ, ಶುದ್ಧ ನೀರಿನ ಪೂರೈಕೆ ಯೋಜನೆ ಸೇರಿದಂತೆ ಅನ್ಯ ಸ್ವರೂಪದ ಮೂಲಸೌಕರ್ಯಗಳ ಅಭಿವೃದ್ಧಿಗೆ ಬಳಸಿಕೊಳ್ಳಲು ಅವಕಾಶ ಮಾಡಿಕೊಂಡಿದೆ. ಹೀಗಾಗಿ ಹೆದ್ದಾರಿ ಅಭಿವೃದ್ಧಿಗೆ ಈ ಸೆಸ್ ಅಡಿಯಲ್ಲಿ ರೂಪಿಸಲಾದ ನಿಧಿಯಲ್ಲಿ ಅಗತ್ಯ ಅನುದಾನ ಇಲ್ಲವಾಗಿದೆ.



• 2022ರ ಅಕ್ಟೋಬರ್‌ನಲ್ಲಿ ರಸ್ತೆ ಮತ್ತು ಮೂಲಸೌಕರ್ಯ ಸೆಸ್‌ನ ದರವನ್ನು ಕಡಿತ ಮಾಡಿದ್ದರಿಂದ, ಒಟ್ಟು ಸೆಸ್ ಸಂಗ್ರಹ ಕಡಿಮೆಯಾಗಿದೆ. 2023–24ನೇ ಸಾಲಿಗೂ ಅದೇ ದರವನ್ನು ಉಳಿಸಿಕೊಳ್ಳಲಾಗಿದೆ • ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಈ ಎರಡು ತೆರಿಗೆಗಳು ಅಲ್ಲದೆ, ಕಚ್ಚಾ ತೈಲದ ಮೇಲೆ ಸೆಸ್, ಮೂಲ ಎಕ್ಸೈಸ್ ಸುಂಕ, ಹೆಚ್ಚುವರಿ ಎಕ್ಸೈಸ್ ಸುಂಕಗಳನ್ನು ಕೇಂದ್ರ ಸರ್ಕಾರ ಸಂಗ್ರಹಿಸುತ್ತದೆ

ರಸ್ತೆ ಮತ್ತು ಮೂಲಸೌಕರ್ಯ ಸೆಸ್ ಮಾತ್ರವಲ್ಲದೆ, ಪೆಟ್ರೋಲ್ ಮತ್ತು ಡೀಸೆಲ್ ಮೇಲೆ 'ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ'ವನ್ನೂ ಕೇಂದ್ರ ಸರ್ಕಾರ ಸಂಗ್ರಹಿಸುತ್ತಿದೆ. ಈ ಎರಡೂ ತೆರಿಗೆಗಳನ್ನು ಕೇಂದ್ರ ಸರ್ಕಾರವು ರಾಜ್ಯಗಳೊಂದಿಗೆ ಹಂಚಿಕೊಳ್ಳುವಂತಿಲ್ಲ. ಬದಲಿಗೆ ಸಂಪೂರ್ಣವಾಗಿ ಕೇಂದ್ರ ಸರ್ಕಾರವೇ ಬಳಸಿಕೊಳ್ಳುತ್ತದೆ. ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ ಸಂಗ್ರಹವು ಈಚಿನ ವರ್ಷಗಳಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಎರಡೂ ಸ್ವರೂಪದ ತೆರಿಗೆಗಳ ಮೂಲಕ 2022–23ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ₹ 2ಲಕ್ಷ ಕೋಟಿಗೂ ಹೆಚ್ಚು ಮೊತ್ತವನ್ನು ಸಂಗ್ರಹಿಸಿದೆ. 2023–24ನೇ ಸಾಲಿನಲ್ಲಿ ರಸ್ತೆ ಮತ್ತು ಮೂಲಸೌಕರ್ಯ ಸೆಸ್ ಸಂಗ್ರಹದ ಗುರಿಯನ್ನು ಕಡಿತ ಮಾಡಲಾಗಿದೆ. ಆದರೆ, ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ ಸಂಗ್ರಹದ ಗುರಿಯನ್ನು ಹೆಚ್ಚಿಸಿಕೊಳ್ಳಲಾಗಿದೆ. ಎರಡೂ ತೆರಿಗೆಗಳ ಮೂಲಕ ಈ ಆರ್ಥಿಕ ವರ್ಷದಲ್ಲೂ ₹2.25 ಲಕ್ಷ ಕೋಟಿಗೂ ಹೆಚ್ಚು ಮೊತ್ತವನ್ನು ಸಂಗ್ರಹಿಸುವ ಗುರಿಯನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ. ಆದರೆ, ರಸ್ತೆಗಳು, ರಾಜ್ಯ ಹೆದ್ದಾರಿಗಳು, ರಾಷ್ಟ್ರೀಯ ಹೆದ್ದಾರಿ ಮತ್ತು ಸೇತುವೆಗಳ ಅಭಿವೃದ್ಧಿಗೆಂದು ತೆಗೆದಿರಿಸಿದ ಅನುದಾನ ₹1.07 ಲಕ್ಷ ಕೋಟಿ ಮಾತ್ರ.

ಆಧಾರ: ಹಣಕಾಸು ಕಾಯ್ದೆ–2002, ಹಣಕಾಸು ಕಾಯ್ದೆ–2018, ಕೇಂದ್ರ ಸರ್ಕಾರದ ಬಜೆಟ್‌ಗಳು, ಸಂಸತ್ತಿಗೆ ಹಣಕಾಸು ಸಚಿವಾಲಯ ನೀಡಿರುವ ಮಾಹಿತಿಗಳು, ಪಿಟಿಐ

ಹೆದ್ದಾರಿ ಶುಲ್ಕ ಸಂಗ್ರಹದಲ್ಲಿ ನಿಯಮ ಉಲ್ಲಂಘನೆ

ರಾಜ್ಯದ ಬೇರೆ–ಬೇರೆ ಜಿಲ್ಲೆಗಳನ್ನು ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಲವು ಟೋಲ್ ಸಂಗ್ರಹ ಘಟಕಗಳು ಇವೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಪ್ರಕಾರ ರಾಷ್ಟ್ರೀಯ ಹೆದ್ದಾರಿಗಳಲ್ಲಿ 60 ಕಿ.ಮೀ. ಅಂತರದ ಒಳಗೆ ಎರಡು ಟೋಲ್ ಘಟಕಗಳು ಇರಬಾರದು. 60 ಕಿ.ಮೀ. ಅಂತರದಲ್ಲಿ ಇರುವ ಎಲ್ಲಾ ಟೋಲ್‌ಗಳನ್ನು ತೆಗೆದುಹಾಕಲಾಗುತ್ತದೆ ಎಂದು ಸಚಿವ ನಿತಿನ್ ಗಡ್ಕರಿ ಅವರು ಹೇಳಿದ್ದರು. ಆದರೆ, ಇದಿನ್ನೂ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬಂದಿಲ್ಲ. ಜತೆಗೆ ರಾಜ್ಯದಲ್ಲಿನ ಕೆಲವು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಡಿಮೆ ಅಂತರ ಕ್ರಮಿಸಿದರೂ, ಟೋಲ್ ವ್ಯಾಪ್ತಿಯಲ್ಲಿನ ಇಡೀ ಹೆದ್ದಾರಿಗೆ ಅನ್ವಯವಾಗುವ ಶುಲ್ಕವನ್ನು ಭರಿಸಬೇಕು. ಶುಲ್ಕ ಸಂಗ್ರಹ ಸಂಬಂಧ ಇಂತಹ ಹಲವು ಸಮಸ್ಯೆಗಳು ರಾಜ್ಯದಲ್ಲಿವೆ.

- ಹೊಸಪೇಟೆ-ವಿಜಯಪುರ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಕೊಪ್ಪಳ ತಾಲ್ಲೂಕಿನ ಶಹಾಪುರ ಬಳಿ ಹಾಗೂ ಕುಷ್ಟಗಿ ತಾಲ್ಲೂಕಿನ ಕೆ. ಬೊದೂರು ಗ್ರಾಮದ ಬಳಿ ಟೋಲ್ ಗೇಟ್ ನಿರ್ಮಿಸಲಾಗಿದೆ. ಇದರ ನಡುವಿನ ಅಂತರ 50 ಕಿ.ಮೀ
- ರಾಷ್ಟ್ರೀಯ ಹೆದ್ದಾರಿ 67ರ ಹುಬ್ಬಳ್ಳಿ–ಹೊಸಪೇಟೆ ಮಾರ್ಗದಲ್ಲಿ ಕೊಪ್ಪಳ ತಾಲ್ಲೂಕಿನ ಹಿಟ್ನಾಳ ಗ್ರಾಮದ ಬಳಿ ಟೋಲ್ ನಿರ್ಮಿಸಲಾಗಿದೆ. ಇಲ್ಲಿಂದ 7 ಕಿ.ಮೀ. ದೂರದಲ್ಲಿ ಶಹಾಪುರ–ಕೆರೆಹಳ್ಳಿ ಬಳಿ ಇನ್ನೊಂದು ಟೋಲ್ ಇದೆ
- ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬ್ರಹ್ಮರಕೂಟ್ಲು (ಎನ್‌ಎಚ್ 75) ಟೋಲ್‌ಗೇಟ್ ಹಾಗೂ ಉಳ್ಳಾಲ ತಾಲ್ಲೂಕಿನ ತಲಪಾಡಿ (ಎನ್‌ಎಚ್ 66) ಟೋಲ್ ಗೇಟ್‌ಗಳ ನಡುವಿನ ಅಂತರ 45 ಕಿ.ಮೀ ಇದೆ. ರಾಷ್ಟ್ರೀಯ ಹೆದ್ದಾರಿ 66ರಲ್ಲಿರುವ ತಲಪಾಡಿ ಮತ್ತು ಉಡುಪಿ ಜಿಲ್ಲೆಯ ಗಡಿಭಾಗದಲ್ಲಿರುವ ಹೆಜಮಾಡಿ ಟೋಲ್‌ಗಳ ನಡುವಿನ ಅಂತರ 51 ಕಿ.ಮೀ ಮಾತ್ರ
- ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಬ್ರಹ್ಮಾವರ ತಾಲ್ಲೂಕಿನ ಸಾಸ್ತಾನ, ಕಾಪು ತಾಲ್ಲೂಕಿನ ಹೆಜಮಾಡಿ ಹಾಗೂ ಬೈಂದೂರು ತಾಲ್ಲೂಕಿನ ಶಿರೂರು ಟೋಲ್‌ಗೇಟ್‌ಗಳಿವೆ. 60 ಕಿ.ಮೀ ಅಂತರದಲ್ಲಿ ಮೂರು ಟೋಲ್‌ಗಳು ಕಾರ್ಯ ನಿರ್ವಹಿಸುತ್ತಿವೆ
- ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿ 65 ಇನ್ನೂ ದ್ವಿಪಥ ರಸ್ತೆಯಾಗಿಯೇ ಇದ್ದು, ಯಾವೊಂದು ಸೌಲಭ್ಯವೂ ಇಲ್ಲ. ಹೀಗಿದ್ದೂ ಇಲ್ಲಿ ಶುಲ್ಕ ಸಂಗ್ರಹಿಸಲಾಗುತ್ತಿದೆ
- ಮೈಸೂರು–ನಂಜನಗೂಡು ಗಡಿಭಾಗದ ಕಡಕೊಳ ಟೋಲ್ ಘಟಕದಲ್ಲಿ ನಾಲ್ಕು ಚಕ್ರದ ವಾಹನಗಳಿಗೆ ₹50ರಂತೆ ಟೋಲ್ ಸಂಗ್ರಹಿಸಲಾಗುತ್ತಿದೆ. ಸ್ಥಳೀಯರಿಗೆ ಈ ಶುಲ್ಕದಲ್ಲಿ ಶೇ 50 ವಿನಾಯಿತಿ ನೀಡಿದ್ದರೂ, ವಾಹನಗಳ ನೋಂದಣಿ ಸಂಖ್ಯೆ ಕಡ್ಡಾಯವಾಗಿ ಸ್ಥಳೀಯವಾಗಿ ಇರಬೇಕು ಎಂಬ ನಿಯಮ ಮಾಡಿದ್ದಾರೆ. ಇದರಿಂದಾಗಿ ಸ್ಥಳೀಯರು ಹಾಗೂ ಟೋಲ್ ಸಿಬ್ಬಂದಿ ನಡುವೆ ನಿತ್ಯ ಜಗಳ ಸಾಮಾನ್ಯ ಎಂಬಂತೆ ಆಗಿದೆ
- ಮೈಸೂರು ತಾಲ್ಲೂಕಿನ ತಿ. ನರಸೀಪುರ ಬಳಿ ಇರುವ ಎನ್‌ಎಚ್ 766 ಟೋಲ್‌ನಲ್ಲೂ ಯಾವುದೇ ಸೌಕರ್ಯ ಇರದಿದ್ದರೂ ದುಬಾರಿ ಶುಲ್ಕ ವಸೂಲಿ ಮಾಡಲಾಗುತ್ತಿದೆ ಎಂದು ಸಾರ್ವಜನಿಕರು ಆರೋಪಿಸುತ್ತಾರೆ
- ಬೆಂಗಳೂರು–ಮಂಗಳೂರು ಹೆದ್ದಾರಿ–75ರಲ್ಲಿ ಬೆಂಗಳೂರಿನಿಂದ ಹಾಸನಕ್ಕೆ ಬರುವಷ್ಟರಲ್ಲಿ 4 ಟೋಲ್ ಕೇಂದ್ರಗಳು ಸಿಗುತ್ತವೆ. ನೆಲಮಂಗಲ, ದೇವಿಹಳ್ಳಿ ಹಾಗೂ ಕಬ್ಬೈಲು (ಬೆಳ್ಳೂರು ಕ್ರಾಸ್), ಶಾಂತಿಗ್ರಾಮ ಸೇರಿದಂತೆ 160 ಕಿ.ಮೀ. ವ್ಯಾಪ್ತಿಯಲ್ಲಿ 4 ಟೋಲ್‌ಗೇಟ್‌ಗಳಿವೆ. ಶಾಂತಿಗ್ರಾಮದ ಬಳಿ ಸರ್ವೀಸ್ ರಸ್ತೆ ಸೇರಿದಂತೆ ಯಾವುದೇ ಅಗತ್ಯ ಸೌಕರ್ಯಗಳನ್ನು ಕಲ್ಪಿಸದೇ ಟೋಲ್ ವಸೂಲಿ ಮಾಡಲಾಗುತ್ತಿದೆ
- ತುಮಕೂರಿನ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಬಳಿಯ ಜಾಸ್ ಟೋಲ್ ದಾಟಿ ಜಮೀನಿಗೆ ಹೋಗಲು ರೈತರು ತಿಂಗಳ ಪಾಸ್ ಪಡೆಯಬೇಕಾಗಿದೆ. ಅದೇ ರೀತಿ ತಿಪಟೂರು ತಾಲ್ಲೂಕಿನ ಹತ್ಯಾಳು ಬಳಿ ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿ–206 ಟೋಲ್ ಪ್ಲಾಜಾ ಕಾಮಗಾರಿ ಪೂರ್ಣಗೊಳ್ಳದಿದ್ದರೂ ಟೋಲ್ ಸಂಗ್ರಹಿಸಲಾಗುತ್ತಿದೆ.
- ತುಮಕೂರಿನ ತಿಪಟೂರು ತಾಲ್ಲೂಕಿನ ಹತ್ಯಾಳು ಬಳಿ ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕುಂಠಿತವಾಗಿದೆ. ಅಗತ್ಯ ಸೌಲಭ್ಯ ಕಲ್ಪಿಸದೆ ಟೋಲ್ ಪಡೆಯುತ್ತಿದ್ದಾರೆ
- ತುಮಕೂರಿನಿಂದ ಬೆಂಗಳೂರಿನ ನಾಗಸಂದ್ರ ನಡುವೆ 60 ಕಿ.ಮೀ.ಗೂ ಕಡಿಮೆ ಅಂತರದಲ್ಲಿ ಮೂರು ಟೋಲ್ ಘಟಕಗಳು ಇವೆ

ಮಾಹಿತಿ: ಪ್ರಮೋದ, ಶಶಿಕಾಂತ ಎಸ್. ಶೆಂಬೆಳ್ಳಿ, ಪ್ರವೀಣ್‌ಕುಮಾರ್ ಪಿ.ವಿ, ಬಾಲಚಂದ್ರ ಎಚ್., ವಿಜಯಕುಮಾರ್ ಎಸ್.ಕೆ., ಆರ್.ಜಿತೇಂದ್ರ, ವಿ.ಸೂರ್ಯನಾರಾಯಣ, ಎಂ.ಎನ್.ಯೋಗೇಶ್, ಚಿದಂಬರ ಪ್ರಸಾದ್, ಬಸವರಾಜ ಸಂಪಳ್ಳಿ, ಜಿ.ಬಿ. ನಾಗರಾಜ್, ಮೈಲಾರಿ ಲಿಂಗಪ್ಪ

ಸಿನಿ ಬಿಟ್ಸ್



ನೀಲಿ ನೂಲಿನ ಪ್ರೇಮ ಕವಿತೆ

ರಕ್ಷಿತ್ ಶೆಟ್ಟಿ, ರುಕ್ಮಿಣಿ ವಸಂತ್

'ನಿರ್ದೇಶಕ ಹೇಮಂತ್ ರಾವ್ ನೀಲಿ ನೂಲಿನ ಮೂಲಕ ಬದುಕಿನ ಪ್ರೇಮ ಕವಿತೆಯನ್ನು ಬರೆದಿದ್ದಾರೆ. ಇಂತಹ ಸಿನಿಮಾ ನಿರ್ಮಾಣ ಮಾಡುವ ಮಟ್ಟಕ್ಕೆ ಬಂದಿರುವುದು ಖುಷಿ ಎನಿಸುತ್ತಿದೆ' ಎಂದು ಭಾವುಕರಾದರು ನಟ ರಕ್ಷಿತ್ ಶೆಟ್ಟಿ.

ರಕ್ಷಿತ್ ಶೆಟ್ಟಿ, ರುಕ್ಮಿಣಿ ವಸಂತ್ ಮುಖ್ಯಭೂಮಿಕೆಯಲ್ಲಿರುವ 'ಸಪ್ತಸಾಗರದಾಚೆ ಎಲ್ಲೋ' ಚಿತ್ರದ ಸೈಡ್–ಎ ಟ್ರೇಲರ್ ಬಿಡುಗಡೆಗೊಂಡಿದೆ. ಪರಂವಃ ಪಿಕ್ಚರ್ಸ್ ಈ ಸಿನಿಮಾ ನಿರ್ಮಿಸಿದ್ದು, ಹೇಮಂತ್ ರಾವ್ ಆ್ಯಕ್ಷನ್–ಕಟ್ ಹೇಳಿದ್ದಾರೆ. ಮನು ಮತ್ತು ಪ್ರಿಯಾಳ ನಡುವಿನ ಉತ್ಕಟ ಪ್ರೇಮಕಥೆಯಲ್ಲಿ ಒಂದಷ್ಟು ಟ್ವಿಸ್ಟ್ ಇದೆ, ಕೊಲೆಯಿದೆ, ದುಃಖವಿದೆ ಎಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಇಡೀ ಟ್ರೇಲರ್‌ನಲ್ಲಿ ಗಮನ ಸೆಳೆಯುತ್ತಿರುವುದು ಹೇಮಂತ್ ರಾವ್ ಅವರ ತಾಂತ್ರಿಕ ಕಸುಬುದಾರಿಕೆ. ಟ್ರೇಲರ್‌ನ ಪ್ರತಿ ಫ್ರೇಂ ಅನ್ನು ಬದುಕಿನ ಕವಿತೆಯಂತೆ ಕೆತ್ತಿದ್ದಾರೆ ಚಿತ್ರದ ನಿರ್ದೇಶಕರು. ನಾಯಕ ಮನು ಮತ್ತು ಪ್ರಿಯಾಳ ನಡುವಿನ ಪ್ರೀತಿಯಲ್ಲಿ ಮನುವಿನ ಮೌನವೇ ಹೆಚ್ಚು ಆವರಿಸಿಕೊಂಡಿದೆ.

'ಪ್ರತಿಯೊಬ್ಬರ ಬದುಕಿನಲ್ಲಿಯೂ ಒಂದು ಪ್ರೇಮಕಥೆ ಇರುತ್ತದೆ ಮತ್ತು ಅದು ಎಲ್ಲರಿಗೂ ಕನೆಕ್ಟ್ ಆಗುತ್ತದೆ. ತಾಂತ್ರಿಕವಾಗಿ ಸಾಧ್ಯವಾದಷ್ಟು ಉತ್ಕೃಷ್ಟವಾದ ಸಿನಿಮಾ ಕೊಡಲು ಯತ್ನಿಸಿರುವೆ. ಕ್ಲಾಸ್, ಮಾಸ್ ಯಾವುದನ್ನೂ ತಲೆಯಲ್ಲಿ ಇಟ್ಟುಕೊಳ್ಳದೆ ಪರಿಶುದ್ಧ ಪ್ರೇಮಕಥೆ ಹೇಳಿರುವೆ' ಎಂದರು ಹೇಮಂತ್ ರಾವ್.

ನಟನೆ ಕಡಿಮೆ ಮಾಡುವೆ: 'ಉಳಿದವರು ಕಂಡಂತೆ' ನಂತರ ನಿರ್ದೇಶಕ ರಾಜಿಯಾಗದೇ ಸಿನಿಮಾ ಮಾಡುವ ವೇದಿಕೆ ಸೃಷ್ಟಿಸಬೇಕೆಂದು ನಿರ್ಧರಿಸಿದೆ. ಹಾಗಾಗಿ ನಾನು ನಿರ್ದೇಶನದಿಂದ ದೂರ ಉಳಿದು ನಟನೆಯತ್ತ ಹೊರಳಿದೆ. ಪರಂವಃ ಈಗ ಒಂದು ಉತ್ತಮ ವೇದಿಕೆಯಾಗಿದೆ. ಹೀಗಾಗಿ ನಟನೆ ಕಡಿಮೆ ಮಾಡಬೇಕೆಂದು ನಿರ್ಧರಿಸಿರುವೆ. ನಿರ್ದೇಶನಕ್ಕೆ ಮರಳುತ್ತೇನೆ. ಆದಾಗ್ಯೂ ಹೇಮಂತ್ ಯಾವಾಗ ಕಥೆಯಿದೆ ಎಂದು ಬಂದರೂ ನಟನೆ ಮಾಡುತ್ತೇನೆ. ನನ್ನಷ್ಟೇ ಅವರೂ ಸಿನಿಮಾವನ್ನು ಪ್ರೀತಿಸುತ್ತಾರೆ. ಸಿನಿಮಾಗಿಂತ ನಾವ್ಯಾರೂ ದೊಡ್ಡವರಲ್ಲ ಎಂಬುದು ಗೊತ್ತಿದೆ' ಎಂದರು ರಕ್ಷಿತ್ ಶೆಟ್ಟಿ.

ಚೈತ್ರಾ ಆಚಾರ್ ಕೂಡ ಸಿನಿಮಾದ ಮತ್ತೋರ್ವ ನಾಯಕಿಯಾಗಿದ್ದು 'ಸೈಡ್–ಬಿ'ನಲ್ಲಿ ಕಾಣಿಸಿಕೊಂಡಿದ್ದಾರೆ. ಚರಣ್ ರಾಜ್ ಸಂಗೀತ, ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಚಿತ್ರಕ್ಕಿದೆ.

'ಆಪಲ್ ಕಟ್'ಗೆ ಸಿಂಧು ಗೌಡ ಆ್ಯಕ್ಷನ್–ಕಟ್



ಸಿಂಧು ಗೌಡ



ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ನಿರ್ದೇಶಕಿಯ ಪ್ರವೇಶವಾಗಿದೆ. 'ಆಪಲ್ ಕಟ್' ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುವ ಮೂಲಕ ನಿರ್ದೇಶಕ ರಾಜ್ ಕಿಶೋರ್ ಅವರ ಪುತ್ರಿ ಸಿಂಧು ಗೌಡ ಚಿತ್ರರಂಗ ಪ್ರವೇಶಿಸಿದ್ದಾರೆ. 'ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದೇನೆ. ಕಳೆದ 10 ವರ್ಷಗಳಲ್ಲಿ ಹಲವು ಜನಪ್ರಿಯ ಧಾರಾವಾಹಿಗಳಲ್ಲಿ ನಟಿಸಿದ್ದೇನೆ. ಹಿರಿತೆರೆಯಲ್ಲಿ ಈ ಸಿನಿಮಾ ನನ್ನ ಮೊದಲ ಪ್ರಯತ್ನ. ಐದು ಜನ ಗೆಳೆಯರ ಸುತ್ತ ನಡೆಯುವ ಕಥೆ. ಜೊತೆಗೆ ನಾನು ಮಾನವವಿಜ್ಞಾನ ಓದಿದ್ದು, ಚಿತ್ರದಲ್ಲಿ ಮಾನವವಿಜ್ಞಾನದ ಒಂದು ಅಂಶ ಸೇರಿಸಲಾಗಿದೆ' ಎಂದರು ಸಿಂಧು ಗೌಡ.


ಶಿಲ್ಪ ಪ್ರಸನ್ನ ಚಿತ್ರದ ನಿರ್ಮಾಪಕರು. ಹೊಸಬರಾದ ಸೂರ್ಯ ಗೌಡ, ಅಶ್ವಿನಿ ಪೋಲೆಪಲ್ಲಿ ನಾಯಕ–ನಾಯಕಿಯಾಗಿದ್ದಾರೆ. ವೀರ್ ಸಮರ್ಥ ಸಂಗೀತ, ರಾಜೇಶ್ ಗೌಡ ಛಾಯಾಗ್ರಹಣ ಹಾಗೂ ಸುಚೇಂದ್ರ ಎನ್. ಮೂರ್ತಿ ಸಂಕಲನವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜೈಲಿನಲ್ಲಿದ್ದ ಮಹಾತ್ಮ ಗಾಂಧೀಜಿ ಅವರಿಗೆ ಭತ್ಯೆ ನೀಡುವ ಕುರಿತು ಬ್ರಿಟಿಷರು (ಬಾಂಬೆ ಸರ್ಕಾರ) ಬರೆದ ನ್ಯಾಷನಲ್ ಆರ್ಕೈವ್ಸ್ ಆಫ್ ಇಂಡಿಯಾದಲ್ಲಿ ಲಭ್ಯ ಇರುವ ಪತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಪತ್ರದೊಂದಿಗೆ, 'ಮಹಾತ್ಮ ಗಾಂಧೀಜಿ ಅವರು 1930ರಂದು ಯೆರವಾಡ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿರುವಾಗ ಬ್ರಿಟಿಷರು ಅವರಿಗೆ ತಿಂಗಳಿಗೆ ₹100 'ಪಿಂಚಣಿ' ನೀಡುತ್ತಿದ್ದರು' ಎಂದು ಕಳೆದ ಅ.3ರಿಂದಲೂ ಪೋಸ್ಟ್‌ವೊಂದನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಗಾಂಧೀಜಿ ಅವರ ಆರೋಗ್ಯ ಹಾಗೂ ಅನುಕೂಲಕ್ಕಾಗಿ ಅವರಿಗೆ ತಿಂಗಳಿಗೆ ₹100 ಭತ್ಯೆ ನೀಡಲು ಬ್ರಿಟಿಷರು (ಬಾಂಬೆ ಸರ್ಕಾರ) ನಿರ್ಧರಿಸಿದ್ದರು. ಆದರೆ, ಗಾಂಧೀಜಿ ಅವರು ಬ್ರಿಟಿಷರ ಭತ್ಯೆಯನ್ನು ನಿರಾಕರಿಸಿದ್ದರು. ಈ ಸಂಬಂಧ ಬ್ರಿಟಿಷರಿಗೆ ಅವರು ಪತ್ರವನ್ನೂ ಬರೆದಿದ್ದರು. ಈ ಪತ್ರವು 'ದಿ ಕಲೆಕ್ಟೆಡ್ ವರ್ಕ್ ಆಫ್ ಮಹಾತ್ಮ ಗಾಂಧಿ ವಾಲ್ಯುಮ್ 49' ಪುಸ್ತಕದಲ್ಲಿ ಮುದ್ರಿತವಾಗಿದೆ. ಜೊತೆಗೆ, ಬ್ರಿಟಿಷರು ಗಾಂಧೀಜಿ ಅವರಿಗೆ ಮಾತ್ರವೇ ಇಂಥ ಭತ್ಯೆ ನೀಡುವ ನಿರ್ಧಾರ ಮಾಡಿರಲಿಲ್ಲ. ಆದ್ದರಿಂದ, ಇಡೀ ಪ್ರಕರಣದ ಅರ್ಧ ಮಾಹಿತಿಯನ್ನಷ್ಟೇ ಹಂಚಿಕೊಳ್ಳಲಾಗುತ್ತಿದ್ದು, ಗಾಂಧೀಜಿ ಅವರು ಬ್ರಿಟಿಷರಿಂದ ಪಿಂಚಣಿ ಪಡೆದುಕೊಳ್ಳುತ್ತಿದ್ದರು ಎಂಬುದು ಸುಳ್ಳು ಸುದ್ದಿ ಎಂದು 'ಲಾಜಿಕಲಿ ಫ್ಯಾಕ್ಟ್ಸ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.


ಗುಂಡಣ್ಣ



ನೀನು ಉದ್ಧಾರ ಆಗಲ್ಲ ಕಣೋ

ನುಡಿ ಬೆಳಗು





ಪ್ರೊ.ಎಂ. ಕೃಷ್ಣೇಗೌಡ

ಸೀನ ಸಿಕ್ಕಾಪಟ್ಟೆ ತರಲೆ. ಸ್ಕೂಲಿನಲ್ಲಿ ಓದೋದು ಬರೆಯೋದು ಬಿಟ್ಟು ಬೇರೆಲ್ಲಾ ಮಾಡುತ್ತಿದ್ದ. ರಾಜಪ್ಪ ತುಂಬಾ ಒಳ್ಳೆಯ ಮೇಷ್ಟ್ರು. ಆದರೂ ಇವನ ಕಾಟ ಅವರಿಗೆ ಸಾಕುಸಾಕಾಗಿ ಹೋಗಿತ್ತು. 'ಲೋ ಸೀನ, ನೀನು ಉದ್ಧಾರ ಆಗಲ್ಲ ಕಣೊ, ಬರ್ದಿಟ್ಕೊ ಬೇಕಾದ್ರೆ...' – ಅಂತಿದ್ರು ಮೇಷ್ಟ್ರು.

ಸೀನ 10ನೇ ತರಗತಿಯ ಪರೀಕ್ಷೇಲಿ ಕಾಪಿ ಮಾಡಲು ಹೋಗಿ ಸಿಕ್ಕಿಬಿದ್ದ. ರಾಜಪ್ಪನವರಿಗೆ ದೂರು ಹೋಯ್ತು. 'ನೋಡಿ ಸಾ, ಏನೋ ಒಂದಿಷ್ಟಗಲ ಚೀಟಿ ತಗಂಡು ಬರೀತಾ ಇದ್ದದ್ಕೆ ಈ ಮೇಷ್ಟ್ರು ನಾಯಿ ತರಾ ಆಡ್ತವ್ನೆ...'. –ಸೀನನ ದೂರು. ಮೇಷ್ಟ್ರಿಗೆ ರೇಗಿಹೋಯ್ತು. ಕುತ್ತಿಗೆ ಪಟ್ಟಿ ಹಿಡಿದು, 'ಲೇ ಸೀನ, ನಿಮ್ಮಪ್ಪನಾಣೆ ಉದ್ಧಾರ ಆಗಲ್ಲ ನೀನು, ತೊಲಗ್ಹೋಗೋ ಆಚೆ' ಅಂತ ಹೊರದೂಡಿದರು. ಸೀನ, 'ಯಾವನ್ ಹಣೆಬರಾ ಯಾವನೂ ಅಳಿಸಾಕಾಗಲ್ಲ, ನೋಡ್ಕತೀನಿ ಓಗಿ...' ಅಂತ ಅಲ್ಲಿಂದ ಹೋಗಿಬಿಟ್ಟ.

ಕಾಲಚಕ್ರಕ್ಕೆ ಬೇರೇನು ಕೆಲಸ? ಅದು ತಿರುಗ್ತಾ ಇತ್ತು. ಇತ್ತ ಸೀನ ಆ ಊರಲ್ಲಿ ಭಾರೀ ಶ್ರೀಮಂತನಾಗಿದ್ದ. ಕ್ಷಮಿಸಿ, ಸೀನ ಅಂದೆ ಅಲ್ವ? ಸೀನ ಅಲ್ಲ, ಈಗ ಅವರು ಸಾಹುಕಾರ್ ಸೀನಪ್ಪನೋರು.

ರಾಜಪ್ಪ ಮೇಷ್ಟ್ರು ಇನ್ನೂ ರಿಟೈರ್ ಆಗಿರಲಿಲ್ಲ. ಶಾಲೆಯ ಕಟ್ಟಡ ರಿಪೇರಿಗೆ ಬಂತು. 'ಸರ್ಕಾರದಲ್ಲಿ ಈ ಹೆಡ್ಡಿನಲ್ಲಿ ದುಡ್ಡಿಲ್ಲವಾದ ಕಾರಣ ಸ್ಥಳೀಯ ದಾನಿಗಳಿಂದ ಹಣ ಸಂಗ್ರಹಿಸಿ ರಿಪೇರಿ ಮಾಡಿಸಿಕೊಳ್ಳತಕ್ಕದ್ದು' –ಸಹಾಯದ ಮನವಿಗೆ ಸರ್ಕಾರದರಿಂದ ಬಂದ ಉತ್ತರ.

ರಾಜಪ್ಪ ಮೇಷ್ಟ್ರು ಹೆಗಲಿಗೆ ಜೋಳಿಗೆ ಹಾಕಿಕೊಂಡು ಹೊರಟರು. ಅಷ್ಟೋ ಇಷ್ಟೋ ಆಯಿತಷ್ಟೆ. ಆಗ ಸರಸ್ವತಿ ಮೇಡಂ ಸಲಹೆ ಕೊಟ್ಟರು- 'ಸಾಹುಕಾರ್ ಸೀನಪ್ಪನವರು ನಿಮ್ಮ ಶಿಷ್ಯ ಅಲ್ವೆ? ಅವರನ್ನು ನೀವು ಕೇಳಿದರೆ ಇಲ್ಲ ಅನ್ನಲ್ಲ. ಒಂದ್ಸಲ ಕೇಳಿ ಸರ್'. ರಾಜಪ್ಪನವರ ಹಣೆ ಮೇಲೆ ಹತ್ತಾರು ಗೆರೆಗಳು ಕಾಣಿಸಿಕೊಂಡವು.

ಆದದ್ದಾಗಲಿ ಅಂತ ಹೊರಟೇಬಿಟ್ಟರು ಮೇಷ್ಟ್ರು, ತಮ್ಮ ಶಿಷ್ಯೋತ್ತಮನ ಬಂಗಲೆಗೆ. ಸುದ್ದಿ ತಿಳಿದ ಸೀನಪ್ಪನೋರು ಬಾಗಿಲಿಗೇ ಬಂದು ಮೇಷ್ಟ್ರನ್ನು ಎದುರುಗೊಂಡರು. ಉಭಯಕುಶಲೋಪರಿ ಆಯಿತು, ಮೇಷ್ಟ್ರು ಅಂಜಂಜುತ್ತಲೇ ಕೇಳಿದರು. 'ಇದೊಂದು ಒಳ್ಳೆ ಕೆಲಸ ಕಣಪ್ಪ, ಒಂದಿಷ್ಟು ಸಹಾಯ ಮಾಡು'. ಥಟ್ಟನೆ ಸೀನಪ್ಪನೋರು ಡ್ರಾಯರ್ ತೆಗೆದು ಒಂದು ಲಕ್ಷ ರೂಪಾಯಿ ತೆಗೆದು ಮೇಷ್ಟ್ರ ಪಾದದ ಬಳಿ ಇಟ್ಟರು. 'ಇನ್ನೂ ಬೇಕಾದ್ರೆ ಹೇಳಿ ಸಾ, ಕೊಡ್ತೀನಿ' ಅಂದ್ರು. ಬೆರಗಾಗಿ ಬೆಬ್ಬಳಿಸಿ ಬಿಟ್ರು ರಾಜಪ್ಪ ಮೇಷ್ಟ್ರು. ಒಂದಿಷ್ಟು ಸಾವರಿಸಿಕೊಂಡು ಲಕ್ಷ ರೂಪಾಯಿ ಕಟ್ಟನ್ನು ತಮ್ಮ ಜೋಳಿಗೆಗೆ ಹಾಕಿಕೊಂಡು 'ಬರ್ತೀನಪ್ಪ...' ಅಂತ ಹೊರಟರು.

ಬಾಗಿಲವರೆಗೂ ಬಂದರು ಸೀನಪ್ಪನವರು... 'ಸಾ, ಒಂದ್ ನಿಮ್ಷ' ಅಂದ್ರು. ಮೇಷ್ಟರಿಗೆ ಇದೀಗ ಗೊತ್ತಾಗಿಹೋಯಿತು, ಅವನು ಅದನ್ನೇ ಕೇಳ್ತಾನೆ ಅಂತ. ಅವನೂ ಕೇಳಿಯೇಬಿಟ್ಟ, 'ಸಾ, ನಾ ಸ್ಕೂಲಿಗೆ ಬತ್ತಾ ಇದ್ದಾಗ ನೀವೇನಂತಿದ್ರಿ? ನಾನು ಉದ್ಧಾರ ಆಗಲ್ಲ ಅಂತ ಅಲ್ವ? ಈಗೇನಂತೀರಿ?'

ಏನಂದಿರಬಹುದು ಮೇಷ್ಟ್ರು?

'ನಾನು ಆಗ ಹಾಗೆ ಬೈದಿದ್ದಕ್ಕೇ ನೀನು ಈಗ ಉದ್ಧಾರ ಆಗಿರೋದು' ಅಂತಾನಾ? ಅಲ್ಲ. ಅವರೇನಂದ್ರು ಗೊತ್ತಾ?: 'ಈಗ ತಾನೇ ಎಲ್ಲಿ ಉದ್ಧಾರ ಆಗಿದ್ದೀಯೋ? ಶ್ರೀಮಂತ ಆಗಿದ್ದಿ ಅಷ್ಟೆ'

ಇದಕ್ಕೆ ವ್ಯಾಖ್ಯಾನ ಬೇಕೆ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಆಗಸ್ಟ್ 18, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ದ್ವಿತೀಯ ಗಂ. 20-22 ನಕ್ಷತ್ರ: ಪೂರ್ವಫಲ್ಗುನಿ ಗಂ. 22-57 ಯೋಗ: ಶಿವ ಗಂ. 20-27 ಕರಣ: ಬಾಲವ ಗಂ. 06-50, ಸಿಂಹ ಮಾಸದ 01 ನೇ ದಿನ, ಮಳೆನಕ್ಷತ್ರ: ಮಘಾ 1. ರಾಹುಕಾಲ : ಬೆಳಗ್ಗೆ 10-30 –12-00, ಸೂರ್ಯೋದಯ : 06-22 ಸೂರ್ಯಾಸ್ತ : 06-47 ಮುಸ್ಲಿಂ ದಿನಾಂಕ : 01 ಸಫರ್, ದಿನ ವಿಶೇಷ : ಕೊಲ್ಲಂ ಯುಗ ಪ್ರಾರಂಭ, ಸಿಂಹಾದಿ (ಕೇರಳ), ಅದೃಷ್ಟ ಸಂಖ್ಯೆ : 5, 11

ಮೇಷ: ಬಂಧುಗಳ ಮನೆಯ ಶುಭಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಓಡಾಟವಿರುವುದು. ಸಿನಿಮಾ ನಟ ನಟಿಯರಿಗೆ ಉತ್ತಮ ಅವಕಾಶದ ಶುಭ ಸುದ್ದಿ ಸಿಗುವುದು. ಕೆಲಸ ಕಾರ್ಯಗಳಲ್ಲಿ ಅಧಿಕವಾಗಿ ಗಮನವಿರಲಿ.

ವೃಷಭ: ಕಾರ್ಖಾನೆಯಲ್ಲಿ ಹೊಸ ವಿದ್ಯುತ್ ಉಪಕರಣಗಳನ್ನು ಅಳವಡಿಸುವಲ್ಲಿ ಅಧಿಕ ಬಂಡವಾಳವನ್ನು ಹೂಡುವಿರಿ. ಅನಿರೀಕ್ಷಿತವಾಗಿ ಹಳೆಯ ಸ್ನೇಹಿತರ ಭೇಟಿಯಾಗಲಿದೆ. ಧನಲಾಭ ಉಂಟಾಗುವುದು.

ಮಿಥುನ: ಮಾನಸಿಕ ನೆಮ್ಮದಿ ಸಂಪಾದಿಸಲು ತಾಯಿ ದುರ್ಗಾಪರಮೇಶ್ವರಿಯ ಮೊರೆ ಹೋಗುವುದು ಉತ್ತಮ. ನೌಕರಿಯಲ್ಲಿ ಬಡ್ತಿ ಹೊಂದುವ ಬಗ್ಗೆ ಈ ದಿನ ನಿಮ್ಮ ಪ್ರಯತ್ನ ಇರಲಿ. ಹಣ್ಣಿನ ವ್ಯಾಪಾರಿಗಳಿಗೆ ಅಧಿಕ ಲಾಭ.

ಕರ್ಕಾಟಕ: ಸ್ನೇಹಿತನ ಸಹಾಯದಿಂದ ಬೇರೆ ಉದ್ಯಮಕ್ಕೆ ಕೈ ಹಾಕುವ ಸಾಹಸವನ್ನು ಮಾಡಬಹುದು. ನವ ದಂಪತಿಗೆ ಹರ್ಷದ ಸಮಾಚಾರ ಕೇಳಿ ಬರುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ದೇಹಾಯಾಸ ಇರುವುದು.

ಸಿಂಹ: ವಿದ್ಯಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಕೆಲಸದಲ್ಲಿ ಉತ್ಸಾಹ ವೃದ್ಧಿ. ನಿಮ್ಮ ಮೇಲುಸ್ತುವಾರಿಯಲ್ಲಿ ಕಾರ್ಯಗಳು ಸುಗಮವಾಗಿ ಸಾಗುವುದು. ಮಗನಿಗಾಗಿ ವೈದ್ಯಕೀಯ ಖರ್ಚು ಹೆಚ್ಚಲಿದೆ.

ಕನ್ಯಾ: ಭರವಸೆಯ ಮಾತುಗಳು ಸಹೋದ್ಯೋಗಿಯೊಬ್ಬರಿಗೆ ಆತ್ಮಸ್ಥೈರ್ಯ ತಂದುಕೊಡುವುದು. ವಿಲಾಸಿ ಜೀವನದ ಶೈಲಿ ಅನುಭವಿಸುವ ಆಸೆ ಈಡೇರುವುದು. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಮೇಲುಗೈ ಸಾಧಿಸಬಹುದು.

ತುಲಾ: ವ್ಯಾಪಾರ, ವ್ಯವಹಾರಗಳಲ್ಲಿ ತೀವ್ರವಾದ ಪೈಪೋಟಿ ಎದುರಾಗಿ ಆತಂಕಕ್ಕೆ ಕಾರಣವಾಗಲಿದೆ. ಮನೆಯಲ್ಲಿ ಸಮಾರಂಭ ನಡೆಸಲು ದಿನ ಗೊತ್ತು ಮಾಡುವಿರಿ. ಪುಸ್ತಕ ವ್ಯಾಪಾರಿಗಳಿಗೆ ಒಳ್ಳೆಯ ಲಾಭವಾಗುವ ಸಂಭವವಿದೆ.

ವೃಶ್ಚಿಕ: ಹಿರಿಯರಿಂದ ತಿಳಿದುಕೊಂಡಿದ್ದ ಕೆಲ ವಿಷಯಗಳು ಇಂದು ಉಪಯೋಗಕ್ಕೆ ಬರಲಿದೆ. ಮೇಲಧಿಕಾರಿಗಳ ವರ್ತನೆಗೆ ಆಕ್ಷೇಪಣೆ ಸಲ್ಲದು. ವೈದ್ಯರನ್ನು ಭೇಟಿ ಮಾಡಬೇಕಾದ ಸ್ಥಿತಿಯು ಎದುರಾಗಬಹುದು.

ಧನು: ಬಿಡುವಿಲ್ಲದ ಕೆಲಸಗಳು ಮತ್ತು ಮೇಲಧಿಕಾರಿಗಳ ಹೆಚ್ಚಿನ ಒತ್ತಡಗಳಿಂದಾಗಿ ವೈಯಕ್ತಿಕ ವಿಷಯಗಳತ್ತ ಗಮನ ಹರಿಸಲು ಸಮಯವಿಲ್ಲದಂತಾಗುವುದು. ಮಗಳಿಗೆ ಹೊಸ ಕೆಲಸ ಸಿಕ್ಕಿ ಸಂತೋಷವಾಗುವುದು.

ಮಕರ: ದಕ್ಷಿಣಾಮೂರ್ತಿಯ ಆರಾಧನೆಯು ಸುಲಭವಾಗಿ ಯಶಸ್ಸಿನ ದಾರಿ ತೋರಿಸಲಿದೆ. ದೈವಾನುಕೂಲದಿಂದ ನಡೆಯಬೇಕಾದ ಶುಭ ಕಾರ್ಯ ಹಿರಿಯರೊಂದಿಗೆ ಕುಳಿತು ನಿಶ್ಚಯಮಾಡಬಹುದು.

ಕುಂಭ: ಸಣ್ಣಪುಟ್ಟ ವಿಚಾರಗಳನ್ನೂ ಉಪೇಕ್ಷಿಸದೆ ಮನೆಯವರೊಂದಿಗೆ ಮಾತನಾಡುವಿರಿ. ಯಾವುದೇ ಬದಲಾವಣೆಗೆ ಸಮಂಜಸ ದಿನವಾಗಿರುವುದಿಲ್ಲ. ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ.

ಮೀನ: ಸಮೀಪವರ್ತಿಗಳ ಸಹಾಯದಿಂದ ಬಾಕಿ ಇದ್ದ ಕೆಲಸಗಳನ್ನು ಪೂರ್ತಿಗೊಳಿಸುವಿರಿ. ಕಾರ್ಯದೊತ್ತಡ ಕಡಿಮೆಯಾಗಿರುವಂತೆ ತೋರಿ ನಿರಾಳ. ಸಂಶೋಧಕರು ಹೆಮ್ಮೆಪಡಲು ಸುಸಮಯವಾಗಿದೆ.

ಪದಬಂಧ 5414


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಈತ ತಂದೆಯ ತಂದೆ (4)
3. ಮನಸ್ಸಿನ ಕೆಚ್ಚು (4)
5. ವಿರಾಟರಾಜನ ಸೇನಾಪತಿ (3)
6. ಕತ್ತು ತಿರಿಗಿಸುತ್ತಾ ಮಾಡಿದ ವ್ಯಾಯಾಮ (4)
7. ಸೇನಾನಾಯಕನಿವನು (4)
9. ಈ ತರ ಬಂದಿರುವ ಏರ್ಪಾಟು (4)
11. ಸಂಭ್ರಮಕ್ಕಿಲ್ಲಿ ಗರ ಬಡಿದಿದೆ! (4)
13. ಕೊನೆಗೆ ಕೈ ಕೊಟ್ಟಿರುವ ಆಳು! (3)
15. ಕಾಲುನಡಿಗೆಯಿಂದ ಸಂಚರಿಸುವವನು (4)
16. ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ

1. ಕಣ್ಣಿನ ಕೊಳೆ (2)
2. ಹತ್ತು ಹೇಳುತ್ತಲೇ ಹೂಡಿರುವ ಸಂಚು (4)
3. ಹೂವಿನಲ್ಲಿಯ ಸಿಹಿರಸ (4)
4. ಹಣದ ಅಧಿದೇವತೆ (2)
6. ಖೋತಾ ಎಂದಾಗ ಆದ ನವೆ! (3)
8. ಇಲ್ಲಿ ಅಂಧಕಾರವಿದೆ (3)
10. ಈತ ಕೆಟ್ಟ ನಡತೆಯವನು (4)
11. ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12. ಹಗ್ಗವಿಲ್ಲಿ ಉಲ್ಟಾಪಲ್ಟಾ ಆಗಿದೆ (2)
14. ಮನದನ್ನೆಗಾಗಿ ಕಟ್ಟಿಸಿದ ಗೃಹ (2)



5413ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ನಿಷ್ಪಕ್ಷಪಾತ 5.ಆಮೋದ 6.ಕರ 8.ವಿಧ 11.ಕರಿ 14.ಪುಸಂ 16.ಸಿಕತ 17.ಗಗನಚುಂಬಿ

ಮೇಲಿಂದ ಕೆಳಕ್ಕೆ: 1.ಅಕ್ಷರಸ್ಥ 2.ಜಾತಕ 3.ನಿದರ್ಶನ 5.ಆರಾಧಕ 7.ರವಿ 9.ಧನವಂತ 10.ಕ್ಷರಸಿಬಿ 12.ರಿಪು 13.ಬಡನಡು 15.ಸಂಗಂತ

ಸುಡೊಕು 5800

	4		2		9	6		1
		1		8		2	7	
	7		1		4			8
		4				1		
2	8		6	9	1			
		7					6	5
	5			1				7
	1	6	8		2	5		
4	2			5				6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5799 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ನಾಡಗೀತೆಗೆ ಧಾಟಿಯ ಜಿಜ್ಞಾಸೆ ಸಂಗೀತ ಕಛೇರಿಯಾದ ಕಲಾಪ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹೈಕೋರ್ಟ್ ಹಾಲ್ ಸಂಖ್ಯೆ 7ರಲ್ಲಿ ಗುರುವಾರ ಭೋಜನ ವಿರಾಮದ ಮೊದಲ ಮಧ್ಯಾಹ್ನದ ಸಂಗೀತ ನಾದದ ಹೊನಲಿನಲ್ಲಿ ತೇಲಿತು. ಹಾಜರಿದ್ದ ಸುಗಮ ಸಂಗೀತ ಲೋಕದ ನಾಯಕರು ನಾಡಗೀತೆ 'ಜಯಭಾರತ ಜನನಿಯ ತನುಜಾತೆ...' ಹಾಡಿಗಿರುವ ಭಿನ್ನ ಧಾಟಿಯ ವ್ಯತ್ಯಾಸಗಳನ್ನು ಹಾಡಿದರು!. ಇಡೀ ಕೋರ್ಟ್ ಹಾಲ್ ಕೆಲ ಗಂಟೆಗಳ ಕಾಲ ಸಂಗೀತ ಕಛೇರಿಯ ವೇದಿಕೆಯಾಗಿ ಪರಿವರ್ತನೆಗೊಂಡು ನೆರೆದಿದ್ದವರನ್ನು ನವಿರೇಳಿಸಿತು...!!

'ಏವಂತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಧಾಟಿಯಲ್ಲಿಯೇ ನಾಡಗೀತೆಯನ್ನು 2 ನಿಮಿಷ 30 ಸೆಕೆಂಡ್‌ಗಳಲ್ಲಿ ಹಾಡಬೇಕು' ಎಂಬುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ 2022ರ ಸೆಪ್ಟೆಂಬರ್ 25ರಂದು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಸುಗಮ ಸಂಗೀತ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಅರ್ಜಿಯಲ್ಲಿ ನಮ್ಮನ್ನೂ ಪ್ರತಿವಾದಿಗಳನ್ನಾಗಿ ಸೇರ್ಪಡೆ ಮಾಡಿಕೊಳ್ಳಬೇಕು' ಎಂದು 'ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ'ದ ಅಧ್ಯಕ್ಷ ಮೃತ್ಯುಂಜಯ ದೊಡ್ಡವಾಡ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಪೀಠ ವಿಚಾರಣೆಗೆ ಅಂಗೀಕರಿಸಿತು.

ಮಧ್ಯಂತರ ಅರ್ಜಿದಾರರ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ವಾದ ಮಂಡಿಸಿ, 'ರಾಜ್ಯ ಸರ್ಕಾರ ಈಗಾಗಲೇ ತನ್ನೆಲ್ಲಾ ಅಧಿಕೃತ ಕಾರ್ಯಕ್ರಮಗಳಲ್ಲಿ ಮೈಸೂರು ಅನಂತಸ್ವಾಮಿಯವರ ಧಾಟಿಯಲ್ಲೇ ಹಾಡುವುದೇ ಸೂಕ್ತ ಎಂಬುದನ್ನು ತೀರ್ಮಾನಿಸಿ ಆದೇಶ ಹೊರಡಿಸಿದೆ. ಅದನ್ನೂ ಮುಖ್ಯ ಅರ್ಜಿದಾರರು ಈಗ ಎತ್ತಿರುವ ಎಲ್ಲ ತಕರಾರುಗಳನ್ನು ಕೂಲಂಕಷವಾಗಿ ಆಲಿಸಿ, ಚರ್ಚಿಸಿ, ನಿಕಷಕ್ಕೆ ಒಳಪಡಿಸಿ ಅಖೈರುಗೊಳಿಸಿದೆ. ಅಷ್ಟೇ ಅಲ್ಲ ಸ್ವತಃ ಕುವೆಂಪು ಮತ್ತು ಜಿ.ಎಸ್.ಶಿವರುದ್ರಪ್ಪ ಅವರು ಮೈಸೂರು ಅನಂತಸ್ವಾಮಿಯವರ ಧಾಟಿಗೆ ಅನುಮೋದಿಸಿದ್ದರು' ಎಂದು ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಇದೇ ಧಾಟಿಯಲ್ಲಿ ಇರಬೇಕು ಎಂಬುದಕ್ಕೆ ನಿಮ್ಮ ಬಳಿ ಇರುವ ಕಾನೂನಿನ ಬಲವನ್ನು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಡಿ' ಎಂದು ಸೂಚಿಸಿತು. ಸರ್ಕಾರದ ಪರ ಹಾಜರಿದ್ದ ವಕೀಲ ನವ್ಯಾ ಶೇಖರ್ ಅವರಿಗೆ, 'ಮಧ್ಯಂತರ ಅರ್ಜಿದಾರರ ಮನವಿಯನ್ನು ಪುರಸ್ಕರಿಸಲು ನಿಮ್ಮ ಬಳಿ ಇರುವ ಪೂರಕ ಅಂಶಗಳೇನು ಎಂಬುದನ್ನೂ ವಿವರಿಸಿ' ಎಂದು ನಿರ್ದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 1ಕ್ಕೆ ಮುಂದೂಡಿತು. ಮಧ್ಯಂತರ ಅರ್ಜಿದಾರರ ಪರ ವಕೀಲ ಎಚ್. ಸುನಿಲ್ ಕುಮಾರ್ ವಕಾಲತ್ತು ವಹಿಸಿದ್ದಾರೆ.

ಅರ್ಜಿದಾರರ ಪರ ಹಿರಿಯ ವಕೀಲ ಅಶೋಕ ಹಾರನಹಳ್ಳಿ ವಾದ ಮಂಡಿಸಿದರು.

14 ಗಂಟೆ ಕಾರ್ಯಾಚರಣೆ; ಟ್ಯಾಂಕರ್ ಹೊರಕ್ಕೆ

ಪ್ರಜಾವಾಣಿ ವಾರ್ತೆ

ಧಾರವಾಡ: ನಗರದ ಹೈಕೋರ್ಟ್ ಸಮೀಪದ ರಾಷ್ಟ್ರೀಯ ಹೆದ್ದಾರಿಯ (ಎನ್.ಎಚ್–4) ಅಂಡರ್‌ಪಾಸ್‌ನಲ್ಲಿ ಸಿಲುಕಿದ್ದ ಎಲ್‌ಪಿಜಿ ಟ್ಯಾಂಕರ್‌ನ್ನು ಸತತ 14 ಗಂಟೆ ಕಾರ್ಯಾಚರಣೆ ನಡೆಸಿ ಗುರುವಾರ ಹೊರ ತೆಗೆಯಲಾಯಿತು. ನಂತರ ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು.

ಅಗ್ನಿಶಾಮಕ ಸಿಬ್ಬಂದಿ, ಪೊಲೀಸರು ಮತ್ತು ಎಚ್‌ಪಿಸಿಎಲ್ ತಂಡದವರು ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ ಗುರುವಾರ ಬೆಳಿಗ್ಗೆ 11ರ ವೇಳೆಗೆ ಟ್ಯಾಂಕರ್‌ನ್ನು ಹೊರಕ್ಕೆ ತೆಗೆದರು. ಬೇಲೂರು ಕೈಗಾರಿಕಾ ಪ್ರದೇಶದ ಎಚ್‌ಪಿಸಿಎಲ್ ಆವರಣಕ್ಕೆ ಟ್ಯಾಂಕರ್ ಸಾಗಿಸಲಾಯಿತು.

'ಟ್ಯಾಂಕರ್‌ನಿಂದ ರಾತ್ರಿಯಿಡೀ ಅನಿಲ ಸೋರಿಕೆಯಾಯಿತು. ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಿದ್ದೆವು. ಗ್ಯಾಸ್ ಸೋರಿಕೆ ಕಡಿಮೆಯಾದಾಗ ಟ್ಯಾಂಕರ್‌ನ ಟೈರ್‌ಗಳ ಗಾಳಿ ತೆಗೆದೆವು. ಅಂಡರ್‌ಪಾಸ್ ಸೀಲಿಂಗ್ ಭಾಗಕ್ಕೆ ಅಂಟಿಕೊಂಡಿದ್ದ ಟ್ಯಾಂಕರ್ ಸ್ವಲ್ಪ ಕೆಳಗಿಳಿಯಿತು. ಮುಚ್ಚಳ ಭಾಗಕ್ಕೆ ಪಟ್ಟಿ(ಬೆಲ್ಟ್) ಸುತ್ತಲಾಯಿತು. ಕ್ರೇನ್ ನೆರವಿನಿಂದ ಟ್ಯಾಂಕರ್ ಅನ್ನು ಹಿಂದಕ್ಕೆ ಎಳೆಸಿದೆವು' ಎಂದು ಅಗ್ನಿಶಾಮಕ ಅಧಿಕಾರಿ ಅಮೃತ್ ಟಿ. ತಿಳಿಸಿದರು.

ಚಾಲಕನ ವಿಚಾರಣೆ ಮಾಡಲಾಗಿದೆ. ಮತ್ತೊಂದು ಅಂಡರ್‌ಪಾಸ್‌ನಲ್ಲಿ ಸಾಗಬೇಕಿತ್ತು, ಗೊತ್ತಾಗದೆ ಬೇರೆ ಅಂಡರ್‌ಪಾಸ್‌ನಲ್ಲಿ ಸಾಗಿದ್ದರಿಂದ ಸಮಸ್ಯೆಯಾಯಿತು

ಲೋಕೇಶ ಜಗಲಾಸರ್
ಎಸ್‌ಪಿ ಧಾರವಾಡ

ಪಿಡಬ್ಲ್ಯುಡಿಯಲ್ಲಿ ಜ್ಯೇಷ್ಠತೆ ಆಧಾರದಲ್ಲೇ ಬಿಲ್ ಪಾವತಿ ● ಉಲ್ಲಂಘನೆ ತಡೆಗೆ ತಂತ್ರಾಂಶ ಬಳಕೆ

5 ವರ್ಷಗಳ ಹಳೆಯ ಬಿಲ್‌ಗೆ ಮುಕ್ತಿ

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಗುತ್ತಿಗೆದಾರರಿಗೆ ಬಿಲ್ ಪಾವತಿಯಲ್ಲಿ ಜ್ಯೇಷ್ಠತೆ ಉಲ್ಲಂಘನೆಗೆ ಕಡಿವಾಣ ಹಾಕಲು ಹೊಸ ಕ್ರಮ ಪರಿಚಯಿಸಿರುವ ಲೋಕೋಪಯೋಗಿ ಇಲಾಖೆ, ಐದು ವರ್ಷಗಳಿಗೂ ಹೆಚ್ಚು ಕಾಲದಿಂದ ಬಾಕಿ ಉಳಿದಿದ್ದ ಬಿಲ್‌ಗಳಿಗೆ ಮುಕ್ತಿ ನೀಡಿದೆ.

ಬಿಲ್ ಪಾವತಿಗೆ ಕಮಿಷನ್ ಬೇಡಿಕೆ ವಿಚಾರ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ಭಾರಿ ಸದ್ದು ಮಾಡಿತ್ತು. ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕವೂ ಇದೇ ಆರೋಪ ಮತ್ತೆ ಚರ್ಚೆಯ ಮುನ್ನೆಲೆಗೆ ಬಂದಿದೆ. ಈ ಮಧ್ಯದಲ್ಲೇ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ₹ 1,200 ಕೋಟಿ ಮೊತ್ತದ ಬಿಲ್ ಪಾವತಿಸಿರುವ ಲೋಕೋಪಯೋಗಿ ಇಲಾಖೆಯು, ಜ್ಯೇಷ್ಠತೆ ಉಲ್ಲಂಘನೆಗೆ ಕಡಿವಾಣ ಹಾಕಿದೆ.

ಲೋಕೋಪಯೋಗಿ ಇಲಾಖೆಯು ವಿವಿಧ ವಿಭಾಗಗಳ ಮೂಲಕ ರಾಜ್ಯ ಹೆದ್ದಾರಿಗಳ ಸುಧಾರಣೆ, ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ, ನಿರ್ವಹಣಾ ಕಾಮಗಾರಿ, ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ ಬಾಬ್ತು ₹ 800 ಕೋಟಿ ಬಿಲ್ ಪಾವತಿಸಲಾಗಿದೆ. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಎಸ್‌ಎಚ್‌ಡಿಪಿ) ಮತ್ತು ಕರ್ನಾಟಕ ರಾಜ್ಯ ಹೆದ್ದಾರಿಗಳ ಸುಧಾರಣಾ ಯೋಜನೆ (ಕೆಶಿಪ್) ಬಿಲ್‌ಗಳೂ ಸೇರಿದಂತೆ ಒಟ್ಟು ಮೊತ್ತ ₹ 1,200 ಕೋಟಿ ತಲುಪಿದೆ.

ಸಚಿವರ ದಿಟ ಹೆಜ್ಜೆ: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಬಾಕಿ ಬಿಲ್ ಪಾವತಿಗಾಗಿ ಆರ್ಥಿಕ ಇಲಾಖೆಯು ವಿವಿಧ ಇಲಾಖೆಗಳಿಗೆ ಒಂದು ಕಂತಿನ ಅನುದಾನ ಬಿಡುಗಡೆ ಮಾಡಿತ್ತು. ಜಲ ಸಂಪನ್ಮೂಲ ಸೇರಿದಂತೆ ಕೆಲವು ಇಲಾಖೆಗಳಲ್ಲಿ ಇನ್ನೂ ಬಿಲ್ ಪಾವತಿಯೇ ಆಗಿಲ್ಲ. ಆದರೆ, ಅನುದಾನ ಬರುವ ಮೊದಲೇ ಬಾಕಿ ಬಿಲ್‌ಗಳ ಜ್ಯೇಷ್ಠತಾ ಪಟ್ಟಿಯನ್ನು ಸಂಗ್ರಹಿಸುವಂತೆ ಸೂಚಿಸಿದ್ದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಅದರ ಅನುಸಾರವೇ ಪಾವತಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರು ಎಂದು ಇಲಾಖೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪ್ರಜಾವಾಣಿ ವಿಶೇಷ



ಬಿಲ್ ಪಾವತಿಯಲ್ಲಿ ಜ್ಯೇಷ್ಠತೆ ಕಾಯ್ದುಕೊಳ್ಳುವ ವಿಚಾರದಲ್ಲಿ ಸತೀಶ ಜಾರಕಿಹೊಳಿ ಅವರ ನಿರ್ಧಾರದಿಂದ ಎಲ್ಲ ಗುತ್ತಿಗೆದಾರರಿಗೂ ನ್ಯಾಯ ದೊರಕುವ ಭರವಸೆ ಮೂಡಿದೆ.

ಡಿ. ಕೆಂಪಣ್ಣ
ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ

'2016–17ರಲ್ಲಿ ನಡೆದಿದ್ದ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆಯ ಕೆಲವು ಕಾಮಗಾರಿಗಳ ಬಿಲ್‌ಗಳು ಇನ್ನೂ ಬಾಕಿ ಇದ್ದವು. ಸಚಿವರ ಸೂಚನೆಯಂತೆ ಈ ಲೆಕ್ಕ ಶೀರ್ಷಿಕೆಯಡಿ 2020–21ರ ಅವಧಿಯವರೆಗಿನ ಬಾಕಿ ಬಿಲ್‌ಗಳನ್ನು ಸಂಪೂರ್ಣವಾಗಿ ಪಾವತಿಸಲಾಗಿದೆ. ಜಿಲ್ಲಾ ಮುಖ್ಯ ರಸ್ತೆ ಕಾಮಗಾರಿಗಳ 2019–20ರ ಎಲ್ಲ ಬಿಲ್‌ಗಳನ್ನು ಪಾವತಿಸಿದ್ದು, 2020–21ರ ಅವಧಿಯ ಬಿಲ್‌ಗಳಲ್ಲಿ ಶೇಕಡ 50ರಷ್ಟನ್ನು ನೀಡಲಾಗಿದೆ' ಎಂದು ಮೂಲಗಳು ಹೇಳಿವೆ.

ತಂತ್ರಾಂಶ ಅಳವಡಿಕೆಗೆ ಸಿದ್ಧತೆ: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಜ್ಯೇಷ್ಠತೆ ಆಧಾರದಲ್ಲಿ ಬಾಕಿ ಬಿಲ್ ಪಾವತಿಸುವುದಕ್ಕಾಗಿ ತಂತ್ರಾಂಶ ರೂಪಿಸಿ ಅಳವಡಿಸುವಂತೆ ಗುತ್ತಿಗೆದಾರರ ಸಂಘ ಹಲವು ವರ್ಷಗಳಿಂದಲೂ ಬೇಡಿಕೆ ಇಟ್ಟಿತ್ತು. ಈಗ ಲೋಕೋಪಯೋಗಿ ಇಲಾಖೆ ತಂತ್ರಾಂಶ ಅಳವಡಿಕೆಗೆ ಮುಂದಾಗಿದೆ. 'ಸಚಿವರ ಸೂಚನೆಯಂತೆ ತಂತ್ರಾಂಶ ರೂಪಿಸಲಾಗುತ್ತಿದೆ. ಹಂತದ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಮುಂದಿನ ಕಂತಿನ ಬಿಲ್ ಪಾವತಿಗೆ ಅಂತಿಮ ಜ್ಯೇಷ್ಠತೆ ನಿರ್ಧರಿಸಲು ತಂತ್ರಾಂಶ ಬಳಸುವ ಸಾಧ್ಯತೆ ಇದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

2001ರಲ್ಲೇ ಆದೇಶ

ವಿವಿಧ ಇಲಾಖೆಗಳಲ್ಲಿ ಕೈಗೊಳ್ಳುವ ಕಾಮಗಾರಿಗಳ ಬಾಬ್ತು ಗುತ್ತಿಗೆದಾರರಿಗೆ ಜ್ಯೇಷ್ಠತೆ ಆಧಾರದಲ್ಲಿ ಬಿಲ್ ಪಾವತಿ ಕಡ್ಡಾಯಗೊಳಿಸಿ 2001ರಲ್ಲೇ ಆದೇಶ ಹೊರಡಿಸಲಾಗಿತ್ತು. 'ಬಿಡುಗಡೆಯಾಗುವ ಮೊತ್ತದಲ್ಲಿ ಶೇಕಡ 80ರಷ್ಟನ್ನು ಜ್ಯೇಷ್ಠತೆ ಆಧಾರದಲ್ಲಿ ಪಾವತಿಸಬೇಕು. ಶೇ 20ರಷ್ಟು ಮೊತ್ತವನ್ನು ತುರ್ತು ಕಾಮಗಾರಿಗಳ ನಿರ್ವಹಣೆ, ನ್ಯಾಯಾಲಯದ ಆದೇಶ ಹಾಗೂ ಗುತ್ತಿಗೆದಾರರ ಕುಟುಂಬದ ಮದುವೆ, ಅನಾರೋಗ್ಯ ಮತ್ತಿತರ ವೈಯಕ್ತಿಕ ಅನಿವಾರ್ಯ ಕಾರಣಗಳ ಆಧಾರದಲ್ಲಿ ಪಾವತಿಸಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿತ್ತು.

ಜ್ಯೇಷ್ಠತೆ ಉಲ್ಲಂಘನೆಗೆ ಅವಕಾಶವಿಲ್ಲ: ಸಚಿವ

'ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಇರುವ ಬಿಲ್‌ಗಳ ಕುರಿತು ಸಂಪೂರ್ಣ ಮಾಹಿತಿ ಪಡೆದಿದ್ದೇನೆ. ಐದು ವರ್ಷಗಳ ಹಿಂದಿನಿಂದ ಬಾಕಿ ಉಳಿದಿದ್ದ ಬಿಲ್‌ಗಳನ್ನು ಮೊದಲ ಹಂತದಲ್ಲಿ ಪಾವತಿಸಲಾಗಿದೆ. ಮುಂದಿನ ದಿನಗಳಲ್ಲೂ ಜ್ಯೇಷ್ಠತೆ ಉಲ್ಲಂಘನೆಗೆ ಅವಕಾಶ ನೀಡುವುದಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ 'ಪ್ರಜಾವಾಣಿ'ಗೆ ತಿಳಿಸಿದರು. 'ಗುತ್ತಿಗೆದಾರರ ಸಂಘದ ಪ್ರತಿನಿಧಿಗಳ ಅಹವಾಲು ಆಲಿಸಿದ್ದೇನೆ. ಅಧಿಕಾರಿಗಳಿಂದಲೂ ಸಲಹೆ ಪಡೆದಿದ್ದೇನೆ. ಯಾವುದೇ ರೀತಿಯಲ್ಲೂ ಆರೋಪಕ್ಕೆ ಅವಕಾಶವಿಲ್ಲದಂತೆ ಬಿಲ್ ಪಾವತಿ ಪ್ರಕ್ರಿಯೆ ನಿರ್ವಹಿಸಲು ಸೂಚಿಸಿದ್ದೇನೆ' ಎಂದರು.

ಗುತ್ತಿಗೆದಾರರ ವಿರುದ್ಧ ಎನ್‌ಸಿಆರ್ ದಾಖಲು

ಬೆಂಗಳೂರು: 'ಕಾಮಗಾರಿ ಪೂರ್ಣಗೊಳಿಸಿರುವ ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ವಿಳಂಬ ನೀತಿ ಅನುಸರಿಸುತ್ತಿದ್ದಾರೆ' ಎಂದು ಆರೋಪಿಸಿ ರಾಜ್ಯಪಾಲರಿಗೆ ದೂರು ನೀಡಿರುವ ಬೆನ್ನಲ್ಲೇ ಬಿಬಿಎಂಪಿ 57 ಗುತ್ತಿಗೆದಾರರ ವಿರುದ್ಧ ಹೈಗ್ರೌಂಡ್ ಠಾಣೆಯಲ್ಲಿ ಎನ್‌ಸಿಆರ್ ದಾಖಲಾಗಿದೆ.

'ರಾಜ್ಯಪಾಲರಿಗೆ ನೀಡಿರುವ ದೂರಿನ ಪ್ರತಿ ಹಾಗೂ ಇತರ ಸಂಗತಿಗಳನ್ನು ಉಲ್ಲೇಖಿಸಿ ಬಿಬಿಎಂಪಿ ಅಧಿಕಾರಿ ಮಹದೇವ್ ದೂರು ನೀಡಿದ್ದಾರೆ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಸೇರಿದಂತೆ 57ಮಂದಿ ವಿರುದ್ಧ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಕಿ ಬಿಲ್ ಪಾವತಿ ಮಾಡುತ್ತಿಲ್ಲವೆಂದು ಆರೋಪಿಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗಿದೆ. ಆದರೆ, ಮನವಿಯಲ್ಲಿ ಕೆಲವರು ಮಾತ್ರ ಸಹಿ ಮಾಡಿದ್ದರು. ಜೊತೆಗೆ, ಗುತ್ತಿಗೆದಾರರಲ್ಲದವರ ಸಹಿಯೂ ಮನವಿಯಲ್ಲಿದೆ. ಹೀಗಾಗಿ, ಮನವಿ ಪತ್ರದ ಬಗ್ಗೆ ಹಲವು ಅನುಮಾನವಿದೆ. ಜೊತೆಗೆ, ಬಿಲ್ ನೀಡದಿದ್ದರೆ ದಯಾಮರಣ ನೀಡುವಂತೆಯೂ ಗುತ್ತಿಗೆದಾರರು ಕೋರಿದ್ದಾರೆ. ಬಿಬಿಎಂಪಿ ಹೆಸರಿಗೆ ಚ್ಯುತಿ ತರುವ ಕೆಲಸ ಇದಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಮಹದೇವ್ ಒತ್ತಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಚಾರಣೆಗಾಗಿ ನೋಟಿಸ್: 'ದೂರು ಆಧರಿಸಿ ಸಂಘದ ಅಧ್ಯಕ್ಷ ಮಂಜುನಾಥ್ ಸೇರಿ 20 ಮಂದಿಯನ್ನು ಈಗಾಗಲೇ ವಿಚಾರಣೆ ಮಾಡಲಾಗಿದೆ. ಉಳಿದವರಿಗೆ ನೋಟಿಸ್ ನೀಡಲಾಗಿದ್ದು, ಶುಕ್ರವಾರ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೈತ್ರಿ ಮುರಿದವರಿಗೆ 'ಆಪರೇಷನ್ ಹಸ್ತ'?

ಲೋಕಸಭೆ ಚುನಾವಣೆ ಮೇಲೆ ಕಾಂಗ್ರೆಸ್ ಕಣ್ಣು: 20 ಸ್ಥಾನ ಗೆಲ್ಲುವ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಪರೇಷನ್ ಕಮಲ'ದ ಪರಿಣಾಮ ಬಿಜೆಪಿ ತೆಕ್ಕೆಗೆ ಜಾರಿ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಪತನಕ್ಕೆ ಕಾರಣರಾದ ಕಾಂಗ್ರೆಸ್ ಶಾಸಕರ ಪೈಕಿ ಎಸ್.ಟಿ. ಸೋಮಶೇಖರ್, ಶಿವರಾಮ ಹೆಬ್ಬಾರ್, ಮುನಿರತ್ನ, ಬೈರತಿ ಬಸವರಾಜ್, ಕೆ. ಗೋಪಾಲಯ್ಯ ಮರಳಿ 'ಕೈ' ಹಿಡಿಯಲು ಮುಂದಾಗಿದ್ದಾರೆಂಬ ವಿಚಾರ ರಾಜ್ಯ ರಾಜಕೀಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಮಾತೃ ಪಕ್ಷಕ್ಕೆ ಮರಳುವ ಬಗ್ಗೆ ಈ ಶಾಸಕರು ಬಹಿರಂಗವಾಗಿ ಹೇಳಿಕೊಳ್ಳದಿದ್ದರೂ, ಇತ್ತೀಚಿನ ಕೆಲವು ಬೆಳವಣಿಗೆಗಳು ಎಸ್.ಟಿ. ಸೋಮಶೇಖರ್, ಶಿವರಾಮ ಹೆಬ್ಬಾರ್ ಮತ್ತು ಮುನಿರತ್ನ ಕಾಂಗ್ರೆಸ್‌ನತ್ತ ವಾಲುತ್ತಿರುವ ವದಂತಿಗಳಿಗೆ ಕಾರಣವಾಗಿದೆ.

ಮತ್ತೊಂದೆಡೆ, ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 20 ಸ್ಥಾನಗಳನ್ನು ಗೆಲ್ಲಲೇಬೇಕೆಂಬ ಪಣ ತೊಟ್ಟಿರುವ ಕಾಂಗ್ರೆಸ್ ನಾಯಕರು, ಪಕ್ಷದ ಕಡೆ ಒಲವು ಹೊಂದಿರುವ ಬಿಜೆಪಿ, ಜೆಡಿಎಸ್ ಶಾಸಕರನ್ನು, ಮಾಜಿ ಶಾಸಕರನ್ನು, ಮುಖಂಡರನ್ನು ಸೆಳೆಯಲು ಉತ್ಸುಕತೆ ಹೊಂದಿರುವುದು, ಇತರ ಪಕ್ಷಗಳ ಶಾಸಕರು ಕಾಂಗ್ರೆಸ್ ಸೇರುವ ಕುರಿತ ಬೆಳವಣಿಗೆಗಳಿಗೆ ಪುಷ್ಟಿ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಎಸ್.ಟಿ. ಸೋಮಶೇಖರ್, ಶಿವರಾಮ ಹೆಬ್ಬಾರ್ ಮತ್ತು ಮುನಿರತ್ನ ಇತ್ತೀಚೆಗೆ ಪ್ರತ್ಯೇಕವಾಗಿ ಭೇಟಿ ಮಾಡಿದ್ದಾರೆ. ಎಸ್.ಟಿ ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ್ ಕಾಂಗ್ರೆಸ್‌ಗೆ ಮರಳುವುದು ಬಹುತೇಕ ಖಚಿತ ಎನ್ನುತ್ತವೆ ಅವರಿಬ್ಬರ ಆಪ್ತ ವಲಯ. ಬೈರತಿ ಬಸವರಾಜ್ ಮತ್ತು ಗೋಪಾಲಯ್ಯ ಅವರ ಸೇರ್ಪಡೆ ಕುರಿತು ಚರ್ಚೆ ಮುಂದುವರಿದಿದೆ ಎಂದು ಹೇಳಲಾಗಿದೆ.

ಮುನಿರತ್ನ ಅವರನ್ನು ಮರಳಿ ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಯಾವುದೇ ತೀರ್ಮಾನಕ್ಕೆ ಬಂದಿಲ್ಲ. ಅವರು ತಮ್ಮ ರಾಜರಾಜೇಶ್ವರಿ ಕ್ಷೇತ್ರದಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ ಚರ್ಚಿಸಲು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ ಎಂಬ ಮಾಹಿತಿಯೂ ಇದೆ.

ಈ ಎಲ್ಲ ಬೆಳವಣಿಗೆಗಳ ಬಗ್ಗೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಜಿ. ಪರಮೇಶ್ವರ, 'ಎಸ್.ಟಿ. ಸೋಮಶೇಖರ್ ಕಾಂಗ್ರೆಸ್‌ಗೆ ದುಡಿದವರು. ಕಾಂಗ್ರೆಸ್ ಪಕ್ಷದಲ್ಲಿಯೇ ಇರುತ್ತಿದ್ದರೆ ಅವರಿಗೂ ಈಗ ಸಚಿವ ಸ್ಥಾನ ಸಿಗಬಹುದಿತ್ತೇನೊ. ಈಗ ಅವರಿಗೆ ಆ ಪಕ್ಷದಲ್ಲಿ ಬೇಸರವಾಗಿದೆ. ಕಾಂಗ್ರೆಸ್‌ಗೆ ವಾಪಸ್ ಬರುತ್ತೇನೆಂದು ನಮ್ಮ ನಾಯಕರ ಜೊತೆ ಮಾತಾಡಿದರೆ ನಾವೆಲ್ಲ ಒಪ್ಪುತ್ತೇವೆ. ಅಡ್ಡಿ ಮಾಡುವುದಿಲ್ಲ. ರಾಜಕೀಯದಲ್ಲಿ ಎಲ್ಲವೂ ಸಾಧ್ಯವಾಗಲಿದೆ' ಎಂದರು.

ಜೆಡಿಎಸ್ ಶಾಸಕರಿಗೂ ಗಾಳ

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಹಳೆ ಮೈಸೂರು ಭಾಗದಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಕಾಂಗ್ರೆಸ್ ನಾಯಕರು ತಂತ್ರ ರೂಪಿಸುತ್ತಿದ್ದಾರೆ. ಜಿಲ್ಲಾವಾರು ಪಕ್ಷದ ಶಾಸಕರ ಜೊತೆ ಚರ್ಚಿಸುವ ಸಂದರ್ಭದಲ್ಲಿ ಈ ವಿಚಾರವನ್ನು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಒತ್ತಿ ಹೇಳಿದ್ದಾರೆ. ಅದಕ್ಕೆ ಪೂರಕವಾಗಿ, ಆ ಭಾಗದ ಜೆಡಿಎಸ್ ಶಾಸಕರನ್ನು ಸೆಳೆಯುವ ಯತ್ನಗಳು ನಡೆಯುತ್ತಿವೆ ಎಂಬ ಮಾಹಿತಿಯೂ ಲಭ್ಯವಾಗಿದೆ. ಜೆಡಿಎಸ್‌ನ ಪ್ರಮುಖ ನಾಯಕರೊಬ್ಬರ ಮೂಲಕ ಜೆಡಿಎಸ್‌ನ 12ರಿಂದ 13 ಶಾಸಕರನ್ನು ಸೆಳೆಯಲು ಕಾಂಗ್ರೆಸ್ ಮುಂದಾಗಿದೆ ಎಂದೂ ಹೇಳಲಾಗಿದೆ.

ಆರೋಪ ಮುಚ್ಚಿ ಹಾಕಲು ಅಪಪ್ರಚಾರ: ಬೊಮ್ಮಾಯಿ

'ನಮ್ಮ ಪಕ್ಷದ ಕೆಲವು ಶಾಸಕರು ಕಾಂಗ್ರೆಸ್‌ಗೆ ಹೋಗುತ್ತಾರೆ ಎನ್ನುವ ಮಾತು ಸತ್ಯಕ್ಕೆ ದೂರವಾದದ್ದು. ಕಾಂಗ್ರೆಸ್ ಮೇಲೆ ಕಮಿಷನ್ ಆರೋಪ ಕೇಳಿ ಬಂದಿರುವುದರಿಂದ ಗಮನ ಬೇರೆಡೆ ಸೆಳೆಯಲು ಈ ರೀತಿ ಸುದ್ದಿ ಹಬ್ಬಿಸುತ್ತಿದ್ದಾರೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು. 'ಯಶವಂತಪುರದಲ್ಲಿ ಸ್ಥಳೀಯವಾಗಿ ಕೆಲವು ಸಮಸ್ಯೆ ಇರುವ ಬಗ್ಗೆ ಸೋಮಶೇಖರ್ ಅವರು ನಮ್ಮ ಗಮನಕ್ಕೆ ತಂದಿದ್ದಾರೆ. ಅದನ್ನು ಪರಿಹರಿಸಲಾಗುವುದು' ಎಂದು ತಿಳಿಸಿದರು.

ಬಿಜೆಪಿಯವರೇ ಕಳುಹಿಸುತ್ತಿದ್ದಾರೆ: ಸೋಮಶೇಖರ್

'ವಿಧಾನಸಭಾ ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಮುಂದಾಗಿದ್ದ ಕೆಲವು ಬಿಜೆಪಿ ಮುಖಂಡರ ಮೇಲೆ ಕ್ರಮ ತೆಗೆದುಕೊಳ್ಳಬೇಕು' ಎಂದು ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ.ಸೋಮಶೇಖರ್ ಒತ್ತಾಯಿಸಿದ್ದಾರೆ.

ಮಾಗಡಿ ರಸ್ತೆಯ ಬಿಇಎಲ್ ಬಡಾವಣೆಯ ತಮ್ಮ ಕಚೇರಿಯಲ್ಲಿ ಗುರುವಾರ ಕರೆದಿದ್ದ ಬೆಂಬಲಿಗರ ಸಭೆಗೂ ಮುನ್ನ ಅವರು ಸುದ್ದಿಗಾರರ ಜತೆ ಮಾತನಾಡಿ, 'ನಾನು ಬಿಜೆಪಿ ಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಕಾಂಗ್ರೆಸ್ ಸೇರುತ್ತೇನೆಂದು ಹೇಳಿಲ್ಲ. ಆದರೆ, ಬಿಜೆಪಿಯವರೇ ಪಕ್ಷದಿಂದ ಕಳುಹಿಸಲು ಮುಂದಾಗಿದ್ದಾರೆ ' ಎಂದರು.

'ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಬಿಜೆಪಿಯ ಕೆಲವು ಮುಖಂಡರು ಆಡಿಯೊ ಮಾಡಿ ಹರಿಬಿಟ್ಟಿದ್ದರು. ಇವರ ಬಗ್ಗೆ ಅಸಮಾಧಾನವಿದೆಯೇ ಹೊರತು ರಾಜ್ಯ ಮಟ್ಟದ ನಾಯಕರ ಬಗ್ಗೆ ಬೇಸರವಿಲ್ಲ ಮತ್ತು ಅವರಿಂದ ನನಗೆ ತೊಂದರೆಯೂ ಆಗಿಲ್ಲ' ಎಂದು ಸ್ಪಷ್ಟಪಡಿಸಿದರು. 'ಸಿದ್ದರಾಮಯ್ಯ ಹಿಂದೆ ನನ್ನ ಕ್ಷೇತ್ರಕ್ಕೆ ಸಾಕಷ್ಟು ಅನುದಾನ ನೀಡಿದ್ದರು. ಕೆಂಪೇಗೌಡ ಬಡಾವಣೆ ಅಭಿವೃದ್ಧಿ ವೀಕ್ಷಣೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಬಂದಿದ್ದರು. ಅಭಿವೃದ್ಧಿಗಾಗಿ ಒಳ್ಳೆಯ ಕೆಲಸ ಮಾಡಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದು ತಪ್ಪೇ? ಇದನ್ನೇ ನೆಪವಾಗಿಟ್ಟುಕೊಂಡು ಬಿಜೆಪಿಯವರು ಪಕ್ಷವನ್ನು ಬಿಟ್ಟು ಹೋಗುತ್ತಿದ್ದೇನೆ ಎಂದು ಪ್ರಚಾರ ಮಾಡುತ್ತಿದ್ದಾರೆ' ಎಂದರು. ಎಸ್.ಟಿ.ಸೋಮಶೇಖರ್ ಬೆಂಬಲಿಗರ ಸಭೆಯಲ್ಲಿ ನೆಲಮಂಗಲದ ಕಾಂಗ್ರೆಸ್ ಶಾಸಕ ಎನ್. ಶ್ರೀನಿವಾಸ್ ಭಾಗವಹಿಸಿದ್ದರು. ಈ ಬಗ್ಗೆ ಸಮಜಾಯಿಷಿ ನೀಡಿದ ಶ್ರೀನಿವಾಸ್, 'ತಾವರೆಕೆರೆ ಹೋಬಳಿಯ ಚಿಕ್ಕನ ಗ್ರಾಮದಲ್ಲಿ ನನ್ನ ಮನೆ ಇದ್ದು, ಮತದಾರನಾಗಿದ್ದೇನೆ. ಸ್ನೇಹಿತರು ಸಭೆ ಕರೆದ ಕಾರಣ ಬಂದಿದ್ದೇನೆ' ಎಂದರು.

ಸಂಚಲನ ಮೂಡಿಸಿದ ಹೆಬ್ಬಾರ ಪಕ್ಷಾಂತರ ವದಂತಿ

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): ಯಲ್ಲಾಪುರ ಕ್ಷೇತ್ರದಲ್ಲಿ ಬಿಜೆಪಿಯಿಂದ ಆಯ್ಕೆಯಾದ ಶಾಸಕ ಶಿವರಾಮ ಹೆಬ್ಬಾರ ಅವರು, ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ ಎಂಬ ಮಾತು ಕಾರ್ಯಕರ್ತರಲ್ಲಿ ಸಂಚಲನಕ್ಕೆ ಕಾರಣವಾಗಿದೆ.

ಇವೆಲ್ಲದರ ಮಧ್ಯೆ ಶಾಸಕ ಹೆಬ್ಬಾರ ಅವರು, ಇಲ್ಲಿನ ಪ್ರವಾಸಿಮಂದಿರದಲ್ಲಿ ಬಿಜೆಪಿ ಮುಖಂಡರ, ಕಾರ್ಯಕರ್ತರೊಂದಿಗೆ ಗುರುವಾರ ಸಂಜೆ ಸಭೆ ನಡೆಸಿದರು. ಆದರೆ, ಎಲ್ಲಿಯೂ ಅವರು ಬಿಜೆಪಿ ಬಿಡುವ ಅಥವಾ ಕಾಂಗ್ರೆಸ್ ಸೇರ್ಪಡೆ ವಿಷಯ ಪ್ರಸ್ತಾಪಿಸಲಿಲ್ಲ.

'ಕಾಂಗ್ರೆಸ್ ಪಕ್ಷ ಸೇರುವ ಕುರಿತು ಮಾಧ್ಯಮದಲ್ಲಿ ನೋಡಿದ್ದೇನೆ. 2 ದಿನಗಳಲ್ಲಿ ಬೆಂಗಳೂರಿಗೆ ಹೋಗುವೆ. ನಂತರ ಮಾತನಾಡುವೆ' ಎಂದರು.

ಸೂಕ್ಷ್ಮ ವಲಯದಲ್ಲಿ ಕಟ್ಟಡ: ಗಣೇಶ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ



ಚಾಮರಾಜನಗರ: ಜಿಲ್ಲೆಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸೂಕ್ಷ್ಮ ವಲಯದಲ್ಲಿ ನಿಯಮಗಳನ್ನು ಉಲ್ಲಂಘಿಸಿ ಬೃಹತ್ ಕಟ್ಟಡ ಕಟ್ಟುತ್ತಿರುವ ಚಿತ್ರನಟ ಗಣೇಶ್‌ಗೆ ಅರಣ್ಯ ಇಲಾಖೆ ನೋಟಿಸ್ ನೀಡಿದೆ. ತಕ್ಷಣವೇ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತೆ ಸೂಚಿಸಿದೆ.

ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯ ಜಕ್ಕಳ್ಳಿಯ ಸರ್ವೆ ನಂಬರ್ 105ರಲ್ಲಿ ಗಣೇಶ್ ಅವರು 1 ಎಕರೆ 24 ಗುಂಟೆ ಜಮೀನು ಹೊಂದಿದ್ದಾರೆ. ಮನೆ ಹಾಗೂ ತೋಟಗಾರಿಕೆ ಉದ್ದೇಶಕ್ಕೆ ತಾತ್ಕಾಲಿಕ ಕಟ್ಟಡ ನಿರ್ಮಾಣಕ್ಕೆ ಬಂಡೀಪುರ ಪರಿಸರ ಸೂಕ್ಷ್ಮ ವಲಯ ಮೇಲ್ವಿಚಾರಣಾ ಸಮಿತಿಯಿಂದ ಅನುಮತಿ ಪಡೆದಿದ್ದರು. ಆದರೆ, ಬೃಹತ್ ಕಟ್ಟಡ ನಿರ್ಮಿಸಲು ಸಿದ್ಧತೆ ಮಾಡಿಕೊಂಡಿದ್ದರು. ದೊಡ್ಡ ಕಾಂಕ್ರೀಟ್ ಪಿಲ್ಲರ್‌ಗಳನ್ನು ಜಮೀನಿನಲ್ಲಿ ನಿರ್ಮಿಸಲಾಗಿತ್ತು.

'ಗಣೇಶ್ ನಿರ್ಮಿಸುತ್ತಿರುವುದು ಶಾಶ್ವತ ಕಟ್ಟಡ ಎಂದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ಪರಿಸರ ಸೂಕ್ಷ್ಮ ವಲಯದಲ್ಲಿ ಶಾಶ್ವತ ಕಟ್ಟಡ ನಿರ್ಮಾಣಕ್ಕೆ ಅವಕಾಶವಿಲ್ಲ. ಅರಣ್ಯ ಇಲಾಖೆ ಅವಕಾಶ ನೀಡಬಾರದು' ಎಂದು ಪರಿಸರವಾದಿಗಳು ಆಗ್ರಹಿಸಿದ್ದರು.

ಮಾಧ್ಯಮಗಳಲ್ಲಿ ವರದಿಯಾದ ಬಳಿಕ ಬಂಡೀಪುರದ ಅಧಿಕಾರಿಗಳು ಸ್ಥಳ ಪರಿಶೀಲಿಸಿದ್ದರು.

ಈ ಸಂಬಂಧ, ಗುಂಡ್ಲುಪೇಟೆ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರವೀಂದ್ರ ಅವರು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪಿ.ರಮೇಶ್‌ಕುಮಾರ್ ಅವರಿಗೆ ವರದಿ ಸಲ್ಲಿಸಿದ್ದು, ಅದರ ಆಧಾರದಲ್ಲಿ ನಿರ್ದೇಶಕರು ಗಣೇಶ್ ಅವರಿಗೆ ಆಗಸ್ಟ್ 14ರಂದು ರಮೇಶ್‌ಕುಮಾರ್ ನೋಟಿಸ್ ಜಾರಿ ಮಾಡಿದ್ದಾರೆ.

'ಸೂಕ್ಷ್ಮ ವಲಯದ ಮೇಲ್ವಿಚಾರಣಾ ಸಮಿತಿ ಮತ್ತು ನಿರ್ದೇಶಕರ ಕಚೇರಿ ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿ ಬೃಹತ್ ಕಟ್ಟಡ ನಿರ್ಮಾಣಕ್ಕೆ ತಯಾರಿ ಮಾಡಿಕೊಂಡಿದ್ದು, ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿದೆ. ಕಾಮಗಾರಿಯನ್ನು ಕೂಡಲೇ ಸ್ಥಗಿತಗೊಳಿಸಬೇಕು ಮತ್ತು ಮಾಲೀಕ ಗಣೇಶ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಎಸಿಎಫ್ ವರದಿಯಲ್ಲಿ ತಿಳಿಸಿದ್ದಾರೆ.

ನೋಟಿಸ್‌ನಲ್ಲಿ ಏನಿದೆ?

'ಬಂಡೀಪುರ ಪರಿಸರ ಸೂಕ್ಷ್ಮ ವಲಯದ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ನೀಡಿರುವ ನಿಬಂಧನೆಗಳನ್ನು ಹಾಗೂ ನೀವು ಮುಚ್ಚಳಿಕೆ ಪತ್ರದಲ್ಲಿ ಬರೆದುಕೊಟ್ಟಿರುವ ಷರತ್ತುಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಕಟ್ಟಡಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು (ಕಟ್ಟಡದ ಅನುಮೋದಿತ ನೀಲ ನಕ್ಷೆ, ಕಂದಾಯ ಇಲಾಖೆ ಹಾಗೂ ಇತರೆ ಸಂಬಂಧಿತ ಇಲಾಖೆಗಳಿಂದ ತಾತ್ಕಾಲಿಕ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು) ಪತ್ರ ತಲುಪಿದ ಏಳು ದಿನಗಳ ಒಳಗಾಗಿ ಪರಿಸರ ಸೂಕ್ಷ್ಮ ವಲಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರ ಮುಂದೆ ಹಾಜರು ಪಡಿಸಲು ಮತ್ತು ಮುಂದಿನ ಆದೇಶವರೆಗೆ ಕಾಮಗಾರಿ ಸ್ಥಗಿತಗೊಳಿಸಲು ಸೂಚಿಸಿದೆ' ಎಂದು ಗಣೇಶ್ ಅವರಿಗೆ ನೀಡಿರುವ ನೋಟಿಸ್‌ನಲ್ಲಿ ಹೇಳಲಾಗಿದೆ.

ವರ್ಷಾಂತ್ಯದಲ್ಲಿ ನಡೆಯಲಿರುವ ಮಧ್ಯಪ್ರದೇಶ, ಛತ್ತೀಸಗಢ ವಿಧಾನಸಭಾ ಚುನಾವಣೆ

ವೇಳಾಪಟ್ಟಿ ಪ್ರಕಟಕ್ಕೆ ಮುನ್ನ ಬಿಜೆಪಿ ಪಟ್ಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧ್ಯಪ್ರದೇಶ ಹಾಗೂ ಛತ್ತೀಸಗಢ ವಿಧಾನಸಭಾ ಚುನಾವಣೆಗಳಿಗೆ ವೇಳಾಪಟ್ಟಿ ಪ್ರಕಟಕ್ಕೆ ಮುನ್ನವೇ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಜೆಪಿ ಗುರುವಾರ ಪ್ರಕಟಿಸಿದೆ. ಛತ್ತೀಸಗಢದ 21 ಹಾಗೂ ಮಧ್ಯ ಪ್ರದೇಶದ 39 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲಾಗಿದೆ.

ಕರ್ನಾಟಕ ವಿಧಾನಸಭೆಯ ಚುನಾವಣೆಯ ವೇಳಾಪಟ್ಟಿ ಪ್ರಕಟಕ್ಕೆ ಮುನ್ನವೇ ಕಾಂಗ್ರೆಸ್ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಿತ್ತು. ರಾಜ್ಯ ನಾಯಕರ ಜತೆಗೆ ಸುಮಾರು 50 ಗಂಟೆ ಸಭೆ ನಡೆಸಿದ ಬಳಿಕವೂ ಬಿಜೆಪಿ ಮೊದಲ ಪಟ್ಟಿ ಪ್ರಕಟಿಸಲು ಹರಸಾಹಸ ಪಟ್ಟಿತ್ತು. ಟಿಕೆಟ್ ಹಂಚಿಕೆಯಲ್ಲಿ ಹೊಸಬರಿಗೆ ಮಣೆ ಹಾಕುವ ಪ್ರಯೋಗ 'ಕೈ' ಹಿಡಿದಿರಲಿಲ್ಲ. ಟಿಕೆಟ್ ಹಂಚಿಕೆಯಲ್ಲಿನ ಗೊಂದಲ ಸಹ ರಾಜ್ಯದಲ್ಲಿ ಪಕ್ಷದ ಸೋಲಿಗೆ ಕಾರಣ ಎಂದು ಬಿಜೆಪಿ ವಲಯದಲ್ಲಿ ಚರ್ಚೆಗಳು ನಡೆದಿದ್ದವು. ಕರ್ನಾಟಕ ವಿಧಾನಸಭಾ ಸೋಲಿನಿಂದ ಕಂಗೆಟ್ಟಿರುವ ಬಿಜೆಪಿ ನಾಯಕತ್ವವು ಪಂಚ ರಾಜ್ಯಗಳ ಚುನಾವಣೆಯ ವಿಷಯದಲ್ಲಿ ಎಚ್ಚರಿಕೆಯ ಹೆಜ್ಜೆ ಇಟ್ಟಿದೆ. ಅದರ ಭಾಗವಾಗಿಯೇ, ಎರಡು ರಾಜ್ಯಗಳಿಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪ್ರಕಟಿಸಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಸಂಜೆ ನಡೆದ ಪಕ್ಷದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಮೊದಲ ಪಟ್ಟಿಯನ್ನು ಅಂತಿಮಗೊಳಿಸಲಾಗಿತ್ತು. ಈ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತಿತರರು ಭಾಗಿಯಾಗಿದ್ದರು.

ಛತ್ತೀಸಗಢದಲ್ಲಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ವಿರುದ್ಧ ಪಕ್ಷವು ದುರ್ಗ್‌ನ ಸಂಸದ ವಿಜಯ ಬಘೇಲ್ ಅವರನ್ನು ಕಣಕ್ಕೆ ಇಳಿಸಿದೆ. ರಾಜ್ಯದ ಮಾಜಿ ಮುಖ್ಯಮಂತ್ರಿ ರಮಣ ಸಿಂಗ್ ಹಾಗೂ ಹಲವು ಹಿರಿಯ ನಾಯಕರ ಹೆಸರು ಮೊದಲ ಪಟ್ಟಿಯಲ್ಲಿ ಇಲ್ಲ.

ಮಧ್ಯ ಪ್ರದೇಶದ ಮೊದಲ ಪಟ್ಟಿಯಲ್ಲಿ ಮುಖ್ಯಮಂತ್ರಿ ಶಿವರಾಜ ಸಿಂಗ್ ಚೌಹಾಣ್ ಹಾಗೂ ಹಿರಿಯ ಸಚಿವರ ಹೆಸರು ಮೊದಲ ಪಟ್ಟಿಯಲ್ಲಿ ಕಾಣಿಸಿಕೊಂಡಿಲ್ಲ.

ಚುನಾವಣಾ ಸಮಿತಿಗಳಲ್ಲಿ ವಸುಂಧರಾಗೆ ಇಲ್ಲ ಸ್ಥಾನ



ಜೈಪುರ (ಪಿಟಿಐ): ವರ್ಷಾಂತ್ಯದಲ್ಲಿ ರಾಜಸ್ಥಾನ ವಿಧಾನಸಭೆಗೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಬಿಜೆಪಿ ಎರಡು ಪ್ರಮುಖ ಸಮಿತಿಗಳನ್ನು ರಚಿಸಿದೆ. ಆದರೆ, ಈ ಸಮಿತಿಗಳಲ್ಲಿ ಮಾಜಿ ಮುಖ್ಯಮಂತ್ರಿ, ಪಕ್ಷದ ಹಿರಿಯ ನಾಯಕಿ ವಸುಂಧರಾ ರಾಜೇ ಅವರಿಗೆ ಅವಕಾಶ ನೀಡಿಲ್ಲ.

21 ಸದಸ್ಯರ ಮೇಲ್ವಿಚಾರಣಾ ಸಮಿತಿಗೆ ಮಾಜಿ ಸಂಸದ ನಾರಾಯಣ ಪಂಚಾರಿಯಾ ಅಧ್ಯಕ್ಷರಾಗಿದ್ದರೆ, 25 ಸದಸ್ಯರಿರುವ ಪ್ರಣಾಳಿಕೆ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘ್ವಾಲ್ ಅವರಿಗೆ ವಹಿಸಲಾಗಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಈ ಸಮಿತಿಗಳನ್ನು ರಚಿಸಿದ್ದಾರೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಪಿ.ಜೋಷಿ ಮತ್ತು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಗುರುವಾರ ಪ್ರಕಟಿಸಿದರು.

ಪ್ರಮುಖ ಸಮಿತಿಗಳಿಗೆ ವಸುಂಧರಾ ರಾಜೇ ಅವರನ್ನು ಪರಿಗಣಿಸದಿರುವ ಕುರಿತ ಪ್ರಶ್ನೆಗೆ, ಚುನಾವಣಾ ಪ್ರಚಾರ ಸಮಿತಿಯ ಘೋಷಣೆ ಬಾಕಿ ಇದೆ. 'ಅವರು ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ' ಎಂದು ಅರುಣ್ ಸಿಂಗ್ ಪ್ರತಿಕ್ರಿಯಿಸಿದರು.

'ವಸುಂಧರಾ ರಾಜೇ ಅವರು ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷೆಯಾಗಿದ್ದಾರೆ. ಅವರು ದೊಡ್ಡ ಪಾತ್ರ ನಿಭಾಯಿಸಲಿದ್ದಾರೆ. ಎರಡು ಬಾರಿ ರಾಜ್ಯದ ಮುಖ್ಯಮಂತ್ರಿ ಆಗಿದ್ದವರು. ಅವರ ಬಗ್ಗೆ ನಮಗೆಲ್ಲರಿಗೂ ಗೌರವವಿದೆ' ಎಂದು ಹೇಳಿದರು.

'ಚುನಾವಣೆಗೆ ಪಕ್ಷದ ಕಾರ್ಯತಂತ್ರ ಸಜ್ಜಾಗಿದೆ. ಪ್ರಚಾರ ಕಾರ್ಯದಲ್ಲಿ ಪಕ್ಷದ ರಾಷ್ಟ್ರೀಯ, ರಾಜ್ಯ ನಾಯಕರು ಭಾಗಿಯಾಗಲಿದ್ದಾರೆ. ಜನರು ಮತ್ತೆ ಬಿಜೆಪಿಗೆ ಆಶೀರ್ವಾದ ಮಾಡುತ್ತಾರೆ ಎಂಬ ಪೂರ್ಣ ವಿಶ್ವಾಸವಿದೆ. ಐತಿಹಾಸಿಕ ಗೆಲುವು ನಮ್ಮದಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಮ್ಮ ಮೈತ್ರಿಗೆ ಸವಾಲಿಲ್ಲ: ಫಡಣವೀಸ್

ಶಿರಡಿ(ಪಿಟಿಐ): 'ಮುಖ್ಯಮಂತ್ರಿ ಏಕನಾಥ ಶಿಂದೆ, ಉಪಮುಖ್ಯಮಂತ್ರಿ ಅಜಿತ್ ಪವಾರ್ ಸೇರಿದಂತೆ ನಾವು ಮೂವರೂ ಒಗ್ಗೂಡಿದ್ದೇವೆ. ಹಾಗಾಗಿ, ರಾಜ್ಯದ ಸಮಗ್ರ ಅಭಿವೃದ್ಧಿ ಕುರಿತಂತೆ ನಮ್ಮ ಮೈತ್ರಿಕೂಟದ ಕಾರ್ಯಶೈಲಿಗೆ ಯಾವುದೇ ಸವಾಲುಗಳು ಎದುರಾಗಿಲ್ಲ' ಎಂದು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಪ್ರತಿಪಾದಿಸಿದ್ದಾರೆ.

ಶಿರಡಿಯಲ್ಲಿ ಹಮ್ಮಿಕೊಂಡಿದ್ದ 'ಜನರ ಮನೆ ಬಾಗಿಲಿಗೆ ಸರ್ಕಾರ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನಿಮಗೆ ಶಿಂಧೆ ಅವರ ಕಾರ್ಯ ಶೈಲಿ ಗೊತ್ತಿದೆ. ಅಜಿತ್ ಅವರ ಕಾರ್ಯವೈಖರಿಯ ಅರಿವು ಇದೆ. ಹಾಗಾಗಿ, ನಮಗೆ ಯಾವುದೇ ಅಡೆತಡೆಗಳಿಲ್ಲ' ಎಂದರು.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು ಮತ್ತೆ ದೇಶದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವುದಿಲ್ಲ' ಎಂದು ಹೇಳಿಕೆ ನೀಡಿದ್ದ ಶರದ್ ಪವಾರ್ ಅವರ ಹೆಸರು ಪ್ರಸ್ತಾಪಿಸದೆ ಮಾತನಾಡಿದ ಅವರು, 'ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಎನ್‌ಸಿಪಿ ಹಿಂಪಡೆದಿದ್ದ ವೇಳೆ 'ಮತ್ತೆ ನಾನು ವಾಪಸ್ ಬರುತ್ತೇನೆ' ಎಂದಿದ್ದೆ. ಕೆಲವರು (ಶರದ್) ನಮಗೆ ದ್ರೋಹ ಬಗೆದರೂ ಮತ್ತೆ ಜನರು ನನಗೆ ಅಧಿಕಾರ ನೀಡಿದ್ದಾರೆ. ಆದರೆ, ಈಗಲೂ ದ್ರೋಹ ಬಗೆದವರಿಗೆ ಭಯ ಕಾಡುತ್ತಿದೆ' ಎಂದು ತಿರುಗೇಟು ನೀಡಿದರು.

'ಬಿಜೆಪಿಯು ಅವರ (ಶಿವಸೇನಾ) ಪಕ್ಷದೊಟ್ಟಿಗೆಯೇ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿಯಿತು. ಆದರೆ, ಸರ್ಕಾರದ ರಚನೆ ವೇಳೆ ನಮಗೆ ಅವರು ಕೂಡ ದ್ರೋಹ ಬಗೆದರು. ಈಗ ಆ ಪಕ್ಷದವರನ್ನೇ ನಮ್ಮೊಟ್ಟಿಗೆ ಕರೆತಂದಿದ್ದೇವೆ' ಎಂದು ಉದ್ಧವ್ ಠಾಕ್ರೆ ಅವರ ಹೆಸರು ಉಲ್ಲೇಖಿಸದೆ ದೂರಿದರು. 'ಮೋದಿ ಅವರು ಭಾರತದ ಸುಧಾರಣೆಗೆ ದಣಿವರಿಯದೇ ಕೆಲಸ ಮಾಡುತ್ತಿದ್ದಾರೆ. ಅವರೊಟ್ಟಿಗೆ ಮತ್ತೆ ದೇಶದ ಮತದಾರರು ನಿಲ್ಲಲಿದ್ದಾರೆ. ಹಾಗಾಗಿ, ಮುಂದಿನ ವರ್ಷವೂ ಅವರೇ ಕೆಂಪುಕೋಟೆಯ ಮೇಲೆ ಸ್ವಾತಂತ್ರ್ಯೋತ್ಸವದಂದು ದೇಶವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ' ಎಂದರು.

ಸೀಟು ಹಂಚಿಕೆ: ಕಾಂಗ್ರೆಸ್, ಎಎಪಿ ಬಿಕ್ಕಟ್ಟು ಶಮನ

ನವದೆಹಲಿ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದೆಹಲಿಯ ಏಳು ಕ್ಷೇತ್ರಗಳಲ್ಲಿ ಮೈತ್ರಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಎಎಪಿ ನಡುವೆ ಸೃಷ್ಟಿಯಾಗಿದ್ದ ಬಿಕ್ಕಟ್ಟು ಶಮನಗೊಂಡಿದೆ.

ಸೀಟು ಹಂಚಿಕೆ ಬಗ್ಗೆ ಮುಂಬೈನಲ್ಲಿ ನಡೆಯಲಿರುವ 'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ಚರ್ಚಿಸಿದ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲು ಎರಡೂ ಪಕ್ಷದ ಮುಖಂಡರು ನಿರ್ಧರಿಸಿದ್ದಾರೆ. ಹಾಗಾಗಿ, ಸದ್ಯ ವಿವಾದ ಬಗೆಹರಿದಿದೆ ಎಂದು ಮೂಲಗಳು ತಿಳಿಸಿವೆ.

ದೆಹಲಿಯಲ್ಲಿ ಬುಧವಾರ ಲೋಕಸಭಾ ಚುನಾವಣೆಯ ಸಿದ್ಧತೆ ಬಗ್ಗೆ ಕಾಂಗ್ರೆಸ್ ನಾಯಕರ ಸಭೆ ನಡೆದಿತ್ತು. ಸಭೆಯ ಬಳಿಕ ಪಕ್ಷದ ವಕ್ತಾರ ಅಲ್ಕಾ ಲಂಬಾ, 'ಎಎಪಿ ಜೊತೆಗೆ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದೇವೆ' ಎಂದು ಹೇಳಿದ್ದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಎಎಪಿ, ಒಂದು ವೇಳೆ ಕಾಂಗ್ರೆಸ್ ಈ ಹಾದಿ ತುಳಿದರೆ 'ಇಂಡಿಯಾ'ದ ಮುಂದಿನ ಸಭೆಯಿಂದ ಹೊರಗುಳಿಯುವುದಾಗಿ ಪ್ರಕಟಿಸಿತ್ತು.

ಗುರುವಾರ ಈ ಕುರಿತು ಪ್ರತಿಕ್ರಿಯಿಸಿರುವ ದೆಹಲಿ ಸರ್ಕಾರದ ಸಚಿವ ಸೌರಭ್ ಭಾರದ್ವಾಜ್, 'ಲಾಂಬಾ ಅವರ ಹೇಳಿಕೆ ವೈಯಕ್ತಿಕವಾದುದು ಎಂದು ಕಾಂಗ್ರೆಸ್ ಸ್ಪಷ್ಟಪಡಿಸಿದೆ. ಹಾಗಾಗಿ, ವಿವಾದವು ಮುಗಿದ ಅಧ್ಯಾಯವಾಗಿದೆ. ಸೀಟು ಹಂಚಿಕೆ ವಿಚಾರವನ್ನು ಪಕ್ಷದ ವಕ್ತಾರರು ನಿರ್ಧರಿಸಲು ಸಾಧ್ಯವಿಲ್ಲ. ಮುಂಬೈ ಸಭೆಯಲ್ಲಿ ಎಲ್ಲಾ ಪಕ್ಷದ ನಾಯಕರು ಚರ್ಚಿಸಿ ಸೀಟು ಹಂಚಿಕೆ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದು ಹೇಳಿದರು.

ಮತ್ತೊಬ್ಬ ಸಚಿವ ಗೋಪಾಲ್ ರೈ ಅವರು, 'ಇಂಡಿಯಾ'ದ ಮೂರನೇ ಸಭೆಯವರೆಗೂ ನಾವು ತಾಳ್ಮೆಯಿಂದ ಕಾಯಬೇಕಿದೆ' ಎಂದಿದ್ದಾರೆ.

'ಕಾಂಗ್ರೆಸ್ ಸಭೆಯಲ್ಲಿ ಪಾಲ್ಗೊಂಡಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಜನರೊಟ್ಟಿಗೆ ನಿರಂತರ ಸಂಪರ್ಕ ಮುಂದುವರಿಸಿಕೊಂಡು ಹೋಗಲು ಒಗ್ಗಟ್ಟು ಕಾಯ್ದುಕೊಳ್ಳುವಂತೆ ನಾಯಕರಿಗೆ ಸೂಚಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವರಿಷ್ಠರ ತೀರ್ಮಾನ: 'ಲೋಕಸಭಾ ಚುನಾವಣೆಯಲ್ಲಿ ದೆಹಲಿಯಲ್ಲಿ ಮೈತ್ರಿ ರಚನೆ ಸಂಬಂಧ ಸಭೆಯಲ್ಲಿ ಚರ್ಚಿಸಿಲ್ಲ. ಸೀಟು ಹಂಚಿಕೆ ಬಗ್ಗೆ ಎಐಸಿಸಿ ನಾಯಕತ್ವ ನಿರ್ಧಾರ ತೆಗೆದುಕೊಳ್ಳುತ್ತದೆ' ಎಂದು ದೆಹಲಿ ಕಾಂಗ್ರೆಸ್ ಮುಖ್ಯಸ್ಥ ಅನಿಲ್ ಚೌಧರಿ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಕುಲ್ ವಾಸ್ನಿಕ್‌ಗೆ ಗುಜರಾತ್ ಉಸ್ತುವಾರಿ

ಸುರ್ಜೇವಾಲಾಗೆ ಮಧ್ಯಪ್ರದೇಶದ ಹೊಣೆ

ಪ್ರಜಾವಾಣಿ ವಾರ್ತೆ



ರಣದೀಪ್ ಸುರ್ಜೇವಾಲಾ



ಮುಕುಲ್ ವಾಸ್ನಿಕ್

ನವದೆಹಲಿ: ಕಾಂಗ್ರೆಸ್ ಪಕ್ಷವು ಗುರುವಾರ ಮಹತ್ವದ ಸಾಂಸ್ಥಿಕ ಬದಲಾವಣೆಗಳನ್ನು ಮಾಡಿದ್ದು, ಪಕ್ಷದ ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್ ಅವರನ್ನು ಗುಜರಾತ್‌ನ ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ. ಕರ್ನಾಟಕ ರಾಜ್ಯದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಈ ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿರುವ ಮಧ್ಯ ಪ್ರದೇಶದ ಹೆಚ್ಚುವರಿ ಹೊಣೆಯನ್ನು ನೀಡಲಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಉತ್ತರ ಪ್ರದೇಶ ರಾಜ್ಯ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಜಿ ಶಾಸಕ ಅಜಯ್ ರೈ ಅವರನ್ನು ನೇಮಕ ಮಾಡಿದ್ದಾರೆ. ಈವರೆಗೆ ಬ್ರಿಜ್‌ಲಾಲ್ ಖಾಬ್ರಿ ಅಧ್ಯಕ್ಷರಾಗಿದ್ದರು. ರೈ ಅವರು ಲೋಕಸಭಾ ಚುನಾವಣೆಯಲ್ಲಿ ವಾರಾಣಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸ್ಪರ್ಧಿಸಿದ್ದರು.

ಗುಜರಾತ್ ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿ ಹಿರಿಯ ನಾಯಕ ಶಕ್ತಿ ಸಿಂಗ್ ಗೋಹಿಲ್ ಅವರನ್ನು ಕಳೆದ ತಿಂಗಳು ನೇಮಕ ಮಾಡಲಾಗಿತ್ತು. ಇದೀಗ ರಾಜ್ಯದ ಉಸ್ತುವಾರಿ ರಘು ಶರ್ಮ ತಲೆದಂಡವಾಗಿದೆ. ಕಳೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಗುಜರಾತ್‌ನಲ್ಲಿ ಪಕ್ಷವೂ ಒಂದೇ ಒಂದು ಸ್ಥಾನ ಗೆದ್ದಿಲ್ಲ. ಈ ಸಲ ಆಕ್ರಮಣಕಾರಿ ಪ್ರಚಾರ ನಡೆಸಲು ಪಕ್ಷ ಯೋಜಿಸಿದ್ದು, ಅದರ ಭಾಗವಾಗಿ ವಾಸ್ನಿಕ್ ಅವರ ನೇಮಕವಾಗಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಸುರ್ಜೇವಾಲಾ ಅವರು ಕರ್ನಾಟಕದ ಜತೆಗೆ ಮಧ್ಯಪ್ರದೇಶದ ಉಸ್ತುವಾರಿ ಹೊಣೆಯನ್ನು ಹೆಚ್ಚುವರಿಯಾಗಿ ನಿಭಾಯಿಸಲಿದ್ದಾರೆ. ಕಾಂಗ್ರೆಸ್ ಪಕ್ಷವು ಮೇ ತಿಂಗಳಲ್ಲಿ ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿತ್ತು. ಮಧ್ಯ ಪ್ರದೇಶದಲ್ಲಿ ಪಕ್ಷವನ್ನು ಗೆಲುವಿನ ದಡ ಮುಟ್ಟಿಸಲು ಕಾರ್ಯತಂತ್ರ ರೂಪಿಸುವ ಹೊಣೆಯನ್ನು ಸುರ್ಜೇವಾಲಾ ಅವರಿಗೆ ವಹಿಸಲಾಗಿದೆ.

ಉತ್ತರ ಪ್ರದೇಶ ರಾಜ್ಯ ಘಟಕದ ಅಧ್ಯಕ್ಷರಾಗಿ ದಲಿತ ನಾಯಕ ಖಾಬ್ರಿ ಅವರನ್ನು 11 ತಿಂಗಳ ಹಿಂದೆ ನೇಮಿಸಲಾಗಿತ್ತು. ಲೋಕಸಭಾ ಚುನಾವಣೆಗೆ ಕೆಲವೇ ತಿಂಗಳು ಉಳಿದಿರುವ ಹೊತ್ತಿನಲ್ಲಿ ರೈ ಅವರ ನೇಮಕವಾಗಿದೆ. ಭೂಮಿಹಾರ್ ಜಾತಿಯ ರೈ ಅವರು ಆಕ್ರಮಣಕಾರಿ ನಾಯಕ ಎಂದು ಪಕ್ಷದ ವಲಯದಲ್ಲಿ ಗುರುತಿಸಿಕೊಂಡವರು.

ರಾಜ್ಯದ ಉಸ್ತುವಾರಿಯೂ ಆಗಿದ್ದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ನಿಕಟವರ್ತಿ ಎಂದು ಗುರುತಿಸಲ್ಪಟ್ಟಿರುವ ರೈ, ವಾರಾಣಸಿ ಜಿಲ್ಲೆಯ ಪಿಂಡ್ರಾ ವಿಧಾನಸಭಾ ಕ್ಷೇತ್ರದಿಂದ ಐದು ಬಾರಿ ಶಾಸಕರಾಗಿದ್ದರು.

ಈ ಹಿಂದೆ ಬಿಜೆಪಿಯಲ್ಲಿದ್ದ ರೈ ಅವರು ವಾರಾಣಸಿ, ಘಾಜಿಪುರ, ಬಲ್ಲಿಯಾ ಮತ್ತು ಇತರ ಕೆಲವು ಜಿಲ್ಲೆಗಳನ್ನು ಒಳಗೊಂಡಂತೆ ಪೂರ್ವ ಉತ್ತರ ಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಸಾಕಷ್ಟು ಬಲ ಹೊಂದಿದ್ದ 'ಭೂಮಿಹಾರ್' ಸಮುದಾಯದ ಮೇಲೆ ಸಾಕಷ್ಟು ಪ್ರಭಾವವನ್ನು ಹೊಂದಿದ್ದಾರೆ.

ರಾಜ್ಯ ರಾಜಕೀಯದಲ್ಲಿ ಪ್ರಸ್ತುತವಾಗಿ ಉಳಿಯಲು ಕಾಂಗ್ರೆಸ್ ಹೆಣಗಾಡುತ್ತಿರುವ ಸಮಯದಲ್ಲಿ ಹೊಸ ಅಧ್ಯಕ್ಷರ ನೇಮಕವಾಗಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವು ರಾಜ್ಯದಲ್ಲಿ ರಾಯ್‌ಬರೇಲಿಯಲ್ಲಿ ಮಾತ್ರ ಗೆದ್ದಿತ್ತು. ಅಮೇಥಿಯಲ್ಲಿ ರಾಹುಲ್ ಗಾಂಧಿ ಸೋತಿದ್ದರು. 2022ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಎರಡು ಸ್ಥಾನಗಳಲ್ಲಷ್ಟೇ ಗೆದ್ದಿತ್ತು.

ನರೇಂದ್ರ ಮೋದಿ ವಿರುದ್ಧ ಖರ್ಗೆ ವಾಗ್ದಾಳಿ

'ಮಣಿಪುರಕ್ಕೆ ತೆರಳದ ಪ್ರಧಾನಿ'

ಪ್ರಜಾವಾಣಿ ವಾರ್ತೆ



ನವದೆಹಲಿಯಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಮಹಿಳಾ ಘಟಕದ ಸಮಾವೇಶದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಗವಹಿಸಿದ್ದರು. ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನೆಟ್ಟಾ ಡಿಸೋಜ ಹಾಗೂ ಇತರೆ ಪದಾಧಿಕಾರಿಗಳು ಇದ್ದಾರೆ
—ಪಿಟಿಐ ಚಿತ್ರ

ನವದೆಹಲಿ: ಮಣಿಪುರ ರಾಜ್ಯವು ಹಿಂಸಾಚಾರದಿಂದ 'ಹೊತ್ತಿ ಉರಿಯುತ್ತಿದ್ದರೆ', ಬಿಜೆಪಿಯು ಇತರ ರಾಜ್ಯಗಳಲ್ಲಿ ಪ್ರಚಾರ ಕಾರ್ಯದಲ್ಲಿ ನಿರತವಾಗಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ಗುರುವಾರ ಇಲ್ಲಿ ಮಹಿಳಾ ಕಾಂಗ್ರೆಸ್ ಸದಸ್ಯರ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, 'ಹಿಂಸಾಚಾರ ಪೀಡಿತ ಮಣಿಪುರಕ್ಕೆ ಪ್ರಧಾನಿ ಏಕೆ ಭೇಟಿ ನೀಡುತ್ತಿಲ್ಲ' ಎಂದು ಕಟುವಾಗಿ ಪ್ರಶ್ನಿಸಿದರು.

'2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ಹಾಗೂ ಕಾಂಗ್ರೆಸ್ ಪಕ್ಷದ ಗೆಲುವಿಗಾಗಿ ಪಕ್ಷದ ಮಹಿಳಾ ಕಾರ್ಯಕರ್ತೆಯರು ಶಕ್ತಿಮೀರಿ ದುಡಿಯಬೇಕು' ಎಂದು ಕರೆ ನೀಡಿದರು.

'ಮಣಿಪುರಕ್ಕೆ ರಾಹುಲ್‌ಗಾಂಧಿ ಅವರು ಭೇಟಿ ನೀಡಬಹುದಾಗಿದ್ದರೆ, ಪ್ರಧಾನಿಗೆ ಏಕೆ ಆಗುತ್ತಿಲ್ಲ? ಬಿಜೆಪಿಯು ಮಣಿಪುರದಲ್ಲಿ ಮಹಿಳೆಯರಿಗೆ ಯಾವ ರೀತಿಯ ರಕ್ಷಣೆಯನ್ನು ನೀಡಿದೆ? ಅಲ್ಲಿ ಮಹಿಳೆಯರು ಮನೆಗಳಿಂದ ಓಡಿ ಹೋಗುತ್ತಿದ್ದಾರೆ, ಅತ್ಯಾಚಾರ, ಕೊಲೆಗಳು ಆಗುತ್ತಿವೆ. ಆದರೆ, ಬಿಜೆಪಿ ಮಾತ್ರ ಅನ್ಯ ರಾಜ್ಯಗಳಲ್ಲಿ ಬಿಡುವಿಲ್ಲದ ಪ್ರಚಾರ ಕಾರ್ಯದಲ್ಲಿ ನಿರತವಾಗಿದೆ ಎಂದು ಖರ್ಗೆ ತರಾಟೆಗೆ ತೆಗೆದುಕೊಂಡರು.

ದೇಶದಾದ್ಯಂತ ಗಲಭೆ, ಹಿಂಸೆಗಳು ಆಗುತ್ತಿವೆ. ಮಣಿಪುರದಲ್ಲಿ ನಡೆಯುತ್ತಿರುವ ದೌರ್ಜನ್ಯ ಕುರಿತು ಮಾತನಾಡುವಂತೆ ನಾವು ಪ್ರಧಾನಿಗೆ ಮನವಿ ಮಾಡಿದೆವು. ನಾವು ಅವಿಶ್ವಾಸ ನಿರ್ಣಯ ಮಂಡಿಸಿದ ನಂತರವೇ ಅವರು ಈ ಬಗ್ಗೆ ಮಾತನಾಡಿದರು. ಮಣಿಪುರದಲ್ಲಿ ಹಲವರು ಜೀವ ಕಳೆದುಕೊಂಡರು, ಹಲವು ಮನೆಗಳಿಗೆ ಬೆಂಕಿ ಹಚ್ಚಲಾಯಿತು, ಸಾವಿರಾರು ಜನರು ಆ ರಾಜ್ಯದಿಂದ ವಲಸೆ ಹೋದರು. ಆದರೂ, ಪ್ರಧಾನಿ ಈ ಬೆಳವಣಿಗೆ ಕುರಿತು ಏನೊಂದು ಮಾತನಾಡಲಿಲ್ಲ ಎಂದು ಖರ್ಗೆ ಅಭಿಪ್ರಾಯಪಟ್ಟರು.

ಚುನಾವಣಾ ಪ್ರಚಾರದ ಕಾರ್ಯತಂತ್ರ ಕುರಿತು ಪಕ್ಷದ ಮಹಿಳಾ ಕಾರ್ಯಕರ್ತೆಯರು ಚಿಂತನೆ ನಡೆಸಲಿದ್ದಾರೆ. ಬಿಜೆಪಿಯನ್ನು ಅಧಿಕಾರದಿಂದ ಪದಚ್ಯುತಗೊಳಿಸುವ ಕಾರ್ಯದಲ್ಲಿ ಖಂಡಿತ ಅವರು ಯಶಸ್ಸು ಗಳಿಸುತ್ತಾರೆ ಎಂಬ ವಿಶ್ವಾಸ ತಮಗಿದೆ ಎಂದು ಖರ್ಗೆ ತಿಳಿಸಿದರು.

ಸಿಇಟಿ, ನೀಟ್: ಪ್ರವೇಶ ಪ್ರಕ್ರಿಯೆ ಆರಂಭ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಪ್ರವೇಶ ಪ್ರಕ್ರಿಯೆ ಆ.18ರಿಂದ ಆರಂಭವಾಗಲಿದೆ.

ಮಧ್ಯಾಹ್ನ 1ರ ನಂತರ ಅಭ್ಯರ್ಥಿಗಳು ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಈ ಪ್ರಕ್ರಿಯೆಗೆ ಆಗಸ್ಟ್ 20ರಂದು ಮಧ್ಯರಾತ್ರಿ 11.59ರವರೆಗೆ ಇರುತ್ತದೆ.

ಆ.19ರಿಂದ 22ರವರೆಗೆ ಆನ್‌ಲೈನ್ ಶುಲ್ಕ ಪಾವತಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಅವರು ಹೇಳಿದ್ದಾರೆ.

ಆಯ್ಕೆ-1 ನಮೂದಿಸಿರುವವರು ಶುಲ್ಕ ಪಾವತಿ ಮಾಡಿ, ನಂತರ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಆಯ್ಕೆಮಾಡಿಕೊಂಡ ಕಾಲೇಜುಗಳಿಗೆ ಪ್ರವೇಶ ಪಡೆಯಲು ಆ. 23 ಕೊನೆಯ ದಿನ. ಒಂದು ವೇಳೆ ಸಿಕ್ಕಿರುವ ಕಾಲೇಜು ಇಷ್ಟವಿಲ್ಲದೆ, ಇನ್ನೂ ಉತ್ತಮ ಕಾಲೇಜು ಬಯಸುವವರು ಆಯ್ಕೆ-2 ನಮೂದಿಸಿ, ಶುಲ್ಕ ಪಾವತಿ ಮಾಡಬೇಕು.

ಇಂಥವರು ಎರಡನೇ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ನೋಡಿಕೊಂಡು ಇಚ್ಛೆ ಪ್ರಕಾರ ಪ್ರವೇಶ ಪಡೆಯಬಹುದು.

ಎರಡೇ ಸುತ್ತು: ವೈದ್ಯಕೀಯ ಮತ್ತು ದಂತ ವೈದ್ಯಕೀಯದ ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಅಭ್ಯರ್ಥಿಗಳ ಆಯ್ಕೆಗೆ ಮತ್ತೆ ಅವಕಾಶಗಳು ಇರುವುದಿಲ್ಲ. ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸುವವರು ಎಚ್ಚರಿಕೆಯಿಂದ 'ಆಪ್ಷನ್ ಎಂಟ್ರಿ' ಮಾಡಬೇಕು ಎಂದು ಪ್ರಾಧಿಕಾರ ತಿಳಿಸಿದೆ.

917 ವೈದ್ಯಕೀಯ ಸೀಟು ಉಳಿಕೆ

ಬೆಂಗಳೂರು: ಮೊದಲ ಸುತ್ತಿನ ಸೀಟು ಹಂಚಿಕೆ ನಂತರ 917 ವೈದ್ಯಕೀಯ ಸೀಟು ಉಳಿದಿವೆ. ಅವುಗಳಲ್ಲಿ 706 ಎನ್‌ಆರ್‌ಐ ಕೋಟಾದ ಸೀಟುಗಳು. 206 ಅಂಗವಿಕಲರ ಕೋಟಾದ ಸೀಟುಗಳು.

ಚಂದ್ರನಂಗಳದತ್ತ ಲ್ಯಾಂಡರ್ ಪಯಣ

ಪ್ರಜಾವಾಣಿ ವಾರ್ತೆ



ಚಂದ್ರನ ಅಂಗಳಕ್ಕೆ ಲ್ಯಾಂಡರ್ ಇಳಿಸುವ ಪ್ರಕ್ರಿಯೆ

ಬೆಂಗಳೂರು: 'ಚಂದ್ರಯಾನ–3'ರ ಬಾಹ್ಯಾಕಾಶ ನೌಕೆಯಿಂದ ಲ್ಯಾಂಡರ್ ಅನ್ನು ಪ್ರತ್ಯೇಕಿಸುವ ಪ್ರಕ್ರಿಯೆ ಗುರುವಾರ ಯಶಸ್ವಿಯಾಗಿ ನೆರವೇರಿತು ಎಂದು ಇಸ್ರೊ ಪ್ರಕಟಿಸಿದೆ.


ಚಂದ್ರನ ಅಂಗಳಕ್ಕೆ ಲ್ಯಾಂಡರ್ ಇಳಿಸುವ ಸರಣಿ ಪ್ರಕ್ರಿಯೆಯಲ್ಲಿ ಇದು ಮೊದಲ ಹೆಜ್ಜೆಯಾಗಿದೆ. ನೋದನ ಘಟಕದಿಂದ (ಪ್ರೊಪಲ್ಷನ್ ಮಾಡ್ಯೂಲ್) ಲ್ಯಾಂಡರ್ ಪ್ರತ್ಯೇಕಗೊಂಡ ಬಳಿಕ ಎರಡೂ ಸ್ವತಂತ್ರ ಯಾನ ಆರಂಭಿಸಿವೆ. ನೋದನ ಘಟಕ ಈಗಿರುವ ಕಕ್ಷೆಯಲ್ಲೇ ಪರಿಭ್ರಮಣ ನಡೆಸಿದರೆ, ಲ್ಯಾಂಡರ್ ಘಟಕ ಚಂದ್ರನ ಅಂಗಳದತ್ತ ತನ್ನ ಯಾನ ಬೆಳೆಸಿದೆ.

ಲ್ಯಾಂಡರ್ ಮಾಡ್ಯೂಲ್‌ನಲ್ಲಿ ಲ್ಯಾಂಡರ್ (ವಿಕ್ರಮ್) ಮತ್ತು ರೋವರ್ (ಪ್ರಗ್ಯಾನ್) ಅನ್ನು ಒಳಗೊಂಡಿದೆ. ಪ್ರತ್ಯೇಕಗೊಂಡ ಬಳಿಕ ಚಂದ್ರನ ಮೇಲ್ಮೈಗೆ ಇನ್ನಷ್ಟು ಹತ್ತಿರಕ್ಕೆ ಒಯ್ಯುವ ಪ್ರಕ್ರಿಯೆಯನ್ನು ಇಸ್ರೊ ನಡೆಸಿದೆ. ಇದೇ 23 ರಂದು ಲ್ಯಾಂಡರ್‌ನ ಹಗುರ ಸ್ಪರ್ಶ ನಡೆಯಲಿದೆ.

ನೌಕೆಯಿಂದ ಬೇರ್ಪಡೆ ಆಗುತ್ತಿದ್ದಂತೆ, 'ಸವಾರಿಗೆ ಧನ್ಯವಾದ ಸಂಗಾತಿ' ಎಂದು ಲ್ಯಾಂಡರ್ ಹೇಳಿದೆ. ಶುಕ್ರವಾರ(ಆ.18) ಸಂಜೆ ಸುಮಾರು 4 ಗಂಟೆಯ ವೇಳೆಗೆ ಲ್ಯಾಂಡರ್‌ನ ವೇಗವನ್ನು ತಗ್ಗಿಸಿ ಕೆಳ ಹಂತದ ಕಕ್ಷೆಗೆ ಇಳಿಸಲು ಉದ್ದೇಶಿಸಲಾಗಿದೆ ಎಂದು ಇಸ್ರೊ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದೆ.

ನೋದನ ಘಟಕದಿಂದ ಲ್ಯಾಂಡರ್ ಪ್ರತ್ಯೇಕಗೊಂಡ ಬಳಿಕ ಕಕ್ಷೆಯಲ್ಲಿ ಅದರ ವೇಗವನ್ನು ತಗ್ಗಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗುತ್ತದೆ. ಇದಕ್ಕೆ 'ಡೀಬೂಸ್ಟ್' ಎಂದು ಕರೆಯಲಾಗುತ್ತದೆ. ಲ್ಯಾಂಡರ್ ಇಳಿಸುವುದಕ್ಕೆ ಮುನ್ನ ಬಾಹ್ಯಾಕಾಶ ನೌಕೆಯನ್ನು ಚಂದ್ರನಿಗೆ ಅತ್ಯಂತ ಸನಿಹದ ಬಿಂದು ಅಂದರೆ 30 ಕಿ.ಮೀ ಮತ್ತು ದೂರದ ಬಿಂದು 100 ಕಿ.ಮೀನಲ್ಲಿ ನೆಲೆಗೊಳಿಸಲಾಗುವುದು. ಇಲ್ಲಿಂದ ಚಂದ್ರನ ದಕ್ಷಿಣ ಧ್ರುವ ಪ್ರದೇಶದಲ್ಲಿ ಲ್ಯಾಂಡರ್ ಅನ್ನು ಇಳಿಸಲಾಗುತ್ತದೆ. ಇದಕ್ಕೆ ಸಾಫ್ಟ್ ಲ್ಯಾಂಡಿಂಗ್ ಎನ್ನಲಾಗುತ್ತದೆ. ಇನ್ನೊಂದೆಡೆ ನೋದನ ಘಟಕ ಈಗಿರುವ ಕಕ್ಷೆಯಲ್ಲೇ ತಿಂಗಳು/ವರ್ಷಗಟ್ಟಲೆ ಪರಿಭ್ರಮಣ ನಡೆಸುತ್ತದೆ.

'ಭಾರತೀಯ ಮುಸ್ಲಿಮರು ಮತಾಂತರ ಆಗಿರುವ ಹಿಂದೂಗಳು'



ಗುಲಾಂ ನಬಿ ಆಜಾದ್

ದೋಡಾ (ಜಮ್ಮು–ಕಾಶ್ಮೀರ)(ಪಿಟಿಐ): 'ಬಹುತೇಕ ಭಾರತೀಯ ಮುಸ್ಲಿಮರು ಮತಾಂತರವಾಗುವುದಕ್ಕೆ ಮೊದಲು ಹಿಂದೂಗಳಾಗಿದ್ದರು. ಕಾಶ್ಮೀರ ಕಣಿವೆಯಲ್ಲಿ ಈ ಮಾತಿಗೆ ನಿದರ್ಶನ ಕಾಣಬಹುದು. ಇಲ್ಲಿನ ಬಹುತೇಕ ಕಾಶ್ಮೀರಿ ಪಂಡಿತರು ಇಸ್ಲಾಮ್‌ಗೆ ಮತಾಂತರಗೊಂಡಿದ್ದಾರೆ' ಎಂದು ಪ್ರಜಾಸತ್ತಾತ್ಮಕ ಪ್ರಗತಿಪರ ಆಜಾದ್ ಪಕ್ಷದ (ಡಿಪಿಎಪಿ) ಮುಖ್ಯಸ್ಥ ಗುಲಾಂ ನಬಿ ಆಜಾದ್ ಅವರು ಹೇಳಿದ್ದಾರೆ.

ದೋಡಾ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜಕೀಯ ಲಾಭಕ್ಕಾಗಿ ಯಾರೂ ಧರ್ಮವನ್ನು ಬಳಸಿಕೊಳ್ಳಬಾರದು. ರಾಜಕೀಯಕ್ಕಾಗಿ ಧರ್ಮವನ್ನು ಬಳಸಿಕೊಳ್ಳುವವರು ದುರ್ಬಲ ವ್ಯಕ್ತಿಗಳು' ಎಂದರು.

'ಕೆಲ ಮುಸ್ಲಿಮರು ಹೊರಗಿನಿಂದ ಬಂದಿದ್ದಾರೆ ಎಂಬುದಾಗಿ ಬಿಜೆಪಿಯ ಕೆಲ ನಾಯಕರು ಹೇಳಿದ್ದಾರೆ. ಹೊರಗಿನಿಂದಾಗಲಿ, ಒಳಗಿನಿಂದಾಗಲಿ ಇಲ್ಲಿಗೆ ಬಂದವರು ಇಲ್ಲ. ಇಸ್ಲಾಂ 1,500 ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿರುವ ಧರ್ಮ. ಹಿಂದೂ ಧರ್ಮ ಅತ್ಯಂತ ಪ್ರಾಚೀನವಾದುದು. ಹೀಗಾಗಿ ಮುಸ್ಲಿಮರ ಪೈಕಿ 10–20 ಮಂದಿ ಹೊರಗಿನಿಂದ ಬಂದವರಿರಬಹುದು. ಕೆಲವರು ಮೊಗಲರ ಸೈನ್ಯದಲ್ಲಿ ಇದ್ದಿರಬಹುದು' ಎಂದು ಹೇಳಿದ್ದಾರೆ.

'ಜಮ್ಮು–ಕಾಶ್ಮೀರ ಮುಸ್ಲಿಮರು 600 ವರ್ಷಗಳ ಹಿಂದೆ ಏನಾಗಿದ್ದರು' ಎಂದು ಪ್ರಶ್ನಿಸಿದ ಅವರು, 'ಅವರೆಲ್ಲರೂ ಕಾಶ್ಮೀರಿ ಪಂಡಿತರೇ ಆಗಿದ್ದರು. ಇಸ್ಲಾಂಗೆ ಮತಾಂತರವಾದರು' ಎಂದು ಗುಲಾಂ ನಬಿ ಆಜಾದ್ ಅವರು ಹೇಳಿದ್ದಾರೆ.

'ಹಿಂದೂಗಳು ಮೃತಪಟ್ಟಾಗ, ಅವರ ದೇಹವನ್ನು ಸುಡಲಾಗುತ್ತದೆ. ಚಿತಾಭಸ್ಮವನ್ನು ನದಿಯಲ್ಲಿ ವಿಸರ್ಜನೆ ಮಾಡಲಾಗುತ್ತದೆ. ನದಿ ನೀರನ್ನೇ ನಾವೆಲ್ಲಾ ಕುಡಿಯುತ್ತೇವೆ. ಅದೇ ರೀತಿ ಮುಸ್ಲಿಮರು ಸತ್ತಾಗ ಅವರ ಮಾಂಸ, ಮೂಳೆಗಳು ಕೂಡ ಈ ಭಾರತದ ಮಣ್ಣು ಸೇರುತ್ತವೆ. ಹಿಂದೂ ಮತ್ತು ಮುಸ್ಲಿಮರು ಈ ನೆಲದ ಮಣ್ಣು ಸೇರುತ್ತಾರೆ. ಹೀಗಾಗಿ, ಇಬ್ಬರ ನಡುವೆ ಏನು ವ್ಯತ್ಯಾಸ ಇದೆ' ಎಂದು ಆಜಾದ್ ಅವರು ಪ್ರಶ್ನಿಸಿದ್ದಾರೆ.

11 ಮಂದಿಗೆ ಕ್ಷಮೆ ಏಕೆ: 'ಸುಪ್ರೀಂ'

ಗುಜರಾತ್ ಸರ್ಕಾರಕ್ಕೆ ಚಾಟಿ

ಒಂದನೇ ಪುಟದಿಂದ...

'ಕೇವಲ ಆಯ್ದವರಿಗಷ್ಟೇ ಸರ್ಕಾರದ ಕ್ಷಮಾಪಣೆ ನೀತಿಯನ್ನು ಅನ್ವಯಿಸುವುದು ಏಕೆ, ಜೀವನವನ್ನು ಮತ್ತೆ ಸುಧಾರಿಸಿಕೊಳ್ಳಲು ಉಳಿದವರಿಗೂ ಅವಕಾಶ ನೀಡಬೇಕಲ್ಲವೇ, 14 ವರ್ಷಗಳ ನಂತರ ಈ ವಿನಾಯಿತಿ ನಿರ್ಧಾರ ತಳೆದಿರುವುದು ಏಕೆ' ಎಂದು ಪ್ರಶ್ನಿಸಿತು.

'ಅಪರಾಧಿಗಳ ಬಿಡುಗಡೆಯು ರಾಜ್ಯ ಸರ್ಕಾರದ ಕ್ಷಮಾಪಣೆ ನೀತಿಯನ್ನು ಅವಲಂಬಿಸಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಹಾಗಾಗಿ, 1992ರಲ್ಲಿ ಗುಜರಾತ್ ಸರ್ಕಾರ ರೂಪಿಸಿರುವ ಈ ನೀತಿ ಆಧರಿಸಿ ಅಪರಾಧಿಗಳಿಗೆ ಕ್ಷಮಾಪಣೆ ನೀಡಲಾಗಿದೆ. ಈ ಪ್ರಕ್ರಿಯೆಯು ಕಾನೂನುಬದ್ಧವಾಗಿಯೇ ನಡೆದಿದೆ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ರಾಜು ಅವರು ಸಮರ್ಥಿಸಿಕೊಂಡರು.

ಘೋರ ಅಪರಾಧ ಎಸಗಿದ ಅಪರಾಧಿಗಳ ಸುಧಾರಣೆಗೂ ಕಾನೂನಿನಡಿ ಅವಕಾಶ ಕಲ್ಪಿಸಬಹುದು ಎಂದು ಅವರು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, ಜೈಲು ಸಲಹಾ ಸಮಿತಿಯ (ಸಮಿತಿಯಲ್ಲಿ ಇಬ್ಬರು ಬಿಜೆಪಿ ಶಾಸಕರು ಇದ್ದರು ಎಂಬ ಆರೋಪವಿದೆ) ವರದಿ ಕೇಳಿತು. ಬಳಿಕ 'ಅಪರಾಧಿಗಳಿಗೆ ಕ್ಷಮಾಪಣೆ ನೀಡುವ ಬಗ್ಗೆ ಅಭಿಪ್ರಾಯ ಪಡೆಯುವಾಗ ಸಿಬಿಐ ಕೂಡ ಆಕ್ಷೇಪ ವ್ಯಕ್ತಪಡಿಸಲಿಲ್ಲವೇ' ಎಂದು ಪ್ರಶ್ನಿಸಿತು. ನಂತರ ಆಗಸ್ಟ್ 24ಕ್ಕೆ ವಿಚಾರಣೆಯನ್ನು ಮುಂದೂಡಿತು.

ಪ್ರವಾಹ ಮಾಹಿತಿಗೆ ಆ್ಯಪ್

ನವದೆಹಲಿ (ಪಿಟಿಐ): ದೇಶದ ಹಲವೆಡೆ ಪ್ರವಾಹಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿನ ತಕ್ಷಣದ ಮಾಹಿತಿ ತಲುಪಿಸಲು ಸರ್ಕಾರ ಗುರುವಾರ 'ಫ್ಲಡ್ ವಾಚ್' ಆ್ಯಪ್ ಆರಂಭಿಸಿದೆ.

338 ಕೇಂದ್ರಗಳಿಂದ 'ಫ್ಲಡ್ ವಾಚ್' ಸಂಗ್ರಹಿಸುವ ಮಾಹಿತಿಯನ್ನು 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ತಲುಪಿಸಲಾಗುತ್ತದೆ. ಈ ಆ್ಯಪ್ ಪ್ರವಾಹ ಸಂಬಂಧಿತ ಮಾಹಿತಿ ಪ್ರಸಾರ ಮಾಡಲು ಮೊಬೈಲ್ ಫೋನ್‌ಗಳನ್ನು ಬಳಸುವ ಉದ್ದೇಶ ಹೊಂದಿದ್ದು, 7 ದಿನದ ಮುನ್ಸೂಚನೆ ಸಹ ನೀಡುತ್ತದೆ ಎಂದು ಕೇಂದ್ರ ಜಲ ಆಯೋಗದ(ಸಿಡಬ್ಲ್ಯುಸಿ) ಅಧ್ಯಕ್ಷ ಕುಶ್ವೀಂದರ್ ವೋಹ್ರಾ ಹೇಳಿದರು.

ಪ್ರವಾಹ ಕುರಿತು ನಿಖರ ಮತ್ತು ಸಕಾಲಿಕ ಮುನ್ಸೂಚನೆ ತಲುಪಿಸಲು ಇದು ಸಹಕಾರಿಯಾಗಲಿದೆ ಎಂದರು.

ಶೇ 40 ಲಂಚ ಪ್ರಕರಣ: ತನಿಖೆಗೆ ಸಮಿತಿ

ಒಂದನೇ ಪುಟದಿಂದ...

ತನಿಖಾ ಸಮಿತಿಗೆ ಸಂಬಂಧಪಟ್ಟಂತೆ ಅಗತ್ಯವಾದ ಕಡತಗಳು, ದಾಖಲಾತಿಗಳನ್ನು ಆಯಾ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳು ಒದಗಿಸಬೇಕು. ಸ್ಥಳ ಪರಿಶೀಲನೆಯ ಸಂದರ್ಭದಲ್ಲಿ ಖುದ್ದು ಹಾಜರಿದ್ದು ತನಿಖಾ ಸಮಿತಿಗೆ ಸಂಪೂರ್ಣ ಸಹಕಾರ ನೀಡಬೇಕು. ಸಮಿತಿಗೆ ಅಗತ್ಯವಿದ್ದರೆ, ಅಧ್ಯಕ್ಷರ ಕೋರಿಕೆಯಂತೆ ಗುಣಮಟ್ಟ ಪರೀಕ್ಷೆಗೆ ನೋಂದಾಯಿತ 3ನೇ ಸ್ವತಂತ್ರ ಸಂಸ್ಥೆಯ ವ್ಯವಸ್ಥೆ ಕಲ್ಪಿಸಲು ಅಗತ್ಯ ಕ್ರಮ ವಹಿಸಬೇಕು ಎಂದೂ ಆದೇಶದಲ್ಲಿ ಲೋಕೋಪಯೋಗಿ ಇಲಾಖೆ ತಿಳಿಸಿದೆ.

ತನಿಖೆಗೆ ಸಂಬಂಧಿಸಿದಂತೆ ಸಹಾಯಕ್ಕೆ ಅಗತ್ಯವಿರುವ ತಾಂತ್ರಿಕ ಸಲಹೆಗಾರರು, ಆರ್ಥಿಕ ಸಲಹೆಗಾರರು ಮತ್ತು ಆಡಳಿತಾತ್ಮಕ ಸಲಹೆಗಾರರನ್ನು ತೆಗೆದುಕೊಳ್ಳಬಹುದು ಎಂದೂ ಆದೇಶದಲ್ಲಿದೆ.

ರಾಜ್ಯದಲ್ಲಿ ಪ್ರಮುಖ ಕಾಮಗಾರಿಗಳನ್ನು ನಡೆಸುವ ಇಲಾಖೆಯಲ್ಲಿ ನಡೆಯುತ್ತಿರುವ ಪ್ಯಾಕೇಜ್ ಪದ್ಧತಿ, ಬಾಕಿ ಮೊತ್ತ ಬಿಡುಗಡೆ ಮತ್ತು ಟೆಂಡರ್ ಪ್ರಕ್ರಿಯೆ ಇತ್ಯಾದಿಗಳಲ್ಲಿ ಶೇ 40ಕ್ಕಿಂತಲೂ ಹೆಚ್ಚಿನ ಮೊತ್ತದ ಲಂಚ, ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿ ಡಿ. ಕೆಂಪಣ್ಣ ಅವರು 2021ರ ಜುಲೈ 6ರಂದು ಪ್ರಧಾನಿ ನರೇಂದ್ರ ಮೋದಿಗೆ ಮತ್ತು 2021ರ ಆಗಸ್ಟ್ 30, 2022ರ ಮಾರ್ಚ್ 11 ಮತ್ತು ಏಪ್ರಿಲ್ 25ರಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ದೂರು ನೀಡಿದ್ದರು.

ಕಾಮಗಾರಿಗಳನ್ನು ಆರಂಭಿಸುವ ಮೊದಲೇ ಶೇ 25ರಿಂದ ಶೇ 30ರವರೆಗೆ ಜನಪ್ರತಿನಿಧಿಗಳಿಗೆ ಮತ್ತು ಇತರರಿಗೆ ಲಂಚ ನೀಡಬೇಕಾದ ಸ್ಥಿತಿಯ ಬಗ್ಗೆ, ಕಾಮಗಾರಿ ಪೂರ್ಣಗೊಂಡ ಬಳಿಕ ಬಾಕಿ ಬಿಲ್ ತೀರುವಳಿ ಮಾಡಲು ಹಣ ಭರವಸೆ ಪತ್ರ (ಎಲ್‌ಒಸಿ) ಬಿಡುಗಡೆಗೆ ಶೇ 5ರಿಂದ ಶೇ6ರವರೆಗೆ, ಹೊರರಾಜ್ಯದ ಗುತ್ತಿಗೆದಾರರಿಗೆ ಪ್ಯಾಕೇಜ್ ಪದ್ಧತಿಯಿಂದ ಅನುಕೂಲ ಮಾಡಲಾಗುತ್ತಿರುವ ಬಗ್ಗೆ ಮತ್ತು ಈ ಹಿಂದಿನ ಸರ್ಕಾರದಲ್ಲಿ ಶೇ 40ರಷ್ಟು ಕಮಿಷನ್ ಕೇಳುತ್ತಿರುವ ಬಗ್ಗೆ ಆ ದೂರುಗಳಲ್ಲಿ, ಉಲ್ಲೇಖಿಸಿದ್ದರು. ಆದರೆ, ಈ ಗಂಭೀರ ಆರೋಪಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾವುದೇ ತನಿಖೆ ನಡೆದಿಲ್ಲ. ಇದೀಗ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಆಡಳಿತದಲ್ಲಿ ಪಾರದರ್ಶಕತೆಯನ್ನು ಜಾರಿಗೊಳಿಸಬೇಕಿದೆ ಎಂಬ ಕಾರಣಕ್ಕೆ ತನಿಖಾ ಸಮಿತಿ ರಚಿಸಲಾಗಿದೆ ಎಂದೂ ಆದೇಶದ ಪ್ರಸ್ತಾವನೆಯಲ್ಲಿ ವಿವರಿಸಲಾಗಿದೆ.

ಯಾವೆಲ್ಲ ಅಂಶಗಳ ತನಿಖೆ?

- ಯೋಜನೆ, ಕಾಮಗಾರಿಗಳಿಗೆ ನಿಯಮಾನುಸಾರ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆಯೇ?
- ಅನುಷ್ಠಾನಗೊಳಿಸಿದ ಕಾಮಗಾರಿ, ಯೋಜನೆಗಳ ಗುಣಮಟ್ಟ
- ಕಾಮಗಾರಿಗಳ ಅಂದಾಜುಗಳನ್ನು ಪ್ರಚಲಿತ ಅನುಸೂಚಿ ದರಗಳ(ಎಸ್‌ಆರ್) ಅನುಸಾರ ತಯಾರಿಸಲಾಗಿದೆಯೇ?
- ಕಾಮಗಾರಿಗಳ ಅಂದಾಜಿನಲ್ಲಿರುವ ಪ್ರಮಾಣ ವಾಸ್ತವಿಕವಾಗಿದೆಯೇ? ಕೃತಕವಾಗಿ ಹೆಚ್ಚಿಸಲಾಗಿದೆಯೇ? ಹೆಚ್ಚಿಸಿದ್ದರೆ ಅವುಗಳ ಪ್ರಮಾಣ ಮತ್ತು ಹಣಕಾಸಿನ ಬದ್ಧತೆಯ ಜೊತೆಗೆ ಯಾವ ಹಂತದಲ್ಲಿದೆ ಎಂಬುದನ್ನು ಪರೀಕ್ಷಿಸುವುದು
- ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಉಂಟಾಗಿರುವ ಹೆಚ್ಚುವರಿ ವ್ಯತ್ಯಾಸದ ಅನಿವಾರ್ಯ ಮತ್ತು ಅಗತ್ಯ. ಅನಿವಾರ್ಯವಾಗಿದ್ದರೆ ಮೂಲ ಅಂದಾಜಿನಲ್ಲಿ ಕೈಬಿಡಲು ಕಾರಣಗಳು ಮತ್ತು ಅವುಗಳಿಗೆ ಸಕ್ಷಮ ಪ್ರಾಧಿಕಾರವು ಅನುಮೋದನೆ ನೀಡಿರುವ ಬಗ್ಗೆ.
- ಯಾವುದಾದರೂ ಕಾಮಗಾರಿಗಳನ್ನು ನಿರ್ವಹಿಸದೇ ಬಿಲ್ ಮಾಡಲಾಗಿದೆಯೇ? ಅನುಷ್ಠಾನದ ಕಾಮಗಾರಿಗಳ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಬಿಲ್ ಪಾವತಿಸಲಾಗಿದೆಯೇ?
- ಕಾಮಗಾರಿಗಳ ಟೆಂಡರ್‌ಗಳನ್ನು ಕರೆಯುವಾಗ ಕೆಲವೇ ಗುತ್ತಿಗೆದಾರರಿಗೆ ಅನುಕೂಲ ಆಗುವಂತೆ ಹಾಗೂ ಉಳಿದ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಗಳಲ್ಲಿ ಭಾಗವಹಿಸದಂತೆ ಷರತ್ತು ರೂಪಿಸಲಾಗಿತ್ತೇ?
- ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ, ಅನುಷ್ಠಾನ ಪ್ರಕ್ರಿಯೆಗಳಲ್ಲಿ ಉಂಟಾಗಿರಬಹುದಾದ ಇತರ ಯಾವುದಾದರೂ ಲೋಪದೋಷಗಳು

ನ್ಯಾಯಾಲಯದ ಮುಂದೆ ಅಧಿಕಾರಿಗಳ ಹಾಜರಿ ● ಸರ್ಕಾರ, ಕೋರ್ಟ್‌ಗಳ ಸಮಯ ಉಳಿತಾಯದ ಉದ್ದೇಶ

ಕೇಂದ್ರದಿಂದ 'ಎಸ್‌ಒಪಿ' ಪ್ರಸ್ತಾವ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಾಂಗ ನಿಂದನೆ ಹಾಗೂ ಇತರ ಪ್ರಕರಣಗಳಲ್ಲಿ ಅಧಿಕಾರಿಗಳು ನ್ಯಾಯಾಲಯಗಳಿಗೆ ಹಾಜರಾಗುವುದಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರವು ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಕುರಿತು ಪ್ರಸ್ತಾವ ಮುಂದಿಟ್ಟಿದೆ.

ವಿಶೇಷ ಸಂದರ್ಭಗಳಲ್ಲಿ ಮಾತ್ರ ನ್ಯಾಯಾಲಯಗಳು ತನ್ನ ಮುಂದೆ ಹಾಜರಾಗುವಂತೆ ಅಧಿಕಾರಿಗಳಿಗೆ ಸೂಚಿಸಬೇಕು. ಈ ಬಗ್ಗೆ ಮುಂಚಿತವಾಗಿ ನೋಟಿಸ್ ನೀಡಬೇಕು. ಅಧಿಕಾರಿಗಳು ಅವರ ಸ್ಥಾನಮಾನಕ್ಕೆ ಸರಿಹೊಂದದ ಅಥವಾ ವೃತ್ತಿಪರತೆಗೆ ತಕ್ಕುದಲ್ಲದ ವಸ್ತ್ರ ಧರಿಸಿದ್ದರೆ ಮಾತ್ರ ಆ ಬಗ್ಗೆ ಟೀಕೆ ಮಾಡಬಹುದು ಎಂಬ ಅಂಶಗಳನ್ನು ಎಸ್‌ಒಪಿ ಒಳಗೊಂಡಿದೆ.

ಅಧಿಕಾರಿಗಳು ಖುದ್ದಾಗಿ ನ್ಯಾಯಾಲಯಗಳಿಗೆ ಹಾಜರಾಗುವ ಬದಲು, ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗುವುದಕ್ಕೆ ಅನುಮತಿ ನೀಡಬೇಕು. ಹೀಗೆ ಮಾಡುವುದರಿಂದ ನ್ಯಾಯಾಲಯ ಹಾಗೂ ಸರ್ಕಾರದ ಸಮಯ ಮತ್ತು ಸಂಪನ್ಮೂಲದ ಉಳಿತಾಯ ಸಾಧ್ಯವಾಗಲಿದೆ ಎಂದು 'ಎಸ್‌ಒಪಿ'ಯಲ್ಲಿ ಹೇಳಲಾಗಿದೆ.

'ಸರ್ಕಾರ ಮತ್ತು ನ್ಯಾಯಾಂಗದ ನಡುವೆ ಹೆಚ್ಚು ಸೌಹಾರ್ದ ಹಾಗೂ ಅರ್ಥಪೂರ್ಣ ವಾತಾವರಣ ನಿರ್ಮಿಸುವುದು ಈ ಎಸ್‌ಒಪಿ ಉದ್ದೇಶ. ನ್ಯಾಯಾಲಯದ ಆದೇಶಗಳ ಪಾಲನೆಗೆ ಸಂಬಂಧಿಸಿ ಗುಣಮಟ್ಟವನ್ನು ಸುಧಾರಿಸುವುದು ಹಾಗೂ ಆ ಮೂಲಕ ನ್ಯಾಯಾಂಗ ನಿಂದನೆಗೆ ಗುರಿಯಾಗುವುದನ್ನು ತಗ್ಗಿಸುವ ಉದ್ದೇಶವೂ ಇದೆ' ಎಂದು ಎಸ್‌ಒಪಿಯಲ್ಲಿ ಹೇಳಲಾಗಿದೆ.

'ಎಸ್‌ಒಪಿ'ಯಲ್ಲಿನ ಇತರ ಅಂಶಗಳು

- ಖುದ್ದಾಗಿ ಹಾಜರಾಗಲೇಬೇಕು ಎಂಬ ಸಂದರ್ಭಗಳಲ್ಲಿ ಅಧಿಕಾರಿಗೆ ಸಾಕಷ್ಟು ಮುಂಚಿತವಾಗಿ ನೋಟಿಸ್ ನೀಡಬೇಕು
- ಅಧಿಕಾರಿ ಧರಿಸುವ ವಸ್ತ್ರ/ದೈಹಿಕ ನೋಟ/ಶೈಕ್ಷಣಿಕ ಮತ್ತು ಸಾಮಾಜಿಕ ಹಿನ್ನೆಲೆ ಬಗ್ಗೆ ಪ್ರತಿಕ್ರಿಯೆ ನೀಡುವುದನ್ನು ನಿಲ್ಲಿಸಬೇಕು
- ತಾವು ಹೊರಡಿಸಿದ ಆದೇಶವೊಂದಕ್ಕೆ ಸಂಬಂಧಿಸಿದ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಯನ್ನು ಸ್ವತಃ ನ್ಯಾಯಾಧೀಶರೇ ನಡೆಸಬಾರದು
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಇತರ ಭಾಗೀದಾರರ ಮೇಲೆ ವ್ಯಾಪಕ ಪರಿಣಾಮ ಬೀರಬಹುದಾದ ನೀತಿಗಳನ್ನು ಪ್ರಶ್ನಿಸಿ ವೈಯಕ್ತಿಕ ನೆಲೆಯಲ್ಲಿ ಸಲ್ಲಿಸಿರುವ ಅರ್ಜಿಗಳ ಕುರಿತು ತೀರ್ಪು ಪ್ರಕಟಿಸುವ ವೇಳೆ ಹೆಚ್ಚು ಎಚ್ಚರಿಕೆ ವಹಿಸುವುದು ಅಗತ್ಯ

'ಕೆಳ ಹಂತದ ಕೋರ್ಟ್‌ಗಳಲ್ಲಿ ತಂತ್ರಜ್ಞಾನ ಅಳವಡಿಕೆ'



ನವದೆಹಲಿ: 'ಇ-ಕೋರ್ಟ್' ಪ್ರಾಜೆಕ್ಟ್‌ನ ಮೂರನೇ ಹಂತದಲ್ಲಿ ಭಾರಿ ಅನುದಾನ ಹಂಚಿಕೆ ಮಾಡಲಾಗಿದೆ. ಇದರಿಂದ, ವಿಶೇಷವಾಗಿ ಕೆಳ ಹಂತದ ನ್ಯಾಯಾಲಯಗಳಲ್ಲಿ ತಂತ್ರಜ್ಞಾನ ಅಳವಡಿಕೆಗೆ ಹೆಚ್ಚು ಅನುಕೂಲವಾಗಲಿದೆ ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಗುರುವಾರ ಹೇಳಿದರು.

'ಮೂರನೇ ಹಂತದಲ್ಲಿ ಕೆಳ ಹಂತದ ನ್ಯಾಯಾಲಯಗಳಲ್ಲಿ ತಂತ್ರಜ್ಞಾನ ಅಳವಡಿಸುವ ಪ್ರಕ್ರಿಯೆಗೆ ಚಾಲನೆ ನೀಡಿದ್ದೇವೆ. ನ್ಯಾಯಾಲಯದ ಕಲಾಪಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಸುವ ಸಲುವಾಗಿ ತಮ್ಮದೇ ಕ್ಲೌಡ್ ಸಾಫ್ಟ್‌ವೇರ್ ಹೊಂದಲಿದ್ದೇವೆ' ಎಂದು ಸಿಜೆಐ ಹೇಳಿದರು.

ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ಹಿಂಪಡೆದ ಕೇಂದ್ರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ಅವರು ಈ ಕುರಿತು ವಿವರಿಸಿದರು.

ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ಹಿರಿಯ ವಕೀಲ ದುಷ್ಯಂತ್ ದವೆ, 'ಸುಪ್ರೀಂಕೋರ್ಟ್ ಇತ್ತೀಚೆಗೆ ತಂತ್ರಜ್ಞಾನ ಅಳವಡಿಕೆ ಬಗ್ಗೆ ಹೆಚ್ಚು ಆಸಕ್ತಿ ತಳೆದಿದೆ. ತಂತ್ರಜ್ಞಾನವನ್ನು ಕೆಳಹಂತದ ನ್ಯಾಯಾಲಯಗಳಿಗೂ ತಲುಪಿಸಿದಲ್ಲಿ ದೊಡ್ಡ ಕೊಡುಗೆ ನೀಡಿದಂತಾಗಲಿದೆ' ಎಂದರು. ಆಗ, ಸಿಜೆಐ ಅವರು ಈ ಮಾಹಿತಿ ನೀಡಿದರು.

'ಕೋವಿಡ್ ಪಿಡುಗಿನ ವೇಳೆ, ವಿಡಿಯೊ ಕಾನ್ಫರೆನ್ಸ್ ಮೂಲಕ ಕಲಾಪ ನಡೆಸುವುದಕ್ಕಾಗಿ ಹೈಕೋರ್ಟ್‌ವೊಂದರ ಬಳಿ ಹಣ ಇರಲಿಲ್ಲ. ಆ ಹೈಕೋರ್ಟ್ ಹೆಸರನ್ನು ನಾನು ಹೇಳುವುದಿಲ್ಲ. ಆಗ, ಸುಪ್ರೀಂಕೋರ್ಟ್‌ನ ಕೆಲ ವಿಡಿಯೊ ಕಾನ್ಫರೆನ್ಸ್ ಪರವಾನಗಿಗಳನ್ನು ಹಿಂಪಡೆದು, ಅವುಗಳನ್ನು ಹೈಕೋರ್ಟ್‌ಗಳಿಗೆ ನೀಡಿದ್ದೆವು' ಎಂದ ಸಿಜೆಐ, 'ವಿಡಿಯೊ ಕಾನ್ಫರೆನ್ಸ್ ಇಲ್ಲದೇ ಕಲಾಪ ನಡೆಸುವುದು ಆಗ ಸಾಧ್ಯವೇ ಇರಲಿಲ್ಲ' ಎಂದರು.

ಫೆಬ್ರುವರಿಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು 'ಇ-ಕೋರ್ಟ್' ಪ್ರಾಜೆಕ್ಟ್‌ನ 3ನೇ ಹಂತದ ಯೋಜನೆಗಳಿಗೆ ₹ 7 ಸಾವಿರ ಕೋಟಿ ಹಂಚಿಕೆ ಮಾಡಿದ್ದಾಗಿ ಘೋಷಿಸಿತ್ತು.

ಸುದ್ದಿ 2 ನಿಮಿಷ

'ಜೈಲರ್' ಹಾಡಿಗೆ ಕುಣಿದ ಜಪಾನ್ ರಾಯಭಾರಿ

ಚೆನ್ನೈ: ತಮಿಳು ಸೂಪರ್ ಸ್ಟಾರ್ ರಜನೀಕಾಂತ್ ಅವರಿಗೆ ಭಾರತದಲ್ಲಿ ಮಾತ್ರವಲ್ಲ ಜಪಾನ್ ಸೇರಿದಂತೆ ವಿದೇಶಗಳಲ್ಲಿಯೂ ಭಾರಿ ಸಂಖ್ಯೆಯ ಅಭಿಮಾನಿಗಳಿದ್ದಾರೆ. ಅವರ ಬಹುತೇಕ ಚಿತ್ರಗಳ ಹಾಡುಗಳು, ಸಂಭಾಷಣೆಗಳು ಅಭಿಮಾನಿಗಳನ್ನು ಹುಚ್ಚೆಬ್ಬಿಸುವಂತೆ ಮಾಡುತ್ತವೆ.

ಈಗ, 'ಜೈಲರ್' ಚಿತ್ರದ 'ಕಾವಾಲಯ್ಯ' ಎಂಬ ಹಾಡಿಗೆ ಭಾರತದಲ್ಲಿನ ಜಪಾನ್ ರಾಯಭಾರಿ ಹಿರೋಷಿ ಸುಜುಕಿ ಅವರು ಹೆಜ್ಜೆ ಹಾಕಿದ್ದಾರೆ. ವಿಡಿಯೊವನ್ನು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದು, ಗಮನ ಸೆಳೆಯುತ್ತಿದೆ.



17 ಸೆಕೆಂಡ್‌ಗಳ ವಿಡಿಯೊದಲ್ಲಿ ಸುಜುಕಿ ಅವರು ಖ್ಯಾತ ಯೂಟ್ಯೂಬರ್ ಮೆಯೊ ಸ್ಯಾನ್ ಅವರೊಂದಿಗೆ ಕುಣಿದಿದ್ದು, ಜಪಾನಿಯರ ಗುಂಪೊಂದು ಹಿಮ್ಮೇಳದಲ್ಲಿದೆ. ನೀಲಿ ಬಣ್ಣದ ಟ್ರೌಸರ್ ಹಾಗೂ ಬ್ಲೇಜರ್, ಬಿಳಿ ಅಂಗಿ ಧರಿಸಿರುವ ಅವರು, ಚಿತ್ರದಲ್ಲಿ ರಜನೀಕಾಂತ್ ನೃತ್ಯದ ದೃಶ್ಯಗಳ ಮರುಸೃಷ್ಟಿಗೆ ಯತ್ನಿಸಿದ್ದಾರೆ.

'ನಾನು ರಜನೀಕಾಂತ್ ಅವರ ಕಟ್ಟಾ ಅಭಿಮಾನಿ' ಎಂದು ಹೇಳಿಕೊಳ್ಳುವ ಸುಜುಕಿ, ಕನ್ನಡಕ ಹಾಕಿಕೊಳ್ಳುವಾಗಿನ ರಜನೀಕಾಂತ್ ಅವರ ವಿಶಿಷ್ಟ ಶೈಲಿಯನ್ನು ಅನುಕರಣೆ ಮಾಡಿದ್ದಾರೆ.

ನೂಹ್: ಬಿಟ್ಟು ಬಜರಂಗಿಗೆ 14 ದಿನಗಳ ನ್ಯಾಯಾಂಗ ಬಂಧನ

ಗುರುಗ್ರಾಮ/ನೂಹ್(ಪಿಟಿಐ): ನೂಹ್ ಜಿಲ್ಲೆಯಲ್ಲಿ ಸಂಭವಿಸಿದ ಕೋಮು ಗಲಭೆಗಳಿಗೆ ಸಂಬಂಧಿಸಿ ಬಂಧಿಸಲಾಗಿರುವ ಗೋರಕ್ಷಕ ಬಿಟ್ಟು ಬಜರಂಗಿ ಅವರನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನೂಹ್ ನ್ಯಾಯಾಲಯ ಗುರುವಾರ ಆದೇಶಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಬಜರಂಗಿಯನ್ನು ಕೋರ್ಟ್‌ಗೆ ಹಾಜರುಪಡಿಸಲಾಯಿತು. ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಕೋರ್ಟ್ ಆದೇಶಿಸಿದ ನಂತರ ಆತನನ್ನು ಫರಿದಾಬಾದ್ ಜಿಲ್ಲೆಯ ನೀಮ್ಕಾ ಜೈಲಿಗೆ ಕಳುಹಿಸಲಾಯಿತು' ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಎಎಸ್ಪಿ ಉಷಾ ಕುಂಡು ಅವರ ದೂರಿನನ್ವಯ ನೂಹ್‌ನ ಸದರ್ ಪೊಲೀಸ್ ಠಾಣೆಯಲ್ಲಿ ಬಿಟ್ಟು ವಿರುದ್ಧ ಹೊಸದಾಗಿ ಎಫ್‌ಐಆರ್ ದಾಖಲಿಸಿದ ನಂತರ, ಆತನನ್ನು ಫರಿದಾಬಾದ್‌ನಲ್ಲಿ ಪೊಲೀಸರು ಮಂಗಳವಾರ ಬಂಧಿಸಿದ್ದರು.

ದ್ವೇಷ ಭಾಷಣ ವಿರುದ್ಧ ಕ್ರಮ: ಸಿಜೆಐಗೆ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ದ್ವೇಷ ಭಾಷಣಕ್ಕೆ ಕಡಿವಾಣ ಹಾಕುವುದು ಹಾಗೂ ಭಯದ ವಾತಾವರಣ ನಿರ್ಮಿಸುವಂತಹ ಭಾಷಣಗಳಿರುವ ವಿಡಿಯೊಗಳನ್ನು ಹಂಚಿಕೊಳ್ಳುವುದನ್ನು ತಡೆಯಲು ಕ್ರಮ ಕೈಗೊಳ್ಳುವಂತೆ ಹರಿಯಾಣ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ದೆಹಲಿ ಹೈಕೋರ್ಟ್ ಮಹಿಳಾ ವಕೀಲರ ವೇದಿಕೆ ಒತ್ತಾಯಿಸಿದೆ.

ಈ ಕುರಿತು ಸುಪ್ರೀಂಕೋರ್ಟ್ ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿಗೆ ವೇದಿಕೆಯು ಪತ್ರ ಬರೆದಿದೆ.

ನೂಹ್ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಕೋಮು ಗಲಭೆಗಳ ಹಿನ್ನೆಲೆಯಲ್ಲಿ ಬರೆದಿರುವ ಈ ಪತ್ರಕ್ಕೆ 101 ವಕೀಲೆಯರು ಸಹಿ ಹಾಕಿದ್ದಾರೆ.

'ಯಾವುದೇ ಸಮುದಾಯ, ಪೂಜಾ ಸ್ಥಳಗಳಿಗೆ ಬೆದರಿಕೆ ಒಡ್ಡುವ ಅಥವಾ ಆರ್ಥಿಕ ಬಹಿಷ್ಕಾರಕ್ಕೆ ಒತ್ತಾಯಿಸುವ ವಿಡಿಯೊಗಳನ್ನು ಪತ್ತೆ ಮಾಡಬೇಕು ಹಾಗೂ ನಿಷೇಧಿಸಬೇಕು ಎಂಬುದಾಗಿ ಹರಿಯಾಣ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿದೆ.

ಕೋರ್ಟ್ ಹೊರಗೆ ಇತ್ಯರ್ಥಕ್ಕೆ ಆಹ್ವಾನ

ಜ್ಞಾನವಾಪಿ ವಿವಾದ: ಹಿಂದೂ–ಮುಸ್ಲಿಮರಿಗೆ ಸನಾತನ ಸಂಘದ ಬಹಿರಂಗ ಪತ್ರ

ವಾರಾಣಸಿ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶದ ಕಾಶಿ ದೇಗುಲದ ಸಂಕೀರ್ಣದಲ್ಲಿ ಇರುವ ಜ್ಞಾನವಾಪಿ ಮಸೀದಿ ವಿವಾದವನ್ನು ಕೋರ್ಟ್‌ನ ಕಟಕಟೆಯ ಹೊರಗೆ ಸೌಹಾರ್ದವಾಗಿ ಬಗೆಹರಿಸಿಕೊಳ್ಳಲು ಹಿಂದೂ ಪರ ಸಂಘಟನೆಯಾದ ವಿಶ್ವ ವೇದಿಕ್ ಸನಾತನ ಸಂಘ ಇಂಗಿತ ವ್ಯಕ್ತಪಡಿಸಿದೆ.

ಸಂಘದ ಅಧ್ಯಕ್ಷ ಜಿತೇಂದ್ರ ಸಿಂಗ್ ಬಿಸೆನ್ ಅವರು, ಈ ಕುರಿತು ಹಿಂದೂ ಮತ್ತು ಮುಸ್ಲಿಂ ಸಮುದಾಯದ ಎರಡೂ ಕಡೆಯ ಅರ್ಜಿದಾರರಿಗೆ ಬಹಿರಂಗವಾಗಿ ಪತ್ರ ಬರೆದಿದ್ದಾರೆ. ವಾರಾಣಸಿ ಜಿಲ್ಲಾ ನ್ಯಾಯಾಲಯದ ಆದೇಶದನ್ವಯ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ ಮಸೀದಿಯ ವೈಜ್ಞಾನಿಕ ಸಮೀಕ್ಷೆ ನಡೆಯುತ್ತಿದೆ. ಇದರ ಬೆನ್ನಲ್ಲೇ ಸನಾತನ ಸಂಘದ ಆಮಂತ್ರಣವು ಚರ್ಚೆಗೆ ಗ್ರಾಸವಾಗಿದೆ.

ಹಿಂದೂ ಪರ ಮುಖ್ಯ ಅರ್ಜಿದಾರ ರಾಕಿ ಸಿಂಗ್ ಅವರ ಒಪ್ಪಿಗೆ ಮೇರೆಗೆ ಈ ಪತ್ರ ಬರೆಯಲಾಗಿದೆ. ಇಬ್ಬರೂ ಮುಖಾಮುಖಿಯಾಗಿ ಕುಳಿತು ಪರಸ್ಪರ ಒಪ್ಪಿಗೆ ಮೂಲಕ ವಿವಾದವನ್ನು ಬಗೆಹರಿಸಿಕೊಳ್ಳಲು ಸಾಧ್ಯವಾದರೆ ಇದಕ್ಕಿಂತ ಉತ್ತಮವಾದ ಪರಿಹಾರ ಬೇರೊಂದಿಲ್ಲ ಎಂದು ಬಿಸೆನ್ ಪತ್ರದಲ್ಲಿ ಹೇಳಿದ್ದಾರೆ.

> ಮಾಧ್ಯಮದ ಮೂಲಕ ಸಮಿತಿಗೆ ಪತ್ರ ತಲುಪಿದೆ. ಸಭೆಯಲ್ಲಿ ಇದನ್ನು ಮಂಡಿಸಲಾಗುತ್ತದೆ. ಚರ್ಚಿಸಿ ತೀರ್ಮಾನಿಸಲಾಗುತ್ತದೆ.
> **ಮೊಹಮ್ಮದ್ ಯಾಸಿನ್,** ಜಂಟಿ ಕಾರ್ಯದರ್ಶಿ, ಅಂಜುಮನ್ ಇಂತಿಜಾಮಿಯಾ ಮಸೀದಿ ಸಮಿತಿ

ಕೆಲವು ಸಮಾಜಘಾತುಕ ಶಕ್ತಿಗಳು ಇದರ ಲಾಭ ಪಡೆಯಲು ಹವಣಿಸುತ್ತಿವೆ. ಇದು ಎರಡು ಸಮುದಾಯಗಳಿಗಷ್ಟೇ ಹಾನಿಕರವಲ್ಲ; ದೇಶ ಹಾಗೂ ಸಮಾಜಕ್ಕೂ ಅಘಾತಕಾರಿಯಾಗಲಿದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ವಿವಾದವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕಿದೆ. ದೇಶದ ಸುರಕ್ಷತೆ ಹಾಗೂ ಭದ್ರತೆ ದೃಷ್ಟಿಯಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಉತ್ತಮವಾಗಿದೆ. ನ್ಯಾಯಾಲಯದ ಹೊರಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ ಎನ್ನುವುದಾದರೆ ಇದನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ ಎಂದು ವಿವರಿಸಲಾಗಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಈಚೆಗೆ, 'ಮುಸ್ಲಿಂ ಸಮುದಾಯದಿಂದ ಐತಿಹಾಸಿಕ ತಪ್ಪಾಗಿದೆ. ಅದನ್ನು ಅವರು ಒಪ್ಪಿಕೊಳ್ಳಬೇಕಿದೆ' ಎಂದಿದ್ದರು.

'ಕೌಟುಂಬಿಕ ವ್ಯಾಜ್ಯ: ಮಗುವಿನ ಹಿತವೇ ಮುಖ್ಯವಾಗಬೇಕು'

ಮುಂಬೈ(ಪಿಟಿಐ): ಕೌಟುಂಬಿಕ ವ್ಯಾಜ್ಯಗಳಲ್ಲಿ ಮಗು ಯಾರ ರಕ್ಷಣೆಯಲ್ಲಿ ಇರಬೇಕು ಎಂಬ ಬಗ್ಗೆ ನಿರ್ಧರಿಸುವ ವೇಳೆ, ಮಗುವಿನ ಹಿತವನ್ನೇ ಪ್ರಮುಖವಾಗಿ ಪರಿಗಣಿಸಬೇಕು ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

'ತಂದೆ ಅಥವಾ ತಾಯಿ ಪೈಕಿ ಯಾರ ಕಸ್ಟಡಿಗೆ ಮಗುವನ್ನು ನೀಡಬೇಕು ಎಂಬುದನ್ನು ನಿರ್ಧರಿಸುವಾಗ ಮಗುವಿನ ಕಲ್ಯಾಣ ಕೂಡ ಬಹಳ ಮುಖ್ಯವಾಗುತ್ತದೆ' ಎಂದು ನ್ಯಾಯಮೂರ್ತಿ ಶರ್ಮಿಳಾ ದೇಶಮುಖ್ ಅವರಿದ್ದ ನ್ಯಾಯಪೀಠ ಹೇಳಿದೆ.

ಬಾಲಕಿಯನ್ನು ತಾಯಿಯ ಕಸ್ಟಡಿಗೆ ಒಪ್ಪಿಸಿ ಕೌಟುಂಬಿಕ ನ್ಯಾಯಾಲಯ ನೀಡಿದ್ದ ಮಧ್ಯಂತರ ಆದೇಶವನ್ನು ಎತ್ತಿ ಹಿಡಿದು ನ್ಯಾಯಮೂರ್ತಿ ದೇಶಮುಖ್ ಅವರು ಜುಲೈ 21ರಂದು ಹೊರಡಿಸಿರುವ ಆದೇಶದಲ್ಲಿ ಈ ಅಂಶ ಪ್ರಸ್ತಾಪಿಸಿದ್ದಾರೆ.

8 ವರ್ಷದ ಮಗಳನ್ನು ತನ್ನ ಪರಿತ್ಯಕ್ತ ಪತ್ನಿಯ ಕಸ್ಟಡಿಗೆ ನೀಡಬೇಕು ಎಂದು ಆದೇಶಿಸಿ ಬಾಂದ್ರಾ ಕೌಟುಂಬಿಕ ನ್ಯಾಯಾಲಯ ಫೆಬ್ರುವರಿಯಲ್ಲಿ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಪತಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಪೀಠ ವಜಾಗೊಳಿಸಿದೆ.

'ಕಲ್ಯಾಣ ಎಂಬ ಪದಕ್ಕೆ ವ್ಯಾಪಕ ಅರ್ಥ ಇದೆ. ಮಗುವೊಂದರ ಕಲ್ಯಾಣ ಎಂದಾಗ ಅದು ಮಗುವಿನ ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಒಳಗೊಂಡಿದೆ. ಆರೋಗ್ಯ, ನೆಮ್ಮದಿ, ಸಾಮಾಜಿಕ ಮತ್ತು ನೈತಿಕವಾಗಿ ಮಗುವಿನ ಸಮಗ್ರ ವಿಕಾಸ ಎಂಬುದು ಕೂಡ ಇದರಲ್ಲಿ ಸೇರಿವೆ' ಎಂದು ನ್ಯಾಯಪೀಠ ಹೇಳಿದೆ.

ವಿಚ್ಛೇದನ ಕೋರಿ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ ಪತಿ, ಮಗಳನ್ನು ತನ್ನ ಸುಪರ್ದಿಗೆ ನೀಡುವಂತೆ ಮನವಿ ಮಾಡಿದ್ದರು.

ವಿದೇಶಿ ಪದವಿಗಳಿಗೆ ತತ್ಸಮಾನ ಮಾನ್ಯತೆ: ಯುಜಿಸಿ ಕರಡು ಸಿದ್ಧ

ನವದೆಹಲಿ (ಪಿಟಿಐ): ವಿದೇಶಿ ವಿಶ್ವವಿದ್ಯಾಲಯಗಳ ಪದವಿಗಳಿಗೆ ತತ್ಸಮಾನ ಅನುಮೋದನೆ ನೀಡಿ ಮಾನ್ಯತೆ ಪ್ರಮಾಣಪತ್ರ ನೀಡುವ ಕುರಿತು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಮಾರ್ಗದರ್ಶಿ ಸೂತ್ರಗಳ ಕರಡು ನಿಯಮಾವಳಿ ರೂಪಿಸಿದೆ.

ಈ ಕರಡು ಮಾರ್ಗದರ್ಶಿ ಸೂತ್ರಗಳ ನಿಯಮಗಳು ದೂರಶಿಕ್ಷಣ ಹಾಗೂ ಆನ್‌ಲೈನ್ ಸ್ವರೂಪದಲ್ಲಿ ಪಡೆದಿರುವ ಯಾವುದೇ ಪದವಿಗಳಿಗೆ ಅನ್ವಯಿಸುವುದಿಲ್ಲ. ಅಲ್ಲದೆ, ವಿದೇಶದ ಶಿಕ್ಷಣ ಮಂಡಳಿಗಳ ಮಾನ್ಯತೆಗೆ ಒಳಪಟ್ಟಿರುವ ಶಾಲೆಗಳಿಂದ ಪಡೆದ ಶಿಕ್ಷಣಕ್ಕೂ ಮಾನ್ಯತೆ ನೀಡುವ ಬಗ್ಗೆಯೂ ಯುಜಿಸಿ ಕರಡು ನಿಯಮಾವಳಿ ರೂಪಿಸಿದೆ.

ವಿದೇಶಿ ವಿ.ವಿಗಳು ಭಾರತದ ಗಿಫ್ಟ್ ಸಿಟಿಯಲ್ಲಿ (ಗುಜರಾತ್ ಇಂಟರ್‌ನ್ಯಾಷನಲ್ ಫೈನಾನ್ಸ್ ಟೆಕ್ ಸಿಟಿ) ಕ್ಯಾಂಪಸ್ ತೆರೆಯುವ ಪ್ರಕ್ರಿಯೆಗೆ ಚಾಲನೆ ನೀಡಿರುವುದು ಹಾಗೂ ಭಾರತೀಯ ವಿಶ್ವವಿದ್ಯಾಲಯಗಳು ಜಂಟಿ ಪದವಿ ಕುರಿತು ವಿದೇಶಿ ಸಂಸ್ಥೆಗಳ ಜೊತೆಗೆ ಒಪ್ಪಂದಕ್ಕೆ ಮುಂದಾಗಿರುವ ಹೊತ್ತಿನಲ್ಲಿ ಈ ಕರಡು ಸಿದ್ಧಗೊಂಡಿದೆ.

ಯುಜಿಸಿ ರೂಪಿಸಿರುವ 'ವಿದೇಶಿ ಶಿಕ್ಷಣ ಸಂಸ್ಥೆಗಳ ಪದವಿ ತತ್ಸಮಾನ ಮಾನ್ಯತೆ ನೀಡುವ ನಿಯಮಗಳು 2023' ಕರಡು ನಿಯಮಗಳು ಅಂತರರಾಷ್ಟ್ರೀಯವಾಗಿ ಪ್ರಸ್ತುತವಾಗಿರುವ ಪಠ್ಯಕ್ರಮ, ಶೈಕ್ಷಣಿಕ ಮತ್ತು ಸಂಶೋಧನಾ ಸಹಯೋಗ ಕುರಿತ ಅಂಶಗಳನ್ನು ಒಳಗೊಂಡಿದೆ.

ವಿದ್ಯಾರ್ಥಿ ಸಾಮಾನ್ಯ ಸ್ವರೂಪದಲ್ಲಿ, ವ್ಯಕ್ತಿಗತವಾಗಿ (ಆನ್‌ಲೈನ್, ದೂರ ನಿಯಂತ್ರಣ ಶಿಕ್ಷಣ ಪದವಿ ಹೊರತುಪಡಿಸಿ) ಪದವಿ ಪಡೆದಿರಬೇಕು. ನಿಗದಿತ ಕೋರ್ಸ್‌ಗೆ ಪ್ರವೇಶದ ಅಗತ್ಯಗಳು, ಅದಕ್ಕೆ ಸಮಾನವಾದ ಭಾರತದಲ್ಲಿನ ಕೋರ್ಸ್ ಸ್ವರೂಪಕ್ಕೆ ಪೂರಕವಾಗಿರಬೇಕು ಎಂದು ನಿಯಮದಲ್ಲಿ ಉಲ್ಲೇಖಿಸಲಾಗಿದೆ.

ಯುಜಿಸಿ ನಿಯಮಗಳ ಅನುಸಾರ, ತತ್ಸಮಾನ ಎಂದು ಮಾನ್ಯತೆ ನೀಡಿ ನೀಡುವ ಪ್ರಮಾಣಪತ್ರವನ್ನು ಭಾರತದಲ್ಲಿ ವಿಶ್ವವಿದ್ಯಾಲಯಗಳಲ್ಲಿನ ಪ್ರವೇಶ ಅಥವಾ ಉದ್ಯೋಗವಕಾಶಕ್ಕಾಗಿ ಪರಿಗಣಿಸಲಾಗುತ್ತದೆ. ಪ್ರಸ್ತುತ, ಅಖಿಲ ಭಾರತ ವಿಶ್ವವಿದ್ಯಾಲಯಗಳ (ಎಐಯು) ಮೌಲ್ಯಮಾಪನ ವಿಭಾಗ ವಿದೇಶಗಳ ಶಿಕ್ಷಣ ಸಂಸ್ಥೆಯಿಂದ ಪಡೆದ ಪದವಿಗೆ ತತ್ಸಮಾನ ಪ್ರಮಾಣಪತ್ರ ನೀಡುತ್ತಿದೆ.

ಡಿಜಿಟಲ್ ನೀತಿ: ಅಮೆರಿಕದ ವಿಶೇಷ ರಾಯಭಾರಿ ಭಾರತಕ್ಕೆ ಭೇಟಿ

ನವದೆಹಲಿ: ಅಮೆರಿಕದ ಸೈಬರ್‌ಸ್ಪೇಸ್ ಮತ್ತು ಡಿಜಿಟಲ್ ನೀತಿಗೆ ಸಂಬಂಧಿಸಿದ ವಿಶೇಷ ರಾಯಭಾರಿ (ಅಂಬಾಸಡರ್ ಅಟ್ ಲಾರ್ಜ್) ನಥಾನಿಯೆಲ್ ಸಿ.ಫಿಕ್ ಅವರು ಭಾರತ ಪ್ರವಾಸ ಆರಂಭಿಸಿದ್ದಾರೆ.

ಆಗಸ್ಟ್ 20ರವರೆಗೆ ಭಾರತದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು. ಆ.20ರಿಂದ 23ರವರೆಗೆ ಶ್ರೀಲಂಕಾ ಪ್ರವಾಸದಲ್ಲಿರುವರು ಎಂದು ಮೂಲಗಳು ತಿಳಿಸಿವೆ. ಜಿ–20 ಶೃಂಗಸಭೆ ಭಾಗವಾಗಿ ಬೆಂಗಳೂರಿನಲ್ಲಿ ನಡೆಯಲಿರುವ ಡಿಜಿಟಲ್ ಆರ್ಥಿಕತೆ ಕುರಿತ ಸಚಿವರ ಮಟ್ಟದ ಸಭೆಯಲ್ಲಿ ಪಾಲ್ಗೊಳ್ಳುವ ಅಮೆರಿಕ ನಿಯೋಗದ ನೇತೃತ್ವವನ್ನು ನಥಾನಿಯೆಲ್ ವಹಿಸುವರು.ಈ ಪ್ರವಾಸದ ವೇಳೆ ಅವರು, ತಂತ್ರಜ್ಞಾನ ಕ್ಷೇತ್ರ ಉದ್ಯಮಿಗಳು ಹಾಗೂ ನಾಗರಿಕ ಸಮಾಜದ ಪ್ರತಿನಿಧಿಗಳನ್ನು ಭೇಟಿ ಮಾಡಿ, ಚರ್ಚಿಸುವರು.

ಬೆಂಗಳೂರಿನ ಯುವತಿ ಸೇರಿ ಐವರಿಗೆ 'ಯಂಗ್ ಇಕೊ– ಹೀರೊ' ಪ್ರಶಸ್ತಿ

ವಾಷಿಂಗ್ಟನ್ (ಪಿಟಿಐ): ಜಾಗತಿಕ ಮಟ್ಟದಲ್ಲಿ 17 ಯುವ ಪರಿಸರ ಕಾರ್ಯಕರ್ತರಿಗೆ '2023– ಇಂಟರ್‌ನ್ಯಾಷನಲ್ ಯಂಗ್ ಇಕೊ–ಹೀರೊ' ಪ್ರಶಸ್ತಿ ನೀಡಲಾಗಿದ. ಪ್ರಶಸ್ತಿ ಸ್ವೀಕರಿಸಿದವರಲ್ಲಿ ಬೆಂಗಳೂರಿನ ಯುವತಿ ಸೇರಿ ಭಾರತದ ಐವರು ಇದ್ದಾರೆ.

ಬೆಂಗಳೂರಿನ ಮಾನ್ಯ ಹರೀಶ್, ಮೀರತ್‌ನ ಐಹಾ ದೀಕ್ಷಿತ್, ದೆಹಲಿಯ ನಿರ್ವಾಣ್ ಸೊಮಾನಿ ಮತ್ತು ಮನ್ನತ್ ಕೌರ್ ಹಾಗೂ ಮುಂಬೈನ ಕರ್ಣವ್ ರಸ್ತೋಗಿ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

8ರಿಂದ 12 ವರ್ಷ ವಯೋಮಾನದವರ ವಿಭಾಗದ ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಪಡೆದ ಮಾನ್ಯ ಹರೀಶ್, ಪುಸ್ತಕಗಳು, ಬ್ಲಾಗ್ ಮತ್ತು ಯುಟ್ಯೂಬ್ ವಾಹಿನಿ 'ದಿ ಲಿಟ್ಲ್ ಎನ್ವಿರಾನ್‌ಮೆಂಟಲಿಸ್ಟ್' ಮೂಲಕ ಪರಿಸರಕ್ಕೆ ಸಂಬಂಧಿಸಿದ ಸವಾಲುಗಳು ಮತ್ತು ಹವಾಮಾನ ಬದಲಾವಣೆ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ.



ಮಲೇಷ್ಯಾದ ಸೆಂಟ್ರಲ್ ಸೆಲಂಗೊರ್ ಸ್ಟೇಟ್‌ನಲ್ಲಿರುವ ಹೆದ್ದಾರಿ ಮೇಲೆ ವಿಮಾನವೊಂದು ಗುರುವಾರ ಪತನಗೊಂಡಿದ್ದು, 10 ಮಂದಿ ಮೃತಪಟ್ಟರು –ಎಎಫ್‌ಪಿ ಚಿತ್ರ

ಚರ್ಚ್, ಕ್ರೈಸ್ತರ ಮನೆ ಮೇಲೆ ದಾಳಿ: 135 ಮಂದಿ ಬಂಧನ

ಲಾಹೋರ್ (ಪಿಟಿಐ): ಪಂಜಾಬ್ ಪ್ರಾಂತ್ಯದ 21 ಚರ್ಚ್‌ಗಳ ಮೇಲಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿ 135 ಜನರನ್ನು ಪೊಲೀಸರು ಬಂಧಿಸಿದ್ದು, ಗಲಭೆ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಸರ್ಕಾರ ಗುರುವಾರ ಆದೇಶಿಸಿದೆ.

ಇಬ್ಬರು ಕ್ರೈಸ್ತರು ಕುರಾನ್ ಅಪವಿತ್ರಗೊಳಿಸಿದ್ದಾರೆ ಎಂಬ ವರದಿ ಹಿನ್ನೆಲೆಯಲ್ಲಿ ಉದ್ರಿಕ್ತ ಗುಂಪು, ಫೈಸಲಾಬಾದ್ ಜಿಲ್ಲೆಯ ಜರನ್ವಾಲಾ ತಹಸಿಲ್‌ನಲ್ಲಿ ಕ್ರೈಸ್ತ ಸಮುದಾಯದ ಹಲವಾರು ಚರ್ಚ್‌ಗಳು ಮತ್ತು ಮನೆಗಳಿಗೆ ಬೆಂಕಿ ಹಚ್ಚಿದೆ.

ಪಂಜಾಬ್ ಸರ್ಕಾರದ ಪ್ರಕಾರ, ಚರ್ಚ್‌ಗಳ ಮೇಲೆ ದಾಳಿ ನಡೆಸಿದ ಉಗ್ರಗಾಮಿ ಗುಂಪು ತೆಹ್ರೀಕ್-ಎ-ಲಬ್ಬೈಕ್ ಪಾಕಿಸ್ತಾನ್ (ಟಿಎಲ್‌ಪಿ) ಕಾರ್ಯಕರ್ತರು ಸೇರಿ 135 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಧರ್ಮನಿಂದನೆ ಆರೋಪದಡಿ 600 ಶಂಕಿತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪಂಜಾಬ್ ಸಚಿವ ಅಮೀರ್ ಮಿರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಐಟಿ ಉದ್ಯೋಗಿ ಬಂಧನ

ಕೊಚ್ಚಿ (ಪಿಟಿಐ): ಬುರ್ಖಾ ಧರಿಸಿ ಲುಲು ಮಾಲ್‌ನ ಮಹಿಳಾ ಶೌಚಾಲಯ ಪ್ರವೇಶಿಸಿ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸಿದ್ದ ಆರೋಪದಡಿ 23 ವರ್ಷದ ಐಟಿ ಉದ್ಯೋಗಿಯನ್ನು ಬುಧವಾರ ಪೊಲೀಸರು ಬಂಧಿಸಿದ್ದಾರೆ.

ಬಿ.ಟೆಕ್ ಪದವೀಧರನಾಗಿರುವ ಆರೋಪಿ ವಿರುದ್ಧ ವಿವಿಧ ಕಲಂ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66ಇ ಅಡಿ ಪ್ರಕರಣ ದಾಖಲಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

17-8-2023

ಜಾವಾ 70/80(ಹೊಸ)	13300-13400
ಜಾವಾ 80/90(ಹೊಸ)	11900-12000
ದಪ್ಪ ಮಧ್ಯಪ್ರದೇಶ(ಹೊಸ)	12900-13000
ದಪ್ಪ ಗುಜರಾತ್(ಹೊಸ)	14200-14300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1860(1850)
ಒಂದು ವಾರದ ಡೆಲಿವರಿ	1855(1845)
ಸೋಯಾ ಕಚ್ಚಾ	915(915)
ಪಾಮ್ ವಾರದ ಡೆಲಿವರಿ	858(853)
ಸೂರ್ಯಕಾಂತಿ ಎಣ್ಣೆ ಕಚ್ಚಾ	880(880)


ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,400 (58,650)
ಬೆಳ್ಳಿ ಕೆ.ಜಿ 70,450 (70,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು

388



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,465
ಇಂದಿನ ಅಂತ್ಯ	19,365
▼	100
ದಿನದ ಕನಿಷ್ಠ	19,326

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹515
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹520

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹350-601
ದ್ವಿತಳಿ (ಬಿ.ವಿ) ₹365-692

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹142.50
ಆರ್‌ಎಸ್‌ಎಸ್-5 ₹136
ಗುಡ್ ಲಾಟ್ ₹121
(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1850 (1840)
ಸೋಯಾ (ರಿಫೈಂಡ್)	₹950 (950)
ಸೂರ್ಯಕಾಂತಿ (ರಿಫೈಂಡ್)	₹960 (950)
ಪಾಮೋಲಿನ್	₹860 (855)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹7624-7900
ತುರುವೇಕೆರೆ	₹9100-9100

ಬೆಲೆ ಏರಿಕೆ ನಿಯಂತ್ರಣ, ಪೂರೈಕೆ ಸುಧಾರಿಸುವ ಉದ್ದೇಶ

ರಷ್ಯಾ: ರಿಯಾಯಿತಿ ದರಕ್ಕೆ ಗೋಧಿ?

ಮುಖ್ಯಾಂಶಗಳು
- 90 ಲಕ್ಷ ಟನ್ ಆಮದು ಸಾಧ್ಯತೆ
- 7 ತಿಂಗಳ ಗರಿಷ್ಠ ಮಟ್ಟದಲ್ಲಿ ಗೋಧಿಯ ಸಗಟು ದರ

ನವದೆಹಲಿ/ಮುಂಬೈ (ರಾಯಿಟರ್ಸ್): ರಷ್ಯಾದಿಂದ ರಿಯಾಯಿತಿ ಬೆಲೆಗೆ ಗೋಧಿಯನ್ನು ಆಮದು ಮಾಡಿಕೊಳ್ಳುವ ಸಂಬಂಧ ಕೇಂದ್ರ ಸರ್ಕಾರವು ಮಾತುಕತೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ಹಲವು ರಾಜ್ಯಗಳ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದೆ ಮತ್ತು ಲೋಕಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿರುವುದರಿಂದ ಆಹಾರ ಹಣದುಬ್ಬರವನ್ನು ನಿಯಂತ್ರಿಸಲು, ಪೂರೈಕೆ ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ ಎಂದು ತಿಳಿಸಿವೆ.

ಕೊರತೆ ನೀಗಿಸಲು ಗರಿಷ್ಠ 40 ಲಕ್ಷ ಟನ್ ಗೋಧಿ ಅಗತ್ಯ ಇದೆ. ಆದರೆ, ಬೆಲೆ ಹೆಚ್ಚಿನ ಪ್ರಮಾಣದಲ್ಲಿ ಇಳಿಕೆ ಆಗಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರವು ಗರಿಷ್ಠ 90 ಲಕ್ಷ ಟನ್‌ವರೆಗೆ ಗೋಧಿ ಆಮದು ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಭಾರತವು ಪ್ರತಿ ಟನ್ ಗೋಧಿಗೆ 25ರಿಂದ 40 ಡಾಲರ್‌ರವರೆಗೆ ಪಾವತಿಸಿ ಸುಲಭವಾಗಿ ರಷ್ಯಾದಿಂದ ಆಮದು ಮಾಡಿಕೊಳ್ಳಬಹುದು. ಸಾಗಣೆ ವೆಚ್ಚ ಸೇರಿಸಿದರೂ ಸ್ಥಳೀಯ ದರಕ್ಕಿಂತ ಕಡಿಮೆಗೆ ಗೋಧಿ



ದೊರೆಯುತ್ತದೆ ಎಂದು ಜಾಗತಿಕ ಮಟ್ಟದಲ್ಲಿ ವ್ಯಾಪಾರ ನಡೆಸುತ್ತಿರುವ ಮುಂಬೈ ಮೂಲದ ವಿತರಕರೊಬ್ಬರು ಹೇಳಿದ್ದಾರೆ.

ಹೆಚ್ಚಿದ ಗೋಧಿ ಬೆಲೆ: ಗೋಧಿ ಸೀಮಿತ ಪ್ರಮಾಣದಲ್ಲಿ ಪೂರೈಕೆ ಆಗುತ್ತಿರುವುದರಿಂದ ಸಗಟು ಮಾರಾಟ ದರವು ಆಗಸ್ಟ್‌ನಲ್ಲಿ ಶೇ 10ರಷ್ಟು ಹೆಚ್ಚಾಗಿದೆ. ಸರ್ಕಾರದ ಗೋದಾಮುಗಳಲ್ಲಿ ಗೋಧಿ ದಾಸ್ತಾನು ಆಗಸ್ಟ್ 1ರಂದು 2.83 ಕೋಟಿ ಟನ್‌ಗಳಷ್ಟು ಇದೆ. ಇದು 10 ವರ್ಷದ ಸರಾಸರಿಗಿಂತಲೂ ಶೇ 20ರಷ್ಟು ಕಡಿಮೆ.

ಕೇಂದ್ರ ಸರ್ಕಾರವು ಖಾಸಗಿ ವ್ಯಾಪಾರಿಗಳ ಮೂಲಕ ಮತ್ತು ಸರ್ಕಾರದ ಮಟ್ಟದಲ್ಲಿ ಆಮದು ಮಾಡಿಕೊಳ್ಳಲು ಇರುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ ಎಂದು ಮೂಲವೊಂದು ಹೇಳಿದೆ.

ಕೇಂದ್ರ ಸರ್ಕಾರದ ಮಟ್ಟದಲ್ಲಿ ಒಪ್ಪಂದ ಮಾಡಿಕೊಂಡು ಗೋಧಿ ಆಮದು ಈಚಿನ ವರ್ಷಗಳಲ್ಲಿ ಆಗಿಲ್ಲ. 2017ರಲ್ಲಿ ಖಾಸಗಿ ವರ್ತಕರು 53 ಲಕ್ಷ ಟನ್ ಆಮದು ಮಾಡಿಕೊಂಡಿದ್ದರು.

ಈ ಕುರಿತು ಸರ್ಕಾರದ ವಕ್ತಾರರು ಪ್ರತಿಕ್ರಿಯೆ ನೀಡಿಲ್ಲ. ರಷ್ಯಾದಿಂದ ಗೋಧಿ ಆಮದು ಮಾಡಿಕೊಳ್ಳುವ ಯಾವುದೇ ಆಲೋಚನೆ ಇಲ್ಲ ಎಂದು ಕೇಂದ್ರ ಆಹಾರ ಸಚಿವಾಲಯದ ಹಿರಿಯ ಅಧಿಕಾರಿ ಸಂಜೀವ್ ಚೋಪ್ರಾ ಕಳೆದ ತಿಂಗಳು ಹೇಳಿದ್ದರು.

ಕನಿಷ್ಠ ಮಟ್ಟಕ್ಕೆ ರೂಪಾಯಿ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಗುರುವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹83.09ಕ್ಕೆ ಕುಸಿದಿದೆ. ಡಾಲರ್ ಬಲವರ್ಧನೆ, ದೇಶಿ ಬಂಡವಾಳ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆದಿದ್ದು ಇದಕ್ಕೆ ಕಾರಣ. ವಹಿವಾಟಿನ ನಡುವಿನಲ್ಲಿ ರೂಪಾಯಿ ಮೌಲ್ಯವು ₹83.16ರವರೆಗೂ ಕುಸಿದಿತ್ತು.

₹5 ಲಕ್ಷಕ್ಕಿಂತ ಹೆಚ್ಚಿನ ಪ್ರೀಮಿಯಂ ವಿಮೆಗೆ ತೆರಿಗೆ

ನವದೆಹಲಿ (ಪಿಟಿಐ): ವಾರ್ಷಿಕ ಪ್ರೀಮಿಯಂ ಮೊತ್ತವು ₹5 ಲಕ್ಷಕ್ಕಿಂತ ಹೆಚ್ಚಿರುವ ಜೀವ ವಿಮಾ ಪಾಲಿಸಿಗಳಿಂದ ಸಿಗುವ ಆದಾಯಕ್ಕೆ ತೆರಿಗೆಯನ್ನು ಲೆಕ್ಕಹಾಕುವ ಬಗೆಯನ್ನು ಆದಾಯ ತೆರಿಗೆ ಇಲಾಖೆಯು ಅಂತಿಮಗೊಳಿಸಿದೆ.

ಇದಕ್ಕೆ ಸಂಬಂಧಿಸಿದ ನಿಯಮಗಳನ್ನು ಕೇಂದ್ರ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ಜೀವ ವಿಮೆಯ ಪ್ರೀಮಿಯಂ ಮೊತ್ತ ₹5 ಲಕ್ಷಕ್ಕಿಂತ ಹೆಚ್ಚು ಆಗಿದ್ದಲ್ಲಿ, ವಿಮಾ ಪಾಲಿಸಿಯನ್ನು 2023ರ ಏಪ್ರಿಲ್ 1ರ ನಂತರ ಪಡೆದಿದ್ದಲ್ಲಿ, ಆ ವಿಮೆಯ ಅವಧಿ ಪೂರ್ಣಗೊಂಡ ನಂತರ ಸಿಗುವ ಮೊತ್ತಕ್ಕೆ ತೆರಿಗೆ ಅನ್ವಯವಾಗುತ್ತದೆ.

ವಾರ್ಷಿಕ ಪ್ರೀಮಿಯಂ ಮೊತ್ತವು ₹5 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ಜೀವ ವಿಮಾ ಪಾಲಿಸಿಗಳ ಅವಧಿ ಪೂರ್ಣಗೊಂಡ ನಂತರ ಸಿಗುವ ಮೊತ್ತಕ್ಕೆ ತೆರಿಗೆ ವಿನಾಯಿತಿ ಇರುತ್ತದೆ. ಈ ಬದಲಾವಣೆ ಬಗ್ಗೆ ಕೇಂದ್ರ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು.

ಪಾಲಿಸಿ ಹೊಂದಿರುವ ವ್ಯಕ್ತಿಯ ಮರಣದ ನಂತರದಲ್ಲಿ ಸಿಗುವ ಮೊತ್ತಕ್ಕೆ ತೆರಿಗೆ ವಿನಾಯಿತಿ ಮುಂದುವರಿದಿದೆ.

ಠೇವಣಿ ಹುಡುಕಿ, ಹಿಂಪಡೆಯಲು ಆರ್‌ಬಿಐನಿಂದ ಪೋರ್ಟಲ್



ಮುಂಬೈ (ಪಿಟಿಐ): ಬ್ಯಾಂಕ್‌ಗಳಲ್ಲಿ ವರ್ಷಗಳಿಂದ ಉಳಿದುಕೊಂಡಿರುವ ಠೇವಣಿಗಳನ್ನು ಹುಡುಕಿ, ವಾಪಸ್ ಪಡೆದುಕೊಳ್ಳಲು ನೆರವು ನೀಡುವ ಕೇಂದ್ರೀಕೃತ ಪೋರ್ಟಲ್‌ಗೆ (ಯುಡಿಜಿಎಎಂ) ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗುರುವಾರ ಚಾಲನೆ ನೀಡಿದೆ.

ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ಇರುವ, ಯಾರೂ ಕೇಳದೆ ಉಳಿದುಕೊಂಡಿರುವ ಠೇವಣಿಗಳನ್ನು ಶೋಧಿಸಲು ಸಾರ್ವಜನಿಕರಿಗೆ ಇದು ನೆರವಾಗುತ್ತದೆ. ಈ ಪೋರ್ಟಲ್‌ಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಚಾಲನೆ ನೀಡಿದ್ದಾರೆ.

ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), ಪಂಜಾಬ್ ನ್ಯಾಷನಲ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಧನಲಕ್ಷ್ಮಿ ಬ್ಯಾಂಕ್, ಸೌತ್ ಇಂಡಿಯನ್ ಬ್ಯಾಂಕ್, ಡಿಬಿಎಸ್ ಬ್ಯಾಂಕ್ ಮತ್ತು ಸಿಟಿ ಬ್ಯಾಂಕ್‌ನಲ್ಲಿ ಈ ರೀತಿ ಇರುವ ಠೇವಣಿಗಳನ್ನು ಈಗ ಹುಡುಕಬಹುದು. ಇತರ ಬ್ಯಾಂಕ್‌ಗಳಲ್ಲಿನ ಠೇವಣಿಗಳನ್ನು ಹುಡುಕುವ ಸೌಲಭ್ಯವನ್ನು ಅಕ್ಟೋಬರ್ 15ಕ್ಕೂ ಮೊದಲು ಆರಂಭಿಸಲಾಗುವುದು ಎಂದು ಆರ್‌ಬಿಐ ತಿಳಿಸಿದೆ.

ಈ ಬಗೆಯ ಪೋರ್ಟಲ್ ಅಭಿವೃದ್ಧಿಪಡಿಸಲಾಗುವುದು ಎಂದು ಆರ್‌ಬಿಐ ಏಪ್ರಿಲ್ 6ರಂದು ತಿಳಿಸಿತ್ತು.

ಯಾರೂ ಕೇಳದೆ ಉಳಿದಿರುವ ಠೇವಣಿಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ, ಈ ವಿಚಾರವಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಆರ್‌ಬಿಐ ಕಾಲಕಾಲಕ್ಕೆ ಕಾರ್ಯಕ್ರಮ ರೂಪಿಸುತ್ತಿದೆ. ಸಾರ್ವಜನಿಕರಿಗೆ ಈ ಪೋರ್ಟಲ್, ತಮ್ಮ ಠೇವಣಿಗಳನ್ನು ಹುಡುಕಿ ಅಲ್ಲಿರುವ ಮೊತ್ತವನ್ನು ಹಿಂದಕ್ಕೆ ಪಡೆಯಲು ಅಥವಾ ಆ ಖಾತೆಯನ್ನು ಮತ್ತೆ ಸಕ್ರಿಯಗೊಳಿಸಲು ನೆರವಾಗುತ್ತದೆ.

ಯಾರೂ ಕೇಳದೆ ಉಳಿದುಕೊಂಡಿದ್ದ ₹35 ಸಾವಿರ ಕೋಟಿ ಮೊತ್ತವನ್ನು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಫೆಬ್ರುವರಿಯಲ್ಲಿ ಆರ್‌ಬಿಐಗೆ ವರ್ಗಾವಣೆ ಮಾಡಿದ್ದವು. ಎಸ್‌ಬಿಐನಲ್ಲಿ ₹8,086 ಕೋಟಿ, ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ₹5,340 ಕೋಟಿ, ಕೆನರಾ ಬ್ಯಾಂಕ್‌ನಲ್ಲಿ ₹4,558 ಕೋಟಿ ಮತ್ತು ಬ್ಯಾಂಕ್ ಆಫ್ ಬರೋಡದಲ್ಲಿ ₹3,904 ಕೋಟಿ ಈ ರೀತಿ ಉಳಿದುಕೊಂಡಿತ್ತು.

ಮೊಬೈಲ್ ಸಿಮ್ ವಿತರಕರ ಪರಿಶೀಲನೆ ಕಡ್ಡಾಯ

ನವದೆಹಲಿ (ಪಿಟಿಐ): ಡಿಜಿಟಲ್ ವಂಚನೆಯನ್ನು ತಡೆಯುವ ಉದ್ದೇಶದಿಂದ, ಸಿಮ್ ಕಾರ್ಡ್ ವಿತರಕರ ಪರಿಶೀಲನೆಯನ್ನು ಕಡ್ಡಾಯ ಮಾಡಲಾಗಿದೆ. ನಿಯಮ ಉಲ್ಲಂಘನೆ ಮಾಡುವವರಿಗೆ ₹10 ಲಕ್ಷ ದಂಡ ವಿಧಿಸಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ಹೇಳಿದ್ದಾರೆ.

ಹೊಸ ನಿಯಮವು ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ. ದೇಶದಲ್ಲಿ 10 ಲಕ್ಷ ವಿತರಕರಿದ್ದು, ಪರಿಶೀಲನೆಗೆ 6 ತಿಂಗಳ ಕಾಲಾವಕಾಶ ನೀಡಲಾಗುವುದು ಅವರು ತಿಳಿಸಿದ್ದಾರೆ.

ವಿತರಕರನ್ನು ನೇಮಿಸುವ ಮೊದಲು ದೂರಸಂಪರ್ಕ ಕಂಪನಿಗಳು ವಹಿವಾಟು ನಡೆಸುವವರಿಗೆ ಸಂಬಂಧಿಸಿದ ಮಾಹಿತಿ ಮತ್ತು ಅವರ ವಹಿವಾಟಿಗೆ ಸಂಬಂಧಿಸಿದ ಎಲ್ಲ ದಾಖಲೆಪತ್ರಗಳನ್ನು ಪಡೆದು ಪರಿಶೀಲನೆ ನಡೆಸಲಿವೆ.

ಈ ಮೊದಲು ವಿತರಕರ ವಿವರವಾದ ದಾಖಲೆಪತ್ರಗಳನ್ನು ಪರಿಶೀಲಿಸುವ ಸಂಬಂಧ ನಿಯಮದಲ್ಲಿ ಸೂಚಿಸಿರಲಿಲ್ಲ ಎಂದು ತಿಳಿಸಿದ್ದಾರೆ.



ಸರ್ಕಾರವು 52 ಲಕ್ಷ ಮೊಬೈಲ್ ಸಂಪರ್ಕಗಳನ್ನು ಕಡಿತಗೊಳಿಸಿದೆ. 2023ರ ಮೇ ಬಳಿಕ 67 ಸಾವಿರ ವಿತರಕರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದ್ದು, 300 ಸಿಮ್ ಕಾರ್ಡ್ ವಿತರಕರ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಂಚನೆಯ ಚಟುವಟಿಕೆಗಳಲ್ಲಿ ತೊಡಗಿದ್ದ ಸುಮಾರು 66 ಸಾವಿರ ಖಾತೆಗಳನ್ನು ವಾಟ್ಸ್‌ಆ್ಯಪ್ ಬ್ಲಾಕ್ ಮಾಡಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

‘ಕಲ್ಟ್ ಇನ್ನೋವೇಟರ್23’ ಪ್ರಶಸ್ತಿ ಪ್ರದಾನ

ಸಹಭಾಗಿತ್ವದಿಂದ ಅಭಿವೃದ್ಧಿ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯವಾಗಿ ನಡೆಯುವ ಅನ್ವೇಷಣೆಗಳಿಗೆ ದೂರಗಾಮಿ ಪರಿಣಾಮ ಬೀರುವ ಸಾಮರ್ಥ್ಯ ಇರುತ್ತವೆ. ಅದು ಜಾಗತಿಕ ಮಟ್ಟದಲ್ಲಿ ಪ್ರಭಾವ ಬೀರಬೇಕಾದರೆ ಎಲ್ಲರ ಪಾಲ್ಗೊಳ್ಳುವಿಕೆ, ಸಹಭಾಗಿತ್ವ, ಸಾಮೂಹಿಕ ದೃಷ್ಟಿಕೋನ ಅಗತ್ಯ ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂ.ಬಿ. ಪಾಟೀಲ ಹೇಳಿದರು.

ನಗರದಲ್ಲಿ ಗುರುವಾರ ಆರಂಭವಾದ 19ನೇ ವರ್ಷದ ಸಿಐಐ-ಇಂಡಿಯಾ ಇನ್ನೋವರ್ಸ್-2023 ಸಮಾವೇಶದಲ್ಲಿ ವಿಜೇತ ತಂತ್ರಜ್ಞರಿಗೆ ‘ಕಲ್ಟ್ ಇನ್ನೋವೇಟರ್-23’ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಆಧುನಿಕ ತಂತ್ರಜ್ಞಾನ, ಡೇಟಾ ಅನಲಿಟಿಕ್ಸ್ ಮತ್ತು ಡಿಜಿಟಲ್ ಸಂಪರ್ಕ ಪ್ರಮುಖ ಪಾತ್ರ ವಹಿಸುತ್ತಿವೆ. ನಾವೀನ್ಯ ಸೂಚ್ಯಂಕದಲ್ಲಿ ಕರ್ನಾಟಕ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ಬೆಂಗಳೂರಲ್ಲೇ 43 ಯೂನಿಕಾರ್ನ್ ದರ್ಜೆಯ ಕಂಪನಿಗಳಿವೆ ಎಂದು ವಿವರಿಸಿದರು.



ಬೆಂಗಳೂರಿನಲ್ಲಿ ಗುರುವಾರ ಆರಂಭಗೊಂಡ 19ನೇ ವರ್ಷದ ಸಿಐಐಇಂಡಿಯಾ ಸಮಾವೇಶದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ‘ಕಲ್ಟ್ ಇನ್ನೋವೇಟರ್23’ ಪ್ರಶಸ್ತಿ ಪ್ರದಾನ ಮಾಡಿದರು

ಹೈದರಾಬಾದ್ ಮೂಲದ ನೆಮೋಕೇರ್ ಕಂಪನಿಯ ಸಹ-ಸ್ಥಾಪಕ ಮನೋಜ್ ಶಂಕರ್ ‘ಕಲ್ಟ್ ಇನ್ನೋವೇಟರ್-23’ ಪ್ರಶಸ್ತಿಗೆ ಪಾತ್ರರಾದರು. ಜನಿತ್ರಿ ಸಹ-ಸ್ಥಾಪಕ ಅರುಣ್ ಅಗರ್‌ವಾಲ್ ಮತ್ತು ವಿಗಾಟ್ ಯುಟಿಲಿಟಿ ಸಲ್ಯೂಷನ್ಸ್ ಸಹ-ಸ್ಥಾಪಕ ಅಭಿಲಾಶ್ ಹರಿದಾಸ್ ಒಂದನೇ ರನ್ನರ್ ಅಪ್ ಹಾಗೂ ಎರಡನೇ ರನ್ನರ್ ಅಪ್ ಪುರಸ್ಕಾರಕ್ಕೆ ಪಾತ್ರರಾದರು.

ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಇನ್ಫೊಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್ ಇದ್ದರು.

ದ್ವಿಚಕ್ರ ಇ.ವಿ. ಮಾರಾಟ ಇಳಿಕೆ

ಮುಂಬೈ (ಪಿಟಿಐ): ಫೇಮ್ ಯೋಜನೆಯ ಅಡಿಯಲ್ಲಿ ನೀಡಲಾಗುತ್ತಿದ್ದ ಸಬ್ಸಿಡಿ ಕಡಿತ ಮಾಡಿದ ನಂತರದಲ್ಲಿ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳಿಗೆ (ಇ.ವಿ) ಬೇಡಿಕೆ ಕಡಿಮೆ ಆಗುತ್ತಿದೆ ಎಂದು ಕೇರ್ ರೇಟಿಂಗ್ಸ್ ಹೇಳಿದೆ.

ಈಗ ದ್ವಿಚಕ್ರ ಇ.ವಿ. ತಯಾರಕರು ಹೊಸ ಸಂಶೋಧನೆಗಳ ಮೂಲಕ ಬೆಲೆ ತಗ್ಗಿಸಲು ಮುಂದಾಗಬೇಕಿದೆ ಎಂದು ಅದು ಹೇಳಿದೆ.

ಇ.ವಿ. ಮಾರಾಟಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರವು 2015ರಲ್ಲಿ ಫೇಮ್ ಸಬ್ಸಿಡಿ ಯೋಜನೆಯನ್ನು ಆರಂಭಿಸಿತು. ಆಗ ಇದಕ್ಕೆ ₹75 ಕೋಟಿ ನಿಗದಿ ಮಾಡಲಾಗಿತ್ತು.

ಈ ವರ್ಷದ ಜೂನ್ 1ರಿಂದ ಅನ್ವಯವಾಗುವಂತೆ ಕೇಂದ್ರವು ಸಬ್ಸಿಡಿ ಮೊತ್ತವನ್ನು ತಗ್ಗಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	590
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-44500
ಹಳತು	46000-48000
ಕಾರ್ಕಳ	
ಹೊಸತು	30000-44500
ಹಳತು	40000-48000
ಕುಮಟಾ	
ಚಿಪ್ಪು	27299-36669
ಕೋಕ	16099-33619
ಹಳೆಚಾಲಿ	38389-42619
ಹೊಸಚಾಲಿ	36429-41899
ಸಾಗರ	
ಬಿಳಿಗೋಟು	28899-33800
ಚಾಲಿ	30686-39309
ಕೋಕ	28119-34800
ಕೆಂಪುಗೋಟು	28989-36419
ರಾಶಿ	34989-50269
ಸಿಪ್ಪೆಗೋಟು	13899-21899
ಶಿವಮೊಗ್ಗ	
ಗೊರಬಲು	16009-40069
ರಾಶಿ	39009-51259
ಸರಕು	56030-83696
ಸಿದ್ದಾಪುರ	
ಬಿಳಿಗೋಟು	30019-34899
ಚಾಲಿ	36399-41099
ಕೋಕ	30399-35099
ಕೆಂಪುಗೋಟು	34199-34199
ರಾಶಿ	48349-49009
ತಟ್ಟಿಬೆಟ್ಟೆ	43869-43869
ಶಿರಸಿ	
ಬೆಟ್ಟೆ	37899-44610
ಬಿಳಿಗೋಟು	25399-36318
ಚಾಲಿ	38000-43099
ಕೆಂಪುಗೋಟು	24199-36299
ರಾಶಿ	47130-49699
ಯಲ್ಲಾಪುರ	
ಬಿಳಿಗೋಟು	26899-37318
ಚಾಲಿ	38260-42610
ಕೋಕ	18899-32899
ಕೆಂಪುಗೋಟು	26099-36199
ರಾಶಿ	48099-52850
ತಟ್ಟಿಬೆಟ್ಟೆ	36899-47899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13500	13500	13450	149.25 ಸೆಂಟ್ಸ್
ಎಸಿ	7140	6700	6750	
ಆರ್‌ಪಿ	10200	10100	10050	ಲಂಡನ್
ಆರ್‌ಸಿ	6230	244	5900	2603 ಡಾಲರ್ಸ್

ನಾಲ್ಕು ರಾಷ್ಟ್ರಗಳ ಜೂನಿಯರ್ ಹಾಕಿ: ವಿಶ್ವಕಪ್ ಸಿದ್ಧತೆಗೆ ಅವಕಾಶ

ಭಾರತ ತಂಡಕ್ಕೆ ಇಂದು ಸ್ಪೇನ್ ಸವಾಲು

ಡಸೆಲ್‌ಡಾರ್ಫ್ (ಜರ್ಮನಿ), (ಪಿಟಿಐ): ಭಾರತ ಜೂನಿಯರ್ ತಂಡದವರು ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ ಶುಕ್ರವಾರ ಸ್ಪೇನ್ ತಂಡವನ್ನು ಎದುರಿಸಲಿದ್ದಾರೆ. ಆ ಮೂಲಕ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಗೆ ಸಿದ್ಧತೆಯನ್ನೂ ಆರಂಭಿಸಲಿದ್ದಾರೆ.

ಭಾರತ ತಂಡದವರು ಆಗಸ್ಟ್ 19ರಂದು ಆತಿಥೇಯ ಜರ್ಮನಿ ತಂಡವನ್ನು ಮತ್ತು ಎರಡು ದಿನಗಳ ನಂತರ ಇಂಗ್ಲೆಂಡ್ ತಂಡವನ್ನು ಎದುರಿಸಲಿದ್ದಾರೆ. ಮೊದಲ ಎರಡು ಸ್ಥಾನ ಗಳಿಸುವ ತಂಡಗಳು ಆಗಸ್ಟ್ 22ರಂದು ನಡೆಯುವ ಫೈನಲ್‌ನಲ್ಲಿ ಮುಖಾಮುಖಿ ಆಗಲಿವೆ.

ಭಾರತದ ಪಂದ್ಯಗಳು

ಆ.18	ಸ್ಪೇನ್ ವಿರುದ್ಧ (ಮ.2.30)
ಆ.19	ಜರ್ಮನಿ ವಿರುದ್ಧ (ರಾತ್ರಿ10.30)
ಆ.21	ಇಂಗ್ಲೆಂಡ್ ವಿರುದ್ಧ (ಮ.1.30)

ಜೂನ್‌ನಲ್ಲಿ ಒಮಾನ್‌ನಲ್ಲಿ ನಡೆದ ಜೂನಿಯರ್ ಏಷ್ಯಾ ಕಪ್‌ನಲ್ಲಿ ಚಾಂಪಿಯನ್ ಆಗುವ ಮೂಲಕ ಭಾರತ ತಂಡವು, ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಆಡುವ ಅರ್ಹತೆ ಸಂಪಾದಿಸಿದೆ. ವಿಶ್ವಕಪ್ ಟೂರ್ನಿ ಡಿಸೆಂಬರ್‌ನಲ್ಲಿ ಮಲೇಷ್ಯಾದ ಕ್ವಾಲಾಲಂಪುರದಲ್ಲಿ ನಡೆಯಲಿದೆ. ಭಾರತ ಏಷ್ಯನ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಬದ್ಧ ಎದುರಾಳಿ ಪಾಕಿಸ್ತಾನ ತಂಡವನ್ನು 2–1 ರಿಂದ ಸೋಲಿಸಿದ್ದು ದಾಖಲೆಯ ನಾಲ್ಕನೇ ಬಾರಿ ಚಾಂಪಿಯನ್ ಆಗಿತ್ತು.

ತರಬೇತಿ ಶಿಬಿರದ ವೇಳೆ ಆದ ಗಾಯದಿಂದಾಗಿ ಉತ್ತಮ್ ಸಿಂಗ್ ಅಲಭ್ಯರಾಗಿದ್ದು, ವಿಷ್ಣುಕಾಂತ್ ಸಿಂಗ್ ಅವರು ತಂಡವನ್ನು ಮುನ್ನಡೆಸಲಿದ್ದಾರೆ.

‘ನಮ್ಮ ತಂಡದಲ್ಲಿ ಉತ್ತಮ ಮತ್ತು ಅನುಭವೀ ಆಟಗಾರರಿದ್ದಾರೆ. ಇತ್ತೀಚಿನ ಟೂರ್ನಿಗಳಲ್ಲಿ ತೋರಿದ ಉತ್ತಮ ಪ್ರದರ್ಶನದ ಮಟ್ಟವನ್ನು ಇಲ್ಲೂ ಮುಂದುವರಿಸುವ ವಿಶ್ವಾಸವಿದೆ’ ಎಂದು ವಿಷ್ಣುಕಾಂತ್ ಅವರು ಹಾಕಿ ಇಂಡಿಯಾದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಸ್ಪೇನ್, ಜರ್ಮನಿ ಮತ್ತು ಇಂಗ್ಲೆಂಡ್ ತಂಡಗಳು ಪ್ರಬಲ ತಂಡಗಳಾಗಿದ್ದು, ನಾವು ಅವರ ಹಿಂದಿನ ಕೆಲವು ಪಂದ್ಯಗಳನ್ನು ನಿಕಟವಾಗಿ ಗಮನಿಸಿದ್ದೇವೆ’ ಎಂದು ಮುಖ್ಯ ಕೋಚ್ ಸಿ.ಆರ್.ಕುಮಾರ್ ತಿಳಿಸಿದರು.

‘ತರಬೇತಿ ಶಿಬಿರದಲ್ಲಿ ನಾವು ಸುಧಾರಿಸಬೇಕಾದ ಕೆಲವು ವಿಷಯಗಳ ಕಡೆ ಹೆಚ್ಚು ಗಮನ ಹರಿಸಿದ್ದೇವೆ. ಸಕಾರಾತ್ಮಕ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ನಾವು ಕೆಲವು ತಂತ್ರಗಳನ್ನು ಹೆಣೆದಿದ್ದು, ಅದಕ್ಕೆ ಅನುಗುಣವಾಗಿ ಆಡಲಿದ್ದೇವೆ’ ಎಂದರು.

ಸಂಕ್ಷಿಪ್ತ ಸುದ್ದಿ

ಹೆಬ್ಬೆರಳ ಗಾಯ: ಪಡಿಕ್ಕಲ್ ವಿಶ್ರಾಂತಿ

ಬೆಂಗಳೂರು (ಪಿಟಿಐ): ದೇವಧರ ಟ್ರೋಫಿ ಟೂರ್ನಿಯ ವೇಳೆ ಆದ ಹೆಬ್ಬೆರಳಿನ ಗಾಯದಿಂದ ತಾವು ಮೂರರಿಂದ ನಾಲ್ಕು ವಾರಗಳ ಕಾಲ ಆಟದಿಂದ ದೂರವುಳಿಯಬೇಕಾಗಿದೆ ಎಂದು ಆರಂಭ ಆಟಗಾರ ದೇವದತ್ತ ಪಡಿಕ್ಕಲ್ ಗುರುವಾರ ಹೇಳಿದ್ದಾರೆ.

ಈ ಗಾಯದಿಂದಾಗಿ, ಭಾರತ ತಂಡದ ಬ್ಯಾಟರ್ ಪಡಿಕ್ಕಲ್ ಮಹಾರಾಜ ಟ್ರೋಫಿ ಟಿ–20 ಟೂರ್ನಿಗೆ ಅಲಭ್ಯರಾಗಿದ್ದಾರೆ. ಗುಲ್ಬರ್ಗ ಮಿಸ್ಟಿಕ್ಸ್ ತಂಡ ಅವರನ್ನು ಆಯ್ಕೆ ಮಾಡಿತ್ತು.

‘ಈ ಸೂಕ್ಷ್ಮ ಗಾಯಕ್ಕೆ ಸಣ್ಣ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬೇಕಾಯಿತು. ಬಹುಶಃ ಮೂರರಿಂದ ನಾಲ್ಕು ವಾರ ನನಗೆ ಆಡಲು ಸಾಧ್ಯವಾಗಲಿಕ್ಕಿಲ್ಲ’ ಎಂದು ಅವರು ತಿಳಿಸಿದ್ದಾರೆ.

ಕುಸ್ತಿ: ಫೈನಲ್‌ಗೆ ಅಂತಿಮ್ ಪಂಘಲ್

ಅಮ್ಮಾನ್, ಜೋರ್ಡಾನ್ (ಪಿಟಿಐ): ಭಾರತದ ಅಂತಿಮ್ ಪಂಘಲ್ ಸೇರಿದಂತೆ ನಾಲ್ವರು ಮಹಿಳಾ ಕುಸ್ತಿಪಟುಗಳು ಇಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ 53 ಕೆ.ಜಿ. ವಿಭಾಗದ ಮೂರು ಬೌಟ್‌ಗಳನ್ನೂ ಅಂತಿಮ್ ಗೆದ್ದುಕೊಂಡರು.

ಸವಿತಾ (62 ಕೆ.ಜಿ.), ಅಂತಿಮ್ ಕುಂಡೂ (65 ಕೆ.ಜಿ) ಮತ್ತು ಪ್ರಿಯಾ (76 ಕೆ.ಜಿ.) ಅವರೂ ಫೈನಲ್ ತಲುಪಿ ಚಿನ್ನ ಅಥವಾ ಬೆಳ್ಳಿಯ ಪದಕ ಖಚಿತಪಡಿಸಿಕೊಂಡರು. ಹರ್ಷಿತಾ ಅವರು 72 ಕೆ.ಜಿ. ವಿಭಾಗದ ಕಂಚಿನ ಪದಕಕ್ಕಾಗಿ ಪೈಪೋಟಿ ನಡೆಸಲಿದ್ದಾರೆ.

ಆರ್ಚರಿ: ಭಾರತ ತಂಡಗಳಿಗೆ ಕಂಚಿನ ಪದಕ

ಪ್ಯಾರಿಸ್ (ಪಿಟಿಐ): ಭಾರತದ ರೀಕರ್ವ್ ಆರ್ಚರಿ ಸ್ಪರ್ಧಿಗಳು ವಿಶ್ವ ಕಪ್ ಸ್ಟೇಜ್ 4 ಟೂರ್ನಿಯ ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ಗುರುವಾರ ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಕಂಚಿನ ಪದಕಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಧೀರಜ್ ಬೊಮ್ಮದೇವರ, ಅತನು ದಾಸ್ ಮತ್ತು ತುಷಾರ್ ಶೆಲ್ಕೆ ಅವರನ್ನೊಳಗೊಂಡ ತಂಡ 6–2 ರಿಂದ (54–56, 57–75, 56–54, 57–55) ಸ್ಪೇನ್ ತಂಡವನ್ನು (ಆಂಡ್ರೆಜ್ ಟೆಮಿನೊ, ಯುನ್ ಸ್ಯಾಂಚೆಸ್ ಮತ್ತು ಪಾಬ್ಲೊ ಆಚ) ಸೋಲಿಸಿತು.

ಎರಡನೇ ಶ್ರೇಯಾಂಕ ಪಡೆದಿದ್ದ ಭಾರತದ ಪುರುಷರ ತಂಡ, ಸೆಮಿಫೈನಲ್‌ನಲ್ಲಿ ಚೀನಾ ತೈಪೆ ವಿರುದ್ಧ 0–6ರಿಂದ ಸೋಲನುಭವಿಸಿತ್ತು.

ಅಂಕಿತಾ ಭಕ್ತ, ಭಜನ್ ಕೌರ್ ಮತ್ತು ಸಿಮ್ರನಜಿತ್ ಕೌರ್ ಅವರನ್ನು ಒಳಗೊಂಡಿದ್ದ ಮಹಿಳಾ ತಂಡವೂ ಸೆಮಿಫೈನಲ್‌ನಲ್ಲಿ ಚೀನಾ ತೈಪೆ ತಂಡಕ್ಕೆ 0–6 ರಿಂದ ಮಣಿದಿತ್ತು.

ಕಂಚಿನ ಪದಕಕ್ಕಾಗಿ ನಡೆದ ಪ್ಲೇ ಆಫ್‌ನಲ್ಲಿ ಭಾರತ ವನಿತಾ ತಂಡ ಆರಂಭದ ಹಿನ್ನಡೆಯಿಂದ ಚೇತರಿಸಿಕೊಂಡು 5–4 ರಿಂದ ಮೆಕ್ಸಿಕೊ ಎದುರು ಜಯಗಳಿಸಿತ್ತು.

ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್

ಭಾರತ ಪುರುಷರ ತಂಡಕ್ಕೆ ಕಂಚು

ಬಾಕು (ಅಜರ್‌ಬೈಜಾನ್), (ಪಿಟಿಐ): ಭಾರತದ ಗುರಿಕಾರರು ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್‌ಷಿಪ್‌ನ ಮೊದಲ ದಿನವಾದ ಗುರುವಾರ ಸ್ಫೂರ್ತಿದಾಯಕ ಪ್ರದರ್ಶನ ನೀಡಲು ವಿಫಲರಾದರು. ಆರು ಪಿಸ್ತೂಲ್ ಶೂಟರ್‌ಗಳಲ್ಲಿ ಯಾರಿಗೂ ಪ್ಯಾರಿಸ್ ಒಲಿಂಪಿಕ್ ಕೋಟಾದಡಿ ಸ್ಥಾನ ಪಡೆಯಲು ಸಾಧ್ಯವಾಗಲಿಲ್ಲ.

10 ಮೀ. ಏರ್ ಪಿಸ್ತೂಲ್ ಟೀಮ್ ಸ್ಪರ್ಧೆಯಲ್ಲಿ ಭಾರತ ಪುರುಷರ ತಂಡ ಕಂಚಿನ ಪದಕ ಗೆದ್ದುಕೊಂಡಿದ್ದಷ್ಟೇ ಸಮಾಧಾನದ ವಿಷಯವಾಯಿತು. ಶಿವ ನರ್ವಾಲ್ (579 ಪಾಯಿಂಟ್), ಸರಬಜೋತ್ ಸಿಂಗ್ (578), ಅರ್ಜುನ್ ಸಿಂಗ್ ಚೀಮಾ (577) ಅವರನ್ನೊಳಗೊಂಡ ತಂಡ ಒಟ್ಟು 1734 ಪಾಯಿಂಟ್ ಗಳಿಸಿ ಕಂಚಿನ ಪದಕ ಪಡೆಯಿತು. ಚೀನಾ ತಂಡ (1749 ಪಾಯಿಂಟ್) ಚಿನ್ನದ ಪದಕ ಪಡೆದರೆ, ಜರ್ಮನಿ ತಂಡ (1743) ಬೆಳ್ಳಿಯ ಪದಕ ಪಡೆಯಿತು.

ಚೀನಾ ಮೇಲುಗೈ: ಮೊದಲ ದಿನ ಪಣಕ್ಕಿದ್ದ ಎಲ್ಲ ನಾಲ್ಕೂ ಚಿನ್ನದ ಪದಕಗಳು ಚೀನಾ ಪಾಲಾದವು. ವೈಯಕ್ತಿಕ 10 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಶೂಟರ್‌ಗಳ ಸಾಧನೆ ನಿರಾಶೆ ಮೂಡಿಸಿತು. ಯಾರೊಬ್ಬರೂ ಎಂಟು ಆಟಗಾರರ ಫೈನಲ್‌ನಲ್ಲಿ ಸ್ಥಾನ ಪಡೆಯುವಂಥ ಪ್ರದರ್ಶನ ನೀಡಲಿಲ್ಲ.

ನರ್ವಾಲ್ (579) ಅರ್ಹತಾ ಸುತ್ತಿನ ನಂತರ 17ನೇ ಸ್ಥಾನ ಪಡೆದರೆ, ಸರಬ್‌ಜೋತ್ (578) 18ನೇ ಸ್ಥಾನ ಗಳಿಸಿದರು. ಚೀಮಾ (577) 26ನೇ ಸ್ಥಾನಕ್ಕೆ ಸರಿದರು.

ವೈಯಕ್ತಿಕ ವಿಭಾಗದ ಚಿನ್ನದ ಪದಕ ಚೀನಾದ ಝೂಂಗ್ ಬೊವೆನ್ (244.3) ಅವರಿಗೆ ಒಲಿಯಿತು. ಸರ್ಬಿಯಾದ ದಮಿರ್ ಮಿಕೆಕ್ (240.8) ಬೆಳ್ಳಿ ಹಾಗೂ ಬಲ್ಗೇರಿಯಾದ ಕಿರಿಲ್ ಕಿರೋವ್ (215.7) ಕಂಚಿನ ಪದಕಗಳನ್ನು ಪಡೆದರು.



ಕಂಚಿನ ಪದಕ ಗೆದ್ದ ಭಾರತದ ಶಿವ ನರ್ವಾಲ್, ಸರಬಜೋತ್ ಸಿಂಗ್, ಅರ್ಜುನ್ ಸಿಂಗ್ ಚೀಮಾ

ಭಾರತ ಮಹಿಳೆಯರ ಸಾಧನೆಯೂ ಕಳಪೆಯಾಗಿತ್ತು. ಇಶಾ ಸಿಂಗ್ (572), ಪಲಕ್ (570) ಮತ್ತು ದಿವ್ಯಾ ಟಿ.ಎಸ್. ಅವರನ್ನೊಳಗೊಂಡ ತಂಡ ಟೀಮ್ ವಿಭಾಗದಲ್ಲಿ 11ನೇ ಸ್ಥಾನ ಪಡೆಯಿತು. ಚೀನಾ, ಹಂಗೆರಿ, ಇರಾನ್ ತಂಡಗಳು ಕ್ರಮವಾಗಿ ಸ್ವರ್ಣ, ರಜತ ಮತ್ತು ಕಂಚಿನ ಪದಕ ಪಡೆದವು.

ವೈಯಕ್ತಿಕ ವಿಭಾಗದಲ್ಲಿ ಇಶಾ 32ನೇ ಸ್ಥಾನ, ಪಲಕ್ 40ನೇ ಸ್ಥಾನ ಮತ್ತು ದಿವ್ಯಾ 66ನೇ ಸ್ಥಾನದಲ್ಲಿ ಸ್ಪರ್ಧೆ ಮುಗಿಸಿದರು. ಚೀನಾದ ಜಿಯಾಂಗ್ ರಾಂಕ್ಸಿನ್ ಚಿನ್ನ ಗೆದ್ದರೆ, ಗ್ರೀಸ್‌ನ ಅನ್ನಾ ಕೊರಕಾಕಿ ಮತ್ತು ಚೀನಾದ ಲಿ ಕ್ಸು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಟಿ20 ಕ್ರಿಕೆಟ್ ಸರಣಿ: ಐರ್ಲೆಂಡ್ ವಿರುದ್ಧ ಮೊದಲ ಪಂದ್ಯ ಇಂದು

ಬೂಮ್ರಾ ಮೇಲೆ ಎಲ್ಲರ ಚಿತ್ತ

ಡಬ್ಲಿನ್ (ಪಿಟಿಐ): ಭಾರತ -ಐರ್ಲೆಂಡ್ ನಡುವಣ ಮೂರು ಪಂದ್ಯಗಳ ಟಿ20 ಸರಣಿಯ ಮೊದಲ ಹಣಾಹಣಿ ಶುಕ್ರವಾರ ನಡೆಯಲಿದ್ದು, ಹನ್ನೊಂದು ತಿಂಗಳ ಬಳಿಕ ಕಣಕ್ಕಿಳಿಯುತ್ತಿರುವ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಮೇಲೆ ಎಲ್ಲರ ಕಣ್ಣು ನೆಟ್ಟಿದೆ.

ಐಪಿಎಲ್‌ನಲ್ಲಿ ಮಿಂಚಿದ್ದ ಋತುರಾಜ್ ಗಾಯಕವಾಡ್, ರಿಂಕು ಸಿಂಗ್ ಮತ್ತು ಜಿತೇಶ್ ಶರ್ಮಾ ಅವರಂತಹ ಹೊಸಬರು ಈ ಸರಣಿಯಲ್ಲಿ ಆಡುತ್ತಿದ್ದಾರೆಯಾದರೂ, ಭಾರತ ತಂಡದ ವ್ಯವಸ್ಥಾಪನ ಮಂಡಳಿಯು ಬೂಮ್ರಾ ಅವರ ಪ್ರದರ್ಶನವನ್ನು ಮುಖ್ಯವಾಗಿ ಗಮನಿಸಲಿದೆ. ಏಕೆಂದರೆ ಎರಡು ತಿಂಗಳ ಬಳಿಕ ನಡೆಯಲಿರುವ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಅವರು ಭಾರತ ತಂಡದ ಸಂಯೋಜನೆಯಲ್ಲಿ ಪ್ರಮುಖರಾಗಿದ್ದಾರೆ.

29 ವರ್ಷದ ಬೂಮ್ರಾ, 2022ರ ಸೆಪ್ಟೆಂಬರ್‌ನಲ್ಲಿ ಕೊನೆಯದಾಗಿ ಅಂತರರಾಷ್ಟ್ರೀಯ ಪಂದ್ಯ ಆಡಿದ್ದರು. ಬೆನ್ನಿಗೆ ಆದ ಗಾಯದ ಶಸ್ತ್ರಚಿಕಿತ್ಸೆಯಿಂದ ದೀರ್ಘ ಕಾಲ ವಿಶ್ರಾಂತಿಯಲ್ಲಿದ್ದರು. ಸಂಪೂರ್ಣವಾಗಿ ಚೇತರಿಸಿಕೊಂಡಿರುವ ಅವರು ಈ ಸರಣಿಯಲ್ಲಿ ತಂಡವನ್ನು ಮುನ್ನಡೆಸುತ್ತಿದ್ದಾರೆ.

ಐರ್ಲೆಂಡ್ ವಿರುದ್ಧದ ಮೂರು ಪಂದ್ಯಗಳಲ್ಲಿ ಅವರು ಗರಿಷ್ಠ 12 ಓವರ್‌ಗಳನ್ನು ಮಾತ್ರ ಬೌಲಿಂಗ್ ಮಾಡಬಲ್ಲರು. ಆದರೆ ಈ ಸರಣಿಯು ಗುಜರಾತ್ ವೇಗಿಯ 'ಮ್ಯಾಚ್ ಫಿಟ್‌ನೆಸ್' ಹೇಗಿದೆ ಎಂಬುದನ್ನು ತಿಳಿದುಕೊಳ್ಳುವ ಅವಕಾಶವನ್ನು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್, ಏಕದಿನ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಕಲ್ಪಿಸಲಿದೆ.

ಬೂಮ್ರಾ, ಕಳೆದ ದಿನ ನೆಟ್ಸ್‌ನಲ್ಲಿ ಬೌಲಿಂಗ್ ಮಾಡಿದ್ದ ವಿಡಿಯೊ ತುಣುಕುಗಳನ್ನು ಬಿಸಿಸಿಐ ಪ್ರಕಟಿಸಿತ್ತು. ಅವರು ಬೌನ್ಸರ್ ಮತ್ತು ಯಾರ್ಕರ್ ಎಸೆತಗಳನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಿದ್ದು ವಿಡಿಯೊದಲ್ಲಿ ಕಾಣಬಹುದಿತ್ತು. ಆದರೆ ನೆಟ್ಸ್‌ನಲ್ಲಿ ಅಭ್ಯಾಸ ನಡೆಸುವುದು ಮತ್ತು ಪಂದ್ಯದ ಪರಿಸ್ಥಿತಿಯಲ್ಲಿ



ಜಸ್‌ಪ್ರೀತ್ ಬೂಮ್ರಾ

ಬೌಲಿಂಗ್ ಮಾಡುವುದು ತೀರಾ ಭಿನ್ನ. ಆದ್ದರಿಂದ ಬೂಮ್ರಾ ನೀಡುವ ಪ್ರದರ್ಶನವು ಸಾಕಷ್ಟು ಕುತೂಹಲ ಮೂಡಿಸಿದೆ. ಬೂಮ್ರಾ ಅವರಂತೆಯೇ ಕರ್ನಾಟಕದ ವೇಗಿ ಪ್ರಸಿದ್ಧ ಕೃಷ್ಣ ಕೂಡಾ ಗಾಯದ ಕಾರಣ ಹಲವು ತಿಂಗಳ ಬಿಡುವಿನ ಬಳಿಕ ತಂಡಕ್ಕೆ ಮರಳಿದ್ದಾರೆ. ಏಷ್ಯಾ ಕಪ್ ಟೂರ್ನಿಗೆ ತಂಡದಲ್ಲಿ ಸ್ಥಾನ ಪಡೆಯಲು ಅವರು ಈ ಸರಣಿಯಲ್ಲಿ ಪರಿಣಾಮಕಾರಿಯಾಗಿ ಬೌಲಿಂಗ್ ಮಾಡುವುದು ಅಗತ್ಯ.

ಐಪಿಎಲ್‌ನಲ್ಲಿ ಗಮನ ಸೆಳೆದಿದ್ದ ರಿಂಕು ಸಿಂಗ್ ಮತ್ತು ಜಿತೇಶ್ ಅವರು ಈ ಸರಣಿ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡುವ ಸಾಧ್ಯತೆಯಿದೆ.

ಐರ್ಲೆಂಡ್ ತಂಡ ಇದುವರೆಗೂ ಭಾರತದ ವಿರುದ್ಧ ಯಾವುದೇ ಪಂದ್ಯ ಜಯಿಸಿಲ್ಲ. ಆದರೂ ಆ್ಯಂಡ್ರ್ಯೂ ಬಲ್ಬರ್ನಿ ನೇತೃತ್ವದ ಬಳಗವು ಪ್ರವಾಸಿ ತಂಡಕ್ಕೆ ಪ್ರಬಲ ಪೈಪೋಟಿ ನೀಡುವ ಸಾಧ್ಯತೆಯಿದೆ. ಹ್ಯಾರಿ ಟೆಕ್ಟರ್, ಲೋರ್ಕನ್ ಟಕರ್ ಮತ್ತು ಎಡಗೈ ಸ್ಪಿನ್ನರ್ ಜಾರ್ಜ್ ಡಾಕ್ರೆಲ್ ಅವರಂತಹ ಆಟಗಾರರು ತಂಡದಲ್ಲಿದ್ದಾರೆ. ಐಪಿಎಲ್‌ನಲ್ಲಿ ಗುಜರಾತ್ ಟೈಟನ್ಸ್ ತಂಡಕ್ಕೆ ಆಡುವ ಜೋಶ್ ಲಿಟ್ಲ್ ಅವರು ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

ತಂಡಗಳು: ಭಾರತ: ಜಸ್‌ಪ್ರೀತ್ ಬೂಮ್ರಾ (ನಾಯಕ), ಋತುರಾಜ್ ಗಾಯಕವಾಡ್ (ಉಪನಾಯಕ), ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ರಿಂಕು ಸಿಂಗ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಜಿತೇಶ್ ಶರ್ಮಾ (ವಿಕೆಟ್ ಕೀಪರ್), ಶಿವಂ ದುಬೆ, ವಾಷಿಂಗ್ಟನ್ ಸುಂದರ್, ಶಹಬಾಜ್ ಅಹ್ಮದ್, ರವಿ ಬಿಷ್ಣೋಯಿ, ಪ್ರಸಿದ್ಧ ಕೃಷ್ಣ, ಅರ್ಷದೀಪ್ ಸಿಂಗ್, ಮುಕೇಶ್ ಕುಮಾರ್, ಆವೇಶ್ ಖಾನ್

ಐರ್ಲೆಂಡ್: ಆ್ಯಂಡ್ರ್ಯೂ ಬಲ್ಬರ್ನಿ (ನಾಯಕ), ಹ್ಯಾರಿ ಟೆಕ್ಟರ್, ಲೋರ್ಕನ್ ಟಕರ್, ರಾಸ್ ಅಡೇರ್, ಕರ್ಟಿಸ್ ಕ್ಯಾಂಫರ್, ಗ್ಯಾರೆತ್ ಡಿಲೇನಿ, ಜಾರ್ಜ್ ಡಾಕ್ರೆಲ್, ಫಿಯಾನ್ ಹ್ಯಾಂಡ್, ಜೋಶ್ ಲಿಟ್ಲ್, ಬ್ಯಾರಿ ಮೆಕಾರ್ಥಿ, ಬೆನ್ ವೈಟ್, ಕ್ರೇಗ್ ಯಂಗ್, ಥಿಯೊ ವ್ಯಾನ್ ವೋರ್ಕಮ್

ಪಂದ್ಯ ಆರಂಭ: ರಾತ್ರಿ 7.30; **ನೇರ ಪ್ರಸಾರ:** ಸ್ಪೋರ್ಟ್ಸ್ 18, ಜಿಯೊ ಸಿನೆಮಾ ಆ್ಯಪ್

ಟಿಕೆಟ್ 'ಸೋಲ್ಡ್ ಔಟ್'

ಭಾರತ ಮತ್ತು ಐರ್ಲೆಂಡ್ ನಡುವಣ ಮೊದಲ ಎರಡು ಟಿ20 ಪಂದ್ಯಗಳ ಎಲ್ಲ ಟಿಕೆಟ್‌ಗಳೂ ಮಾರಾಟವಾಗಿವೆ ಎಂದು ಕ್ರಿಕೆಟ್ ಐರ್ಲೆಂಡ್ ತಿಳಿಸಿದೆ. ಈ ಸರಣಿಯ ಮೂರೂ ಪಂದ್ಯಗಳು 11,500 ಆಸನ ಸಾಮರ್ಥ್ಯದ ಮ್ಯಾಲಹೈಡ್ ಕ್ರಿಕೆಟ್ ಕ್ಲಬ್ ಮೈದಾನದಲ್ಲಿ ನಡೆಯಲಿದೆ.

'ಮೊದಲ ಎರಡು ಪಂದ್ಯಗಳ ಟಿಕೆಟ್ ಸೋಲ್ಡ್ ಔಟ್ ಆಗಿದ್ದು, ಮೂರನೇ ಪಂದ್ಯದ ಎಲ್ಲ ಟಿಕೆಟ್‌ಗಳೂ ಮಾರಾಟವಾಗುವ ನಿರೀಕ್ಷೆಯಿದೆ' ಎಂದು ಐರ್ಲೆಂಡ್ ಕ್ರಿಕೆಟ್ ಸಂಸ್ಥೆ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

ಕ್ರಿಕೆಟ್: ಅನ್ವಯ್ ದ್ರಾವಿಡ್ ದ್ವಿಶತಕ

ಬೆಂಗಳೂರು: ಅನ್ವಯ್ ದ್ರಾವಿಡ್ ಅವರ ಭರ್ಜರಿ ದ್ವಿಶತಕದ ನೆರವಿನಿಂದ ಗುರುವಾರ ಮಲ್ಯ ಅದಿತಿ ಇಂಟರ್ ನ್ಯಾಷನಲ್ ಸ್ಕೂಲ್ ತಂಡ ಕೆಎಸ್‌ಸಿಎ 16 ವರ್ಷದೊಳಗಿನವರ ಅಂತರ ಶಾಲಾ 2ನೇ ಡಿವಿಷನ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 456 ರನ್‌ಗಳಿಂದ ಇನ್ನಿಸ್‌ಫ್ರೀ ಹೌಸ್ ಸ್ಕೂಲ್ ತಂಡವನ್ನು ಮಣಿಸಿತು.

ಮಲ್ಯ ಅದಿತಿ ತಂಡ 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 526 ರನ್ ಗಳಿಸಿತು. ಅನ್ವಯ್ 140 ಎಸೆತಗಳಲ್ಲಿ 49 ಬೌಂಡರಿಗಳ ನೆರವಿನಿಂದ 264 ರನ್ ಕಲೆಹಾಕಿದರು. ಯಶಸ್ ಶಂಕರ್ (101) ಮತ್ತು ಅರ್ಹಾನ್ ಜೈ ಸಿಂಗ್ (113) ಶತಕ ಹೊಡೆದರು. ಇನ್ನಿಸ್‌ಫ್ರೀ ಸ್ಕೂಲ್ ತಂಡ 19.3 ಓವರ್‌ಗಳಲ್ಲಿ 70 ರನ್‌ಗಳಿಗೆ ಆಲೌಟಾಯಿತು.

ವಿಶ್ವ ಅಥ್ಲೆಟಿಕ್ಸ್ ಅಧ್ಯಕ್ಷರಾಗಿ ಕೊ



ಬುಡಾಪೆಸ್ಟ್ (ಎಎಫ್‌ಪಿ): ವಿಶ್ವ ಅಥ್ಲೆಟಿಕ್ಸ್ ಸಂಸ್ಥೆ ಅಧ್ಯಕ್ಷರಾಗಿ ಸೆಬಾಸ್ಟಿಯನ್ ಕೊ ಅವರು ಮೂರನೇ ಅವಧಿಗೆ ಗುರುವಾರ ಪುನರಾಯ್ಕೆಗೊಂಡಿದ್ದಾರೆ. 2015ರಿಂದ ಅವರು ವಿಶ್ವ ಅಥ್ಲೆಟಿಕ್ಸ್ ಅಧ್ಯಕ್ಷರಾಗಿದ್ದಾರೆ.

4 ವರ್ಷಗಳ ಕಾಲ ಅಧ್ಯಕ್ಷರಾಗಿ ಮುಂದುವರಿಯಲಿದ್ದು, ಇದು ಅವರ ಕೊನೆಯ ಅವಧಿಯಾಗಲಿದೆ. ಭಾರತ ಅಥ್ಲೆಟಿಕ್ ಫೆಡರೇಷನ್ ಅಧ್ಯಕ್ಷ ಆದಿಲ್ ಸುಮಾರಿವಾಲಾ ವಿಶ್ವ ಅಥ್ಲೆಟಿಕ್ಸ್‌ನ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ವಿಶ್ವಕಪ್ ಚೆಸ್: ಸೆಮಿಗೆ ಪ್ರಜ್ಞಾನಂದ

ಬಾಕು (ಅಜರ್‌ಬೈಜಾನ್), (ಪಿಟಿಐ): 'ಸಡನ್ ಡೆತ್' ಟೈಬ್ರೇಕರ್‌ವರೆಗೆ ಬೆಳೆದ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಸ್ವದೇಶದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೇಶಿ ಅವರನ್ನು ಗುರುವಾರ 5–4ರಿಂದ ಮಣಿಸಿ ಫಿಡೆ ವಿಶ್ವಕಪ್ ಚೆಸ್ ಟೂರ್ನಿಯ ಸೆಮಿಫೈನಲ್ ತಲುಪಿದರು.

ಚೆನ್ನೈನ 17 ವರ್ಷದ ಚೆಸ್ ಚತುರ ಪ್ರಜ್ಞಾನಂದ ಸೆಮಿಫೈನಲ್‌ನಲ್ಲಿ ಅಮೆರಿಕದ ಅನುಭವಿ ಫ್ಯಾಬಿಯಾನೊ ಕರುವಾನ ಅವರನ್ನು ಎದುರಿಸಲಿದ್ದಾರೆ. ಇನ್ನೊಂದು ಸೆಮಿಫೈನಲ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ (ನಾರ್ವೆ), ಸ್ಥಳೀಯ ತಾರೆ ನಿಜತ್ ಅಬಸೋವ್ ವಿರುದ್ಧ ಆಡಲಿದ್ದಾರೆ.

ಸೆಮಿಫೈನಲ್ ತಲುಪುವ ಮೂಲಕ ಪ್ರಜ್ಞಾನಂದ ಅವರು ಮುಂದಿನ ವರ್ಷದ ಕ್ಯಾಂಡಿಡೇಟ್ಸ್ ಟೂರ್ನಿಗೂ ಬಹುತೇಕ


ಪ್ರಜ್ಞಾನಂದ

ಸ್ಥಾನವನ್ನು ಖಚಿತಪಡಿಸಿಕೊಂಡರು.

ಕ್ವಾರ್ಟರ್‌ಫೈನಲ್‌ನ ಮೊದಲ ದಿನ ಅರ್ಜುನ್ ಜಯ ಗಳಿಸಿದರೆ, ಎರಡನೇ ದಿನವಾದ ಬುಧವಾರ ಪ್ರಜ್ಞಾನಂದ ತಿರುಗೇಟು ನೀಡಿದ್ದರಿಂದ ಸೆಣಸಾಟ ಟೈಬ್ರೇಕರ್‌ಗೆ ಹೋಗಿತ್ತು. ಮೊದಲೆರಡು ಟೈಬ್ರೇಕ್ ಪಂದ್ಯಗಳು ಡ್ರಾ ಆದರೆ, ಮೂರನೇ ಪಂದ್ಯದಲ್ಲಿ ಪ್ರಜ್ಞಾನಂದ, ನಾಲ್ಕನೇ ಪಂದ್ಯದಲ್ಲಿ ತೆಲಂಗಾಣದ ಅರ್ಜುನ್ ಜಯಪಡೆದರು. ಆದರೆ ಬ್ಲಿಟ್ಸ್‌ನಲ್ಲಿ ಪ್ರಜ್ಞಾನಂದ ಕೈಮೇಲಾಯಿತು. ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಪಡೆದವರು ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯುತ್ತಾರೆ. ಅಲ್ಲಿ ಜಯಗಳಿಸಿದ ಆಟಗಾರ, ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಅವರಿಗೆ ಚಾಲೆಂಜರ್ ಆಗಲಿದ್ದಾರೆ.

ಜಮ್ಷೆಡ್‌ಪುರ ಎಫ್‌ಸಿಗೆ ಗೆಲುವು

ಕೋಲ್ಕತ್ತ: ಆ್ಯಶ್ಲೆ ಕೋಲಿ ಗಳಿಸಿದ ಗೋಲಿನ ನೆರವಿನಿಂದ ಜಮ್ಷೆಡ್‌ಪುರ ಎಫ್‌ಸಿ ತಂಡವು 132ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 1–0ಯಿಂದ ಇಂಡಿಯನ್ ನೇವಿ ತಂಡವನ್ನು ಮಣಿಸಿತು.

ಗುರುವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಏಕೈಕ ಗೋಲನ್ನು 70ನೇ ನಿಮಿಷದಲ್ಲಿ ಆ್ಯಶ್ಲೆ ದಾಖಲಿಸಿದರು. ಈ ಮೂಲಕ ಜಮ್ಷೆಡ್‌ಪುರ ತಂಡವು ಟೂರ್ನಿಯಲ್ಲಿ ಮೊದಲ ಗೆಲುವನ್ನು ಪಡೆಯಿತು.

ಮತ್ತೊಂದು ಪಂದ್ಯದಲ್ಲಿ ಇಂಡಿಯನ್ ಆರ್ಮಿ ಎಫ್‌ಟಿ ತಂಡವು ಬೋಡೋಲ್ಯಾಂಡ್ ಎಫ್‌ಸಿ ತಂಡವನ್ನು 2–1ರಿಂದ ಮಣಿಸಿತು. ಟೂರ್ನಿಯಲ್ಲಿ ಇಂಡಿಯನ್ ಆರ್ಮಿ ತಂಡಕ್ಕೆ ಇದು ಎರಡನೇ ಗೆಲುವಾಗಿದೆ.

ಬೀಗಲ್ಸ್‌ಗೆ ಜಯ

ಬೆಂಗಳೂರು: ಬೀಗಲ್ಸ್ ಬಿ.ಸಿ ತಂಡವು ಪ್ರೊ.ಎನ್.ಸಿ. ಪರಪ್ಪ ಸ್ಮಾರಕ ಎವರ್ ರೋಲಿಂಗ್ ಟ್ರೋಫಿ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 76–75ರಿಂದ ಜಿಎಸ್‌ಟಿ ಅಂಡ್ ಕಸ್ಟಮ್ಸ್ ತಂಡವನ್ನು ಮಣಿಸಿತು. ಮತ್ತೊಂದು ಪಂದ್ಯದಲ್ಲಿ ಮಂಗಳೂರು ಬಿ.ಸಿ, 67–58ರಿಂದ ಎಸ್. ಬ್ಲೂಸ್ ತಂಡವನ್ನು ಸೋಲಿಸಿತು.

ಮಹಾರಾಜ ಟ್ರೋಫಿ: ಲಯನ್ಸ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ


ಬೆಂಗಳೂರು: ಶ್ರೇಯಸ್ ಗೋಪಾಲ್ ಅವರ ಅರ್ಧಶತಕ ಮತ್ತು ಎಚ್.ಎಸ್. ಶರತ್ ಕೊನೆಯಲ್ಲಿ ತೋರಿದ ಬಿರುಸಿನ ಆಟದ ಬಲದಿಂದ ಶಿವಮೊಗ್ಗ ಲಯನ್ಸ್ ತಂಡ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಸತತ ಮೂರನೇ ಗೆಲುವು ಸಾಧಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಲಯನ್ಸ್ ತಂಡ ಮೂರು ವಿಕೆಟ್‌ಗಳಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಗುಲ್ಬರ್ಗ, ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 175 ರನ್ ಪೇರಿಸಿತು. ಆದರ್ಶ್ ಪ್ರಜ್ವಲ್ (43) ಮತ್ತು ಆರ್.ಸ್ಮರಣ್ (40) ಸವಾಲಿನ ಮೊತ್ತಕ್ಕೆ ಕಾರಣರಾದರು. ಲಯನ್ಸ್ ತಂಡದ ಕ್ರಾಂತಿಕುಮಾರ್ (17ಕ್ಕೆ 3) ಪರಿಣಾಮಕಾರಿ ದಾಳಿ ನಡೆಸಿದರು.

ಶಿವಮೊಗ್ಗ ತಂಡ 19.5 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 179 ರನ್ ಗಳಿಸಿ ಗೆದ್ದಿತು. ಅಭಿಲಾಷ್ ಶೆಟ್ಟಿ ಮತ್ತು ವೈಶಾಖ್ ವಿಜಯಕುಮಾರ್ ಅವರ ದಾಳಿಗೆ ಆರಂಭಿಕ ಆಘಾತ ಅನುಭವಿಸಿದ್ದ ಶಿವಮೊಗ್ಗ ತಂಡ 39 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡು ಒತ್ತಡಕ್ಕೆ ಸಿಲುಕಿತ್ತು.

ಆದರೆ ನಾಯಕ ಶ್ರೇಯಸ್ (52 ರನ್; 37 ಎ., 4X4, 6X2) ಮತ್ತು ಅಭಿನವ್ ಮನೋಹರ್ (28) ಆರನೇ ವಿಕೆಟ್‌ಗೆ 71 ರನ್ ಸೇರಿಸಿ ಗೆಲುವಿನ ಕನಸನ್ನು ಜೀವಂತವಾಗಿರಿಸಿಕೊಂಡರು. ಇವರಿಬ್ಬರು ಔಟಾದರೂ, ಎಸ್. ಶಿವರಾಜ್ (ಔಟಾಗದೆ 27, 17 ಎ., 4X3, 6X1) ಮತ್ತು ಶರತ್ (ಔಟಾಗದೆ 31, 11 ಎ., 4X2, 6X3) ಮುರಿಯದ ಎಂಟನೇ ವಿಕೆಟ್‌ಗೆ 39 ರನ್ ಸೇರಿಸಿ ರೋಚಕ ಗೆಲುವಿಗೆ ಕಾರಣರಾದರು.


ಅರ್ಧಶತಕ ಗಳಿಸಿದ ಶಿವಮೊಗ್ಗ ಲಯನ್ಸ್ ತಂಡದ ನಾಯಕ ಶ್ರೇಯಸ್ ಗೋಪಾಲ್ ಅವರ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ

ಹುಬ್ಬಳ್ಳಿ ಗೆಲುವಿನ ಓಟ: ದಿನದ ಎರಡನೇ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್, 63 ರನ್‌ಗಳಿಂದ ಮಂಗಳೂರು ಡ್ರಾಗನ್ಸ್ ತಂಡವನ್ನು ಪರಾಭವಗೊಳಿಸಿತು.

ಸಂಕ್ಷಿಪ್ತ ಸ್ಕೋರ್: ಗುಲ್ಬರ್ಗ ಮಿಸ್ಟಿಕ್ಸ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 175 (ಆದರ್ಶ್ ಪ್ರಜ್ವಲ್ 43, ಆರ್.ಸ್ಮರಣ್ 40, ಎಸ್.ಶರತ್ ಔಟಾಗದೆ 22, ಕ್ರಾಂತಿ ಕುಮಾರ್ 17ಕ್ಕೆ 3) **ಶಿವಮೊಗ್ಗ ಲಯನ್ಸ್** 19.5 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 179 (ಶ್ರೇಯಸ್ ಗೋಪಾಲ್ 52, ಅಭಿನವ್ ಮನೋಹರ್ 28, ಎಸ್.ಶಿವರಾಜ್ ಔಟಾಗದೆ 27, ಎಚ್.ಎಸ್.ಶರತ್ ಔಟಾಗದೆ 31, ಅಭಿಲಾಷ್ ಶೆಟ್ಟಿ 45ಕ್ಕೆ 2, ವೈಶಾಖ್ ವಿಜಯಕುಮಾರ್ 25ಕ್ಕೆ 2) **ಫಲಿತಾಂಶ:** ಶಿವಮೊಗ್ಗ ಲಯನ್ಸ್‌ಗೆ 3 ವಿಕೆಟ್ ಗೆಲುವು

ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 215 (ಮೊಹಮ್ಮದ್ ತಾಹಾ 52, ಕೆ.ಶ್ರೀಜಿತ್ 52, ಮನೀಷ್ ಪಾಂಡೆ ಔಟಾಗದೆ 69, ಪ್ರವೀಣ್ ದುಬೆ ಔಟಾಗದೆ 18, ಕೆ.ಗೌತಮ್ 36ಕ್ಕೆ 1, ಪಾರಸ್ ಆರ್ಯ 27ಕ್ಕೆ 1) **ಮಂಗಳೂರು ಡ್ರಾಗನ್ಸ್** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 152 (ಬಿ.ಆರ್.ಶರತ್ 38, ಕೆ.ಸಿದ್ಧಾರ್ಥ್ ಔಟಾಗದೆ 48, ನೇಥನ್ ಡಿ'ಮೆಲೊ 23ಕ್ಕೆ 3, ಪ್ರವೀಣ್ ದುಬೆ 13ಕ್ಕೆ 2) **ಫಲಿತಾಂಶ:** ಹುಬ್ಬಳ್ಳಿ ಟೈಗರ್ಸ್‌ಗೆ 63 ರನ್ ಗೆಲುವು

ಇಂದಿನ ಪಂದ್ಯಗಳು
ಶಿವಮೊಗ್ಗ ಲಯನ್ಸ್– ಮೈಸೂರು ವಾರಿಯರ್ಸ್ (ಮಧ್ಯಾಹ್ನ 1)
ಮಂಗಳೂರು ಡ್ರಾಗನ್ಸ್– ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ 5.30)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್

ಈಜು: ಧೀನಿಧಿ, ಇಶಾನ್ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಧೀನಿಧಿ ದೇಸಿಂಗು ಮತ್ತು ಇಶಾನ್ ಮೆಹ್ರಾ ಅವರು ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಜಯಿಸಿದರು.

ಗುರುವಾರ ನಡೆದ ಬಾಲಕಿಯರ 'ಗುಂಪು–2'ರ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಧೀನಿಧಿ 57.67 ಸೆ.ಗಳಲ್ಲಿ ಗುರಿ ತಲುಪಿದರು. ಮಾನಾ ಪಟೇಲ್ (59.12 ಸೆ.) ಅವರು 2014 ರಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು ಮುರಿದರು.

ಬಾಲಕರ 'ಗುಂಪು–2'ರ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯನ್ನು ಇಶಾನ್, 1 ನಿ. 0.64 ಸೆ.ಗಳಲ್ಲಿ ಕ್ರಮಿಸಿ ಅಗ್ರಸ್ಥಾನ ಪಡೆದರು. ಸುಹಾಸ್ ಪ್ರೀತಂ (1 ನಿ. 1.29 ಸೆ.) ಕಳೆದ ವರ್ಷ ನಿರ್ಮಿಸಿದ್ದ ದಾಖಲೆಯನ್ನು ಮೀರಿ ನಿಂತರು.

ಕರ್ನಾಟಕದ ಸ್ಪರ್ಧಿಗಳು ಎರಡನೇ ದಿನವೂ ಗಮನ ಸೆಳೆದರು. ಬಾಲಕರ 'ಗುಂಪು–1' ರಲ್ಲಿ ಎಸ್.ದರ್ಶನ್ (1,500 ಮೀ.ಫ್ರೀಸ್ಟೈಲ್) ಅವರು ಬೆಳ್ಳಿ ಗೆದ್ದರೆ, ಆಕಾಶ್ ಮಣಿ (100 ಮೀ. ಬ್ಯಾಕ್‌ಸ್ಟ್ರೋಕ್) ಮತ್ತು ರಿಷಭ್ ಸಿಂಗ್ (50 ಮೀ. ಬಟರ್‌ಫ್ಲೈ) ಅವರು ಕಂಚು ಗೆದ್ದುಕೊಂಡರು.

ಹರಿಕಾರ್ತಿಕ್ ವೇಲು ಅವರು 'ಗುಂಪು–2'ರ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ (27.58 ಸೆ.) ಚಿನ್ನ ಜಯಿಸಿದರು. ಪೃಥ್ವಿರಾಜ್ ಮೆನನ್ (400 ಮೀ. ಫ್ರೀಸ್ಟೈಲ್) ಅವರು ಕಂಚು ಹಾಗೂ ವೇದಾಂತ ವೆಂಕಟ (100 ಮೀ. ಬ್ಯಾಕ್‌ಸ್ಟ್ರೋಕ್) ಬೆಳ್ಳಿ ಗೆದ್ದುಕೊಂಡರು.


ಧೀನಿಧಿ ದೇಸಿಂಗು


ಇಶಾನ್ ಮೆಹ್ರಾ

'ಗುಂಪು–3' ರಲ್ಲಿ ಜಸ್ ಸಿಂಗ್ ಅವರು 100 ಮೀ. ಫ್ರೀಸ್ಟೈಲ್‌ನಲ್ಲಿ ಚಿನ್ನ (1 ನಿ. 04.61 ಸೆ.) ಹಾಗೂ ಚಕ್ಷು ಗೌಡ 200 ಮೀ. ಫ್ರೀಸ್ಟೈಲ್‌ನಲ್ಲಿ ಬೆಳ್ಳಿ ತಮ್ಮದಾಗಿಸಿಕೊಂಡರು.

ಬಾಲಕಿಯರ 'ಗುಂಪು–1' ರಲ್ಲಿ ಎಸ್.ರುಜುಲಾ ಅವರು 100 ಮೀ. ಫ್ರೀಸ್ಟೈಲ್‌ನಲ್ಲಿ ಚಿನ್ನ (59.67 ಸೆ.) ಹಾಗೂ ಶಾಲಿನಿ ಆರ್.ದೀಕ್ಷಿತ್ ಬೆಳ್ಳಿ ಗೆದ್ದರು. 200 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಎಸ್.ಲಕ್ಷ್ಯಾ (2 ನಿ. 40.96 ಸೆ.) ಮತ್ತು ಲಿನೇಶಾ ಅನಿಲ್‌ಕುಮಾರ್ (2 ನಿ. 41.63 ಸೆ.) ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಗಳಿಸಿದರು.

'ಗುಂಪು–2'ರ 200 ಮೀ. ಫ್ರೀಸ್ಟೈಲ್‌ನಲ್ಲಿ ತಾನ್ಯಾ ಷಡಾಕ್ಷರಿ (2 ನಿ. 44.21 ಸೆ.) ಮತ್ತು ಮಿಹಿತಾ ದತ್ತಾ ಅವರು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದರು. 100 ಮೀ. ಫ್ರೀಸ್ಟೈಲ್‌ನಲ್ಲಿ ಚಾರಣಿ ತುಮು ಅವರಿಗೆ ಬೆಳ್ಳಿ ಒಲಿಯಿತು.

ಫುಟ್‌ಬಾಲ್: ಡ್ರಾ ಸಾಧಿಸಿದ ಬಿಯುಎಫ್‌ಸಿ

ಬೆಂಗಳೂರು: ಬೆಂಗಳೂರು ಯುನೈಟೆಡ್ ಫುಟ್‌ಬಾಲ್ ಕ್ಲಬ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–2ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ತಂಡದೊಂದಿಗೆ ಡ್ರಾ ಸಾಧಿಸಿತು.

ಬಿಯುಎಫ್‌ಸಿಯ ಪ್ರಾಣೇಂದ್ರ ಸಿಂಗ್ ಠಾಕೂರ್ (2ನೇ), ನೌರೋಬಾಮ್ ಪ್ರೇಮ್‌ಜಿತ್ ಸಿಂಗ್ (45ನೇ) ಗೋಲು ದಾಖಲಿಸಿದರು. ಸ್ಟೂಡೆಂಟ್ಸ್ ಯೂನಿಯನ್‌ನ ಆದಿತ್ಯ ಪ್ರತಾಪ್ ಸಿಂಗ್ (69ನೇ), ಪ್ರತೀಕ್ ಸ್ವಾಮಿ (86ನೇ) ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್.ಸಿ ತಂಡವು 2–2ರಿಂದ ಕೊಡಗು ಎಫ್.ಸಿ ತಂಡದೊಂದಿಗೆ ಡ್ರಾ ಸಾಧಿಸಿತು. ರೂಟ್ಸ್ ತಂಡದ ಪಿ. ಶಿಬಿನ್ (18ನೇ), ಗಾಡ್ವಿನ್ ಜಾನ್ಸನ್ (35ನೇ) ಗೋಲು ದಾಖಲಿಸಿದರು. ಶ್ಲೋಕ್ ತಿವಾರಿ (74 ಮತ್ತು 86ನೇ) 2 ಬಾರಿ ಚೆಂಡನ್ನು ಗುರಿ ಸೇರಿಸಿ, ಕೊಡಗು ತಂಡದ ಗೋಲನ್ನು ಸಮಬಲಗೊಳಿಸಿದರು.